ಹಿಂದೂಸ್ಥಾನದ

ಕಿರುಗತೆಗಳು

(ದಿ ಗೋಲ್ಡನ್ ಟ್ರೆಷರಿ ಆಫ್ ಇಂಡಿಯನ್ ಟೇಲ್ಸ್)

ಅನುವಾದಕರು

ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ. ಎ.

ಪ್ರಕಾಶಕರು :

ಎಸ್. ಎನ್. ಬುಕ್ ಡಿಪೋ,

ಕೆಟ್ ಬೆಂಗಳೂರು-2

ಹಿಂದೂಸ್ಥಾನದ

ಕಿರುಗತೆಗಳು

(ದಿ ಗೋಲ್ಡನ್ ಟ್ರೆಷರಿ ಆಫ್ ಇಂಡಿಯನ್ ಟೇಲ್ಸ್)

ಅನುವಾದಕರು

ಬಿ. ಎಸ್. ರಾಮಸ್ವಾಮಿ ಅಯ್ಯಂಗಾರ್, ಬಿ. ಎ

ಪ್ರಕಾಶಕರು:

ಎಸ್. ಎಸ್. ಎನ್. ಬುಕ್ ಡಿಪೋ

ಸಿಟಿ ಮಾರ್ಕೆಟ್ ಬೆಂಗಳೂರು-2

ಬೆಲೆ: ಒಂದು ರೂಪಾಯಿ ಇಪ್ಪತ್ತೈದು ನಯೇಪೈಸೆ

ಮುದ್ರಕರು :
ಶ್ರೀ ಗಜಲಕ್ಷ್ಮಿ ಪ್ರೆಸ್, ಬೆಂಗಳೂರು ೨.

ಮುನ್ನುಡಿ

ನಮ್ಮ ಭಾರತ ನಾಡು ಕಥೆಗಳಿಗೆ ಒಂದು ದೊಡ್ಡ ಕಣಜವಿದ್ದಂತೆ. ಪುರಾಣಗಳಿಂದ, ಇತಿಹಾಸದಿಂದ, ಚರಿತ್ರೆಯಿಂದ, ಜನಪದ ಸಾಹಿತ್ಯದಿಂದ ಎಷ್ಟೋ ಕಥೆಗಳು ಈಗ ಪ್ರಚಾರದಲ್ಲಿವೆ. ಇವುಗಳಲ್ಲದೆ ಇತರ ಸಾಮಾನ್ಯವಾದ ಕಲ್ಪನಾ ಕಥೆಗಳೂ, ಹಳ್ಳಿಗರ ಕಥೆಗಳೂ, ಕೌತುಕವನ್ನು ಹುಟ್ಟಿಸುವ ಹಲಕೆಲ ಕಥೆಗಳೂ ಸಹ ನಮ್ಮ ನಾಡಿನಲ್ಲಿ ರೂಢಿಯಾಗಿವೆ. ನಾಟಕ, ನೀಳ್ಗತೆ, ಕಾದಂಬರಿ, ಕವನ, ಇವೆಲ್ಲಕ್ಕಿಂತ ಮಕ್ಕಳ ಮನಸ್ಸಿನಲ್ಲಿ ಕಿರುಗತೆಗಳ ಮೇಲೆ ಮಮತೆಯು ಹೆಚ್ಚು ಎಂದರೆ ತಪ್ಪಾಗಲಾರದು. ಕಿರುಗತೆಗಳು ಇತ್ತೀಚಿಗೆ ಕನ್ನಡದಲ್ಲಿ ಹೆಚ್ಚುಹೆಚ್ಚಾಗಿ ಪ್ರಚುರವಾಗುತ್ತಿದ್ದರೂ ಇತರ ಭಾಷೆಗಳಲ್ಲಿರುವಷ್ಟು ಇಲ್ಲಿ ಇಲ್ಲವೆನ್ನಬಹುದು.

ಈ ಎಲ್ಲ ದೃಷ್ಟಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು 'ಹಿಂದೂಸ್ಥಾನದ ಕಿರುಗತೆಗಳು' ಎಂಬ ಕಥಾಸಂಗ್ರಹವನ್ನು ಕನ್ನಡದಲ್ಲಿ ಪ್ರಚಾರ ಮಾಡಲಾಗಿದೆ. ಈ ಕಥೆಗಳ ಮೂಲ ಸಂಗ್ರಹಗಾರರು ಶ್ರೀ ಆರ್ಥರ್ ಡಂಕನ್, ಎಂ.ಎ. ಅವರು. ಇವರು ಈ ಕಥೆಗಳನ್ನು ಇಂಗ್ಲೀಷು ಭಾಷೆಯಲ್ಲಿ 'ದಿ ಗೋಲ್ಡನ್ ಟ್ರೆಷರಿ ಆಫ್ ಇಂಡಿಯನ್ ಟೇಲ್ಸ್' ಎಂಬ ಹೆಸರಿನಿಂದ ಬರೆದಿದ್ದಾರೆ. ಇಂಗ್ಲೀಷಿನಲ್ಲಿರುವ ಈ ಕಥೆಗಳನ್ನು [illegible] ಬಿ. ಎಸ್. ರಾಮಸ್ವಾಮಯ್ಯಂಗಾರ್, ಬಿ. ಎ. ಅವರು ಶ್ರೀ ಕೆ. ವಿ. ದಾಸಪ್ಪನವರಿಗೆ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ. ನಾನು ಶ್ರೀ ಕೆ. ವಿ. ದಾಸಪ್ಪನವರಿಂದ ಈ ಕಥೆಗಳ ಪ್ರಕಟಣೆಯ ಹಕ್ಕನ್ನು ಪಡೆದು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದೇನೆ. ಇವರಿಬ್ಬರಿಗೂ ನಾನು ಚಿರಋಣಿ.

ಓದುಗರ ಮನಸ್ಸಿನ ಮೇಲೆ ಸತ್ಪರಿಣಾಮವನ್ನು ಉಂಟು ಮಾಡುವ ಈ ಕಥೆಗಳನ್ನು ಸಕಲರೂ ಓದಿ ಪ್ರೋತ್ಸಾಹವನ್ನು ನೀಡಿ ಮುಂದಿನ ಸದ್ಗ್ರಂಥಗಳ ಪ್ರಕಟನೆಗೆ ನೆರವಾಗಬೇಕೆಂದು ಬೇಡಿಕೊಳ್ಳುತ್ತೇನೆ.

ಪ್ರಕಾಶಕ

31-10-57

ವಿಷಯಾನುಕ್ರಮಣಿಕೆ

ಹಿಂದೂಸ್ಥಾನದ ಕಿರುಗತೆಗಳು

೧. ಯುಧಿಷ್ಠಿರನೂ ನಾಯಿಯೂ

ಕುರುಕ್ಷೇತ್ರದ ಮಹಾಯುದ್ಧವು ಕೊನೆಗೊಳ್ಳುವ ಕಾಲವದು ಘೋರ ಸಮರವು ಹದಿನೆಂಟು ದಿನಗಳು ಎಡೆಬಿಡದೆ ಹುರುಪಿನಿಂದ ಾಗಿದ್ದಿತು. ಲೋಕಕ್ಕೆ ಕೌತುಕವನ್ನುಂಟುಮಾಡಿದ ಕುರುಪಾಂಡವರ ಮರವು ಅತ್ಯಂತ ಉಗ್ರವಾಗಿಯೂ ಸಾಹಸಭರಿತವಾಗಿಯೂ ಇದ್ದಿತು ಸಮ ಶ್ರಮ ಶಕ್ತಿ, ಸಾಹಸೋತ್ಸಾಹಗಳಿಂದ—ಶ್ರೀ ಕೃಷ್ಣಪರಮಾತ್ಮನ ಾನುಗ್ರಹದಿಂದ—ಕಟ್ಟಕಡೆಯಲ್ಲಿ ಕೌರವರ ಅಪಾರ ಸೇನೆಯನ್ನು ಸದೆ ಡಿದು, ಕೊನೆಗುಳಿದ ದುರ್ಯೋಧನನನ್ನು ಕೊಂದು, ಪಾಂಡವರು ಜಯ ಪತಾಕೆಯನ್ನು ಹಾರಿಸಿದರು. ಆದರೆ ಯುದ್ಧದಲ್ಲಿ ಜಯಶಾಲಿ ಾದ ಅವರ ಮನಸ್ಸಿಗೆ ನೆಮ್ಮದಿಯುಂಟಾಗಲಿಲ್ಲ.

ಕುರು ಪಾಂಡವರು ಅಣ್ಣತಮ್ಮಂದಿರ ಮಕ್ಕಳು. ಅವರು ಅನ್ಯೋನ್ಯ ಶ್ವಾಸದಿಂದ ಬಾಳಬೇಕೆಂದಿದ್ದರೆ ಅವರಿಗಾವ ತೆರನಾದ ಕೊರತೆಯೂ ರಲಿಲ್ಲ. ಪಾಂಡವರೇನೋ ಸಹೃದಯರು; ಸಹೋದರ ವಾತ್ಸಲ್ಯಪೂರ್ಣರು ಷ್ಟಮಿತ್ರ ಬಂಧುಗಳಲ್ಲಿ ಗೌರವಾದರಗಳನ್ನು ತಾಳಿದವರು. ಆದರೆ ುರ್ಯೋಧನನೂ ಅವನ ನೂರುಮಂದಿ ದುಷ್ಟ ಸಹೋದರರೂ ಜ್ಞಾತಿ ಗಳನ್ನು ಸುಮ್ಮನೆ ಇರಗೊಡಿಸಲಿಲ್ಲ. ಪಂಚಪಾಂಡವರಲ್ಲಿ ಅವರು ಅಳವಿಗೆ ಿಂಚಿದ ಅಸೂಯೆಗೊಂಡರು. ಪಾಂಡುಪುತ್ರರ ಸುಗುಣಗಳನ್ನು ಕಂಡು ್ರಜೆಗಳು ಅವರನ್ನು ಅಖಂಡವಾಗಿ ಪ್ರೀತಿಸಿ ಪುರಸ್ಕರಿಸುತ್ತಿದ್ದರು. ಇದನ್ನು ಂಡು ದುರ್ಯೋಧನಾದಿಗಳಿಗೆ ಸಹಿಸಲಿಲ್ಲ. ಸರಳ ಸ್ವಭಾವಿಗಳೂ, ದೈವ ಕ್ತರೂ, ಧರ್ಮಾವಲಂಬಿಗಳೂ ಆದ ಪಾಂಡವರ ಮೇಲೆ ಧೃತರಾಷ್ಟ್ರಪುತ್ರರು

ಎಷ್ಟೋ ಒಳಸಂಚುಗಳನ್ನು ನಡೆಸಿದರು. ಅವರನ್ನು ಬಗೆಬಗೆಯ ಕಷ್ಟಗಳಿ
ಗುರಿಮಾಡಿ ಹಿಗ್ಗಿದರು. ಅವರ ಅಳಿವನ್ನು ಕಣ್ಣಾರೆ ಕಂಡು ಆನಂದಿಸಬೇಕೆಂದ
ಆಶೆಗೊಂಡರು.

ತನ್ನ ದಾಯಾದಿಗಳನ್ನು ಹಿಂಸಿಸಿ ನಾಶಗೊಳಿಸಲು ದುರ್ಯೋಧನ
ತನ್ನ ಕೈಲಾದ ಸಾಹಸವೆಲ್ಲವನ್ನೂ ಮಾಡಿದನು. ಅವನೂ ಅವನ ತಮ್ಮಂದಿ
ಒಮ್ಮೆ ಅರಗಿನ ಮನೆಯಲ್ಲಿ ಪಾಂಡುಪುತ್ರರನ್ನು ಜೀವಸಹಿತ ಸುಟ್ಟುಬಿ
ಬೇಕೆಂದು ಪ್ರಯತ್ನಿಸಿದರು. ಮತ್ತೊಮ್ಮೆ ಪಗಡೆಯಾಟದಲ್ಲಿ ಪಾಂಡವರ
ಸೋಲಿಸಿ, ಕೃತ್ರಿಮದಿಂದ ಅವರನ್ನು ಹನ್ನೆರಡು ವರ್ಷಗಳ ಕಾಲ ವನವಾಸ
ಅಟ್ಟಿದರು. ವನವಾಸವೂ ಅಜ್ಞಾತವಾಸವೂ ಮುಗಿದ ನಂತರ ಪಾಂಡ
ತಮ್ಮ ರಾಜಧಾನಿಗೆ ಹಿಂತಿರುಗಿ ತಮ್ಮ ರಾಜ್ಯವನ್ನು ಮತ್ತೆ ತಮಗೇ ತಿರು
ಕೊಡಬೇಕೆಂದು ದುರ್ಯೋಧನನನ್ನು ಕೇಳಿಕೊಂಡರು. ಅವರಿಗೆ ನ್ಯಾ
ವಾಗಿ ಸಲ್ಲಬೇಕಾದ ಅರ್ಧ ರಾಜ್ಯವನ್ನು ಕೊಡುವುದಕ್ಕಾಗುವುದಿಲ್ಲವೆ
ದುರ್ಯೋಧನನು ಖಡಾಖಂಡಿತವಾಗಿ ಹೇಳಿ ಬಿಟ್ಟನು. ಅಷ್ಟೇಕೆ? ಅವರ
ವಾಸಕ್ಕಾಗಿ ಒಂದು ಸಣ್ಣ ಮನೆಯನ್ನೂ ಸಹ ಕೊಡಲಾರೆನೆಂದು
ಬಿಟ್ಟನು. ಶ್ರೀ ಕೃಷ್ಣನು ಮೊದಲಾಗಿ ರಾಜಕಾರಣ ಪ್ರಮುಖರು ನ
ಸಿದ ಎಲ್ಲ ಸಂಧಾನಗಳೂ ನಿಷ್ಫಲವಾದವು. ಕಟ್ಟಕಡೆಯಲ್ಲಿ
ಕ್ಷೇತ್ರ ಸಮರಾಂಗಣದಲ್ಲಿ ಇತಿಹಾಸ ಪ್ರಸಿದ್ಧವಾದ ಮಹಾಭಾರತದ ಯು
ಪ್ರಾರಂಭವಾಯಿತು.

ಪವಿತ್ರ ಕುರುಕ್ಷೇತ್ರದಲ್ಲಿ ಇರುಪಂಗಡಗಳ ಸೈನ್ಯಗಳೂ
ನ್ನೊಂದು ಎದುರಿಸಿದವು. ಭಾರತವರ್ಷದ ಎಲ್ಲ ರಾಜಾಧಿರಾಜರೂ ಆ
ಯುದ್ಧದಲ್ಲಿ ಪಾತ್ರವಹಿಸಿದರು. ಅವರು ಒಂದಲ್ಲ ಒಂದು ಪಂ
ಕಲೆತುಕೊಂಡರು. ಕುರುಪಾಂಡವರ ಪಿತಾಮಹ ಭೀಷ್ಮ, ಧನುರ್ವಿ
ಆಚಾರ್ಯನಾದ ದ್ರೋಣ, ಪಾಂಡವರ ಅಗ್ರಜನಾದ ಕರ್ಣ ಇವರ
ಲಾದ ವೀರಾಧಿವೀರರು ದುರ್ಯೋಧನನ ಪಕ್ಷವನ್ನು ವಹಿಸಿದರು. ಪ
ಸೈನ್ಯವು ಕೌರವ ಸೈನ್ಯಕ್ಕಿಂತ ಕಿರಿದಾಗಿತ್ತು. ಆದರೆ ಪಾಂಡವರ
ಒಳಿತಾದುದರಿಂದ ಸಾಕ್ಷಾತ್ ಅವತಾರ ಪುರುಷನಾದ ಶ್ರೀ ಕೃಷ್ಣಪರ

ಾಂಡವರ ಪಕ್ಷವನ್ನು ವಹಿಸಿದನು. ಅಷ್ಟುಮಾತ್ರವಲ್ಲದೆ ಅವರಿಗೆ ಜಯವಾಗ ಂದೂ ಹರಸಿದನು.

ಕುರುಕ್ಷೇತ್ರದ ಭೀಕರ ಸಮರವು ಹದಿನೆಂಟು ದಿನಗಳು ನಡೆಯಿತು. ನೇಕ ತೊಂದರೆಗಳನ್ನೂ ಆಪತ್ತು ಅಡಚಣೆಗಳನ್ನೂ ಎದುರಿಸಿ ಪಾಂಡವರು ೋರಾಡಬೇಕಾಯಿತು. ಇರುಪಕ್ಷಗಳಲ್ಲಿಯು ಅನೇಕಾನೇಕ ವೀರರೂ ಸಂಖ್ಯಾತ ಯೋಧರೂ ಸಮರಾಂಗಣದಲ್ಲಿ ಮಡಿದರು. ದುರ್ಯೋಧನನೂ ವನ ದುಷ್ಟ ಅನುಜರೂ ಯುದ್ಧರಂಗದಲ್ಲಿ ಮಡಿದಳಿದರು. ಪಾಂಡವರಿಗೇ ಜಯವಾಯಿತು.

ಆದರೆ ಈ ವಿಜಯದ ಪರಿಣಾಮವೇನು? ರಣರಂಗದಲ್ಲಿ ಮೃತರಾದವರು ಧವೆಯರ, ಬಂಧುಗಳನ್ನು ಕಳೆದುಕೊಂಡು ಸಂಕಟಕ್ಕೀಡಾದ ಅಬಲೆಯರ, ತೃವಿಯೋಗದಿಂದ ಅನಾಥರಾದ ಬಾಲಕರ ಸಂಕಟವನ್ನು ವರ್ಣಿಸಬಲ್ಲವ ರು? ಜನಕನನ್ನು, ಒಡಹುಟ್ಟಿದವರನ್ನು, ಸಮೀಪ ಬಂಧುಗಳನ್ನು ರಣ ೇತ್ರದಲ್ಲಿ ಕಳೆದುಕೊಂಡವರ ಯಾತನೆಯು ಅಪಾರವಾಯಿತು.

ಭಾರತವರ್ಷದ ಚಕ್ರವರ್ತಿಯೆಂದು ಯುಧಿಷ್ಠಿರನಿಗೆ ಪಟ್ಟಾಭಿಷೇಕ ಾಯಿತು ಅವನೂ ಅವನ ಸಹೋದರರಾದ ಭೀಮಾರ್ಜುನ ನಕುಲ ಸಹ ೇವರೂ ಪ್ರಜೆಗಳನ್ನು ದಯೆಯಿಂದಲೂ ವಿವೇಚನೆಯಿಂದಲೂ ಆಳತೊಡಗಿ ರು ದೇಶವು ಸುಖ, ಶಾಂತಿ, ಸಂಪತ್ತುಗಳಿಂದ ತುಂಬಿ ತುಳುಕಾಡತೊಡ ತು. ಆದರೆ ತಮಗೆ ವೃದ್ಧಾಪ್ಯವು ಪ್ರಾಪ್ತವಾದುದರಿಂದ ಇನ್ನು ಮುಂದೆ ಾಜ್ಯಭಾರ ಮಾಡಿಕೊಂಡಿರಬೇಕೆಂಬ ಅಭಿಲಾಷೆಯು ಪಾಂಡವರಿಗೆ ಇಲ್ಲದಂತಾ ಯಿತು. ತಮ್ಮ ಪ್ರಾಣಸಖನಾದ ಕೃಷ್ಣ ಪರಮಾತ್ಮನು ದ್ವಾರಕೆಯಲ್ಲಿ ಸಮಾಧಿ ೊಂದಿದನೆಂದು ಕೇಳಿದಮೇಲಂತೂ ಇನ್ನೆಷ್ಟು ಕಾಲವೂ ಬದುಕಿರಬಾರದೆಂದು ವರಿಗನ್ನಿಸಿತು.

ರಾಜ್ಯವನ್ನು ಪರಿತ್ಯಜಿಸಿ, ಅರಣ್ಯವನ್ನು ಹೊಕ್ಕು, ಗೆಡ್ಡೆ ಗೆಣಸುಗಳನ್ನು ನ್ನುತ್ತ ಪರಮಾತ್ಮನ ಧ್ಯಾನದಲ್ಲಿ ತಮಗುಳಿದ ಜೀವಿತಕಾಲವನ್ನು ಕಳೆದು ಡಬೇಕೆಂದು ಪಾಂಡವರು ನಿರ್ಧರಿಸಿಕೊಂಡರು ಅವರು ಅರ್ಜುನನ ೊಮ್ಮಗನಾದ ಯುವಕ ಪರೀಕ್ಷಿತ್ತುವನ್ನು ಹಸ್ತಿನಾಪುರದ ಸಿಂಹಾಸನದಲ್ಲಿ

ಕುಳ್ಳಿರಿಸಿ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿದರು. ಅನಂತರ, ಪಾಂಡವಸಹೋದರರು ವ್ಯಾಕುಲವನ್ನು ತಮ್ಮ ಚಿತ್ತದಿಂದ ತೊಡೆದುಹಾಕಿ ಹಸ್ತಿನಾವತಿಯನ್ನು ಬಿಟ್ಟು ಅರಣ್ಯಾಭಿಮುಖವಾಗಿ ನಡೆದರು. ಅಮೂಲ್ಯ ರತ್ನಾಭರಣಭರಿತ ದಿವ್ಯ ವಸ್ತ್ರಾಲಂಕಾರಗಳನ್ನು ತ್ಯಜಿಸಿ ನಾರುಮಡಿಗಳನ್ನು ತೊಟ್ಟು, ಪ್ರಫುಲ್ಲವದನರಾಗಿ, ಶಾಂತ ಮನಸ್ಕರಾಗಿ, ಯುಧಿಷ್ಠಿರ ಭೀಮಾ ರ್ಜುನ ನಕುಲ ಸಹದೇವರು, ಪತಿವ್ರತಾಶಿರೋಮಣಿಯಾದ ದ್ರೌಪದಿ, ಸ್ವಾಮಿಭಕ್ತಿಯಿಂದ ತಮ್ಮನ್ನು ಹಿಂಬಾಲಿಸಿದ ನಾಯಿ ಹೀಗೆ ಏಳುಮಂದಿಯೂ ಒಂದು ಪರಿವಾರವಾಗಿ ಅಡವಿಯನ್ನು ಕುರಿತು ತೆರಳಿದರು ಅವರ ಪ್ರಯಾಣವು ಬಹುದೂರ ಸಾಗಿತು. ಪ್ರಜೆಗಳು ಅವರ ವಿಯೋಗವನ್ನು ತಾಳಲಾರದೆ ಹೋದರು ಕೃತಜ್ಞತೆಯ ಕಾಲುವೆಯೋ ಎಂಬಂತೆ ಕಣ್ಣೀರನ್ನು ಯಥೇಚ್ಛ ವಾಗಿ ಹರಿಸುತ್ತ ಮನಸ್ಸಿಲ್ಲದೆ ಅವರು ಪಾಂಡವರನ್ನು ಬೀಳ್ಕೊಟ್ಟರು.

೨

ರಾಜಸಹೋದರರು ಅನೇಕಾನೇಕ ದೇಶಗಳನ್ನು ಹಾದು, ನದಿಗಳನ್ನು ದಾಟಿ, ಬೆಟ್ಟಗುಡ್ಡಗಳಲ್ಲಿ ಹತ್ತಿ ಇಳಿಯುತ್ತ ದಾರಿ ನಡೆದರು. ಸತ್ಯಸಂಧನಾದ ಯುಧಿಷ್ಠಿರನು ಎಲ್ಲರಿಗಿಂತಲೂ ಮೊದಲು ನಡೆದನು. ಬಲಶಾಲಿಯಾದ ಭೀಮನು ಅವನ ಹಿಂದೆಯೇ ನಡೆದನು; ವೀರ ಧನಂಜಯನು ಭೀಮನಿಗೆ ಬೆಂಬಲವಾಗಿ ನಡೆದನು; ಅರ್ಜುನನ ಹಿಂದೆ ಮಾದ್ರೀಸುತರಾದ ನಕುಲ ಸಹದೇವ ಸಹೋ ದರರು ನಡೆದರು ಕಟ್ಟಕಡೆಯಲ್ಲಿ ಕೋಮಲಾಂಗಿಯೂ ಕಮಲಾಯತಾಕ್ಷಿಯೂ ಆದ ವೀರಪತ್ನಿ ದ್ರೌಪದಿಯು ಹಿಂಬಾಲಿಸಿದಳು. ಎತ್ತರವಾದ ಬೇಟೆನಾಯಿಯು ಇವರಾರು ಜನರಿಗೂ ಕಾವಲೋ ಎಂಬಂತೆ ಎಲ್ಲರ ಹಿಂದೆ ನಡೆಯುತ್ತಿದ್ದಿತು.

ದಾರಿಯುದ್ದಕ್ಕೂ ಯುಧಿಷ್ಠಿರಾದಿಗಳು ಅನೇಕ ಪುಣ್ಯಕ್ಷೇತ್ರಗಳನ್ನೂ ಪವಿತ್ರ ದೇವಾಲಯಗಳನ್ನೂ ಸಂದರ್ಶಿಸಿದರು. ಪೂರ್ವ, ದಕ್ಷಿಣ, ಪಶ್ಚಿಮ ದಿಕ್ಕುಗಳಲ್ಲಿ ದಿವ್ಯಕ್ಷೇತ್ರಗಳಲ್ಲಿ ತಮ್ಮ ಧನ್ಯವಾದಗಳನ್ನು ಅರ್ಪಿಸುತ್ತ ಯಾತ್ರಾರ್ಥಿಗಳು ಕಟ್ಟಕಡೆಯಲ್ಲಿ ಉತ್ತರಾಭಿಮುಖವಾಗಿ ಹೊರಟ ಮುಂದೆ ಮುಂದೆ ಅವರು ಬಹುದೂರ ನಡೆದು ದಾರಿಸಾಗಿದರು. ಅವ

ಆಯಾಸವು ತಲೆದೋರಿದಾಗ ಎಲ್ಲಿಯಾದರೂ ಒಂದು ಕೊಳದ ಅಲ್ಲವೆ ಸರೋವರದ ಬಳಿ ವಿಶಾಲವಾದ ವೃಕ್ಷಚ್ಛಾಯೆಯಲ್ಲಿ ಕುಳಿತು ಅವರು ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ಅವರ ದೃಷ್ಟಿಯೆಲ್ಲವೂ ಸ್ವರ್ಗವನ್ನು ಸೇರಿಬಿಡಬೇಕೆಂಬದರಲ್ಲಿದ್ದಿತು.

ಬಹುಕಾಲ ಪ್ರಯಾಣಮಾಡಿದ ಮೇಲೆ, ಅನೇಕ ತಿಂಗಳುಗಳು ಕಳೆದ ನಂತರ ಅವರು (ಪರ್ವತರಾಜನಾದ) ಹಿಮಾಲಯದ ತಪ್ಪಲನ್ನು ತಲುಪಿದರು. ಸದಾ ಹಿಮದಿಂದ ಮುಚ್ಚಲ್ಪಟ್ಟಿದ್ದ ಹಿಮಾಲಯದ ಶಿಖರಗಳ ಗಗನವನ್ನು ಮುಟ್ಟುವಂತಿದ್ದವು. ಪಾಂಡು ಸಂತಾನದವರು ಹಿಮವತ್ಪರ್ವತದ ಉನ್ನತ ಪ್ರದೇಶಗಳನ್ನು ಮೆಲ್ಲಮೆಲ್ಲನೆ ಹತ್ತಿ — ತಮಗೆ ಕಂಡ ಒಂದು ವಿಶಾಲವಾದ ಮರಳುಕಾಡನ್ನು ದಾಟಿದರು. ಕಟ್ಟಕಡೆಯಲ್ಲಿ ಅವರು ಪವಿತ್ರವಾದ ಮೇರು ಶಿಖರದ ಬಳಿ ಬಂದು ಸೇರಿದರು.

ದಾರಿಯಲ್ಲಿ ಸಾಧ್ವಿ ದ್ರೌಪದಿಗೆ ಕಣ್ಣುಗಳೆಳೆದು, ಶರೀರದಲ್ಲಿ ಕಂಪವುಂಟಾಗಿ ಆಕೆಯು ಇನ್ನು ಮುಂದೆ ನಡೆಯಲು ಚೈತನ್ಯವಿಲ್ಲದೆ ಕೆಳಗುರುಳಿದಳು. ದ್ರೌಪದಿಯು ಚೈತನ್ಯಹೀನಳಾದುದನ್ನು ಕಂಡು ಭೀಮನ ಕೇಳಿದನು: "ಎಲೈ ಘನಾಢ್ಯ ಅಗ್ರಜನೆ! ಪತಿವ್ರತಾಶಿರೋಮಣಿಯಾದ ಈ ದ್ರೌಪದಿಯು ನಮ್ಮನ್ನು ಹಿಂಬಾಲಿಸಲು ಅಶಕ್ತಳಾದುದು ಹೇಗೆ? ಅದನ್ನು ವಿವರಿಸಿ ಹೇಳಬೇಕೆಂದು ಪ್ರಾರ್ಥಿಸುವೆನು. ಅವಳ ಜೀವಮಾನದಲ್ಲಿ ಅವಳು ಯಾವುದೊಂದು ಪಾಪಕಾರ್ಯವನ್ನೂ ಮಾಡಿದವಳೇ ಅಲ್ಲವಲ್ಲ!"

ಧರ್ಮನಿಷ್ಠನಾದ ಯುಧಿಷ್ಠಿರ ಮಹಾರಾಜನು ಭೀಮನಿಗೆ ಈ ರೀತಿ ಪ್ರತ್ಯುತ್ತರವಿತ್ತನು: "ಎಲೈ ಭೀಮನೇ! ನೀನು ಹೇಳುವುದು ನಿಜ; ಆದರೆ ಅವಳು ನಮ್ಮನ್ನೂ ಪರಮಾತ್ಮನನ್ನೂ ಪ್ರೀತಿಸುವುದಕ್ಕಿಂತ ಅತಿಶಯವಾಗಿ ನಮ್ಮ ಸಹೋದರನಾದ ಅರ್ಜುನನನ್ನು ಪ್ರೀತಿಸುತ್ತಿದ್ದಳು ಅವಳ ನಡತೆಯ ಪ್ರತಿಫಲವನ್ನು ಇಂದು ಅವಳು ಅನುಭವಿಸುತ್ತಿದ್ದಾಳಷ್ಟೆ" ಹೀಗೆಂದು ಹೇಳಿ ಹಿಂತಿರುಗಿ ನೋಡದೆ ಧರ್ಮಜನು ಮುಂದೆಮುಂದೆ ನಡೆಯ ಸಾಗಿದನು.

ಬಳಿಕ ಸಹದೇವನು ನೆಲಕ್ಕುರುಳಿದನು. ಭೀಮನು ಯುಧಿಷ್ಠಿರನನ್ನು ಕುರಿತು "ಇದಕ್ಕೇನು ಕಾರಣ ?" ಎಂದು ಪ್ರಾರ್ಥಿಸಿದನು ತನ್ನ ಜ್ಞಾನವು ಅಪಾರವಾದುದು ಎಂಬ ದುರಹಂಕಾರವು (ಮಮಕಾರವು) ಸಹ

ಜೀವಿಸಿದ್ದಿತು: ಎಂದು ಯುಧಿಷ್ಠಿರನು ಪ್ರತ್ಯುತ್ತರವಿತ್ತನು. ಅವನನ್ನು ಬಿಟ್ಟು ಇತರರು ಮುಂದೆ ನಡೆದರು. ಸ್ವಲ್ಪದೂರ ದಾರಿಸಾಗಿದ ನಂತರ ನಕುಲನು ಎಚ್ಚರ ತಪ್ಪಿ ಕೆಳಗೆ ಬಿದ್ದನು. "ತಾನು ಮನೋಹರ ಸುಂದರ ಸ್ವರೂಪವುಳ್ಳವನೆಂಬ ದುರಭಿಮಾನವು ನಕುಲನಲ್ಲಿದ್ದಿತು. ಆದುದರಿಂದಲೇ ಹೀಗಾಯಿತು" ಎಂದು ಯುಧಿಷ್ಠಿರನು ಉಳಿದ ತನ್ನ ಇಬ್ಬರು ತಮ್ಮಂದಿರಿಗೆ ವಿವರಿಸಿ ಹೇಳಿದನು.

ತನ್ನ ಇರುಸಹೋದರರೂ ನೆಲಕ್ಕುರುಳಿ ಮಡಿದುದನ್ನು ನೋಡಿ ತ್ರಿಲೋಕ ವೀರನಾದ ಧನಂಜಯನು ಚಿಂತಾಕ್ರಾಂತನಾಗಿ ತಾನೂ ನಿಶ್ಚೇಷ್ಟಿತನಾಗಿ ಕೆಳಕ್ಕುರುಳಿದನು. ಭೀಮನಿಗೆ ವ್ಯಸನವು ಉಕ್ಕಿ ಹರಿಯಿತು. ಶೋಕವನ್ನು ತಡೆಯಲಾರದೆ ಅವನು ಅರ್ಜುನನ ಬಳಿ ಕುಳಿತು ಅದರಿಂದ ಅವನ ಮೃತಶರೀರವನ್ನು ತಡವುತ್ತ "ಸದಾ ಸತ್ಯಪ್ರಿಯನೂ, ಧನವಂತನೂ ಆಗಿದ್ದ ನೀನು — ಹೇ ಅರ್ಜುನ! ವೀರಾಗ್ರಣಿ! ನನ್ನ ನಚ್ಚಿನ ಕಂದ! ನೀನು......ಯಾರ ಬಲವನ್ನು ಕೇಳಿ ಇಂದ್ರಾದಿ ದೇವತೆಗಳೂ ಥರಥರನೆ ನಡುಗುತ್ತಿದ್ದರೋ! ಅಂತಹ ಅಪ್ರತಿಮ ರಣಧುರೀಣನಾದ ನೀನು — ಹೀಗೆ ಹಾದಿಯಲ್ಲಿ ಮಡಿಯಬೇಕಾಗಿದ್ದಿತೆ?. ಹಾಯ್! ಹಾಯ್! ಸರ್ವನಾಶ!" ಎಂದು ದುಃಖಿತನಾಗಿ ಕಣ್ಣೀರಿನ ಕಾಲುವೆಯನ್ನು ಹರಿಸುತ್ತ ಕಂದನನ್ನು ಕಳೆದುಕೊಂಡ ತಾಯಂತೆ ಗಟ್ಟಿಯಾಗಿ ಪ್ರಲಾಪಿಸುತ್ತ ನೆಲದಲ್ಲಿ ಬಿದ್ದು ಹುಚ್ಚನಂತೆ ಹೊರಳಾಡಿದನು.

ಭ್ರಾತೃವಾತ್ಸಲ್ಯಭರಿತನಾದ ಭೀಮನು ಈ ತೆರನಾಗಿ ಶೋಕಾಕ್ರಾಂತನಾದುದನ್ನು ನೋಡಿ ಜ್ಞಾನಿಯಾದ ಯುಧಿಷ್ಠಿರನು ತಾನೂ ಶೋಕಾಂಬುಧಿಯಲ್ಲಿ ಮುಳುಗಿದ್ದರೂ ಭೀಮನನ್ನು ಹೀಗೆಂದು: ಸಂತೈಸತೊಡಗಿದನು "ವತ್ಸ! ಭೀಮ! ಒಂದೇ ದಿವಸದಲ್ಲಿ ವೈರಿಗಳೆಲ್ಲರನ್ನೂ ಸದೆಬಡಿದು ಅವರ ವಂಶವನ್ನು ಮೂಲೋತ್ಪಾಟನ ಮಾಡಿಬಿಡುವೆನು!" ಎಂದು ಅರ್ಜುನನು ಡಂಭದಿಂದ ನುಡಿದನು. ತನ್ನ ಶಪಥವನ್ನು ನೆರವೇರಿಸಲು ಅವನಿಂದ ಸಾಧ್ಯವೆನಿಸಿತೆ? ನಿಜವಾದ ವೀರನಿಗೆ ಇಂತಹ ಬೊಗಳೆಯು ಸರಿಯೆನಿಸದು. ತಮ್ಮ! ಅದಕ್ಕೆ ಪ್ರತಿಫಲವನ್ನು ಅರ್ಜು

ನನು ಈಗ ಅನುಭವಿಸುತ್ತಿರುವನು." ಹೀಗೆಂದು ನುಡಿದ ಮೇಲೆ ಧರ್ಮ ಜನೂ ಭೀಮನೂ ಅತ್ತಿತ್ತ ತಿರುಗಿ ನೋಡದೆ ಮುಂದೆ ನಡೆದರು.

ಈ ಸಲ ಭೀಮನ ಸರದಿ ಬಂದಿತು. ತನ್ನ ಅಂಗಾಂಗಗಳಲ್ಲಿ ಒಮ್ಮಿಂದೊಮ್ಮೆ ಉಂಟಾದ ಸೆಳೆತವನ್ನು ತಡೆಯಲಾರದೆ ಭೀಮನೂ ಭೂಮಿದೇವಿಯನ್ನು ಆಲಂಗಿಸಿ ನಿಶ್ಚೇಷ್ಟಿತನಾದನು. ಅವನನ್ನು ನೋಡಿ ಧರ್ಮ ಪುತ್ರನು "ನನ್ನ ಪ್ರಾಣಾಪ್ತನಾದ ಭೀಮ! ನನ್ನ ನೆಚ್ಚಿನ ಕಣಿಯೇ! ಪ್ರೇಮದ ಬಿಂಬವೇ! ಸಹೋದರ ರತ್ನವೆ! ಲೋಕೈಕ ವೀರನೆ! ಹಾಯ್! ನೀನೂ ಮಡಿದೆಯಾ! ನನಗುಳಿದಿದ್ದ ಒಬ್ಬನೇ ಸಹೋದರನು ನೀನು. ಹುಂ! ಇನ್ನು ಯಾರನ್ನು ಭೀಮ! ಭುಜಬಲಪರಾಕ್ರಮಿ ಭೀಮ! ಎಂದು ಕರೆಯಲಿ? ನಮ್ಮನ್ನು ಎಷ್ಟೆಷ್ಟು ಸಲ ಎಷ್ಟೆಷ್ಟು ಬಗೆಯ ಕಷ್ಟಗಳಿಂದ ಪಾರುಗಾಣಿಸಿದೆಯಪ್ಪ! ಹಾಯ್! ನಿನ್ನ ಅಸಮ ಪರಾಕ್ರಮವು ಇಂದಿಗೆ ಈ ರೀತಿಯಲ್ಲಿ ಪರ್ಯಾವಸಾನಗೊಂಡಿತೆ? ಹಾಯ್! ಭೀಮ! ಭೀಮ!! ಭೀಮ!!!" ಎಂದು ಮುಂತಾಗಿ ಶೋಕಕ್ಕೀಡಾದ ಧರ್ಮನಂದನನು ಅಲ್ಲೇ ಕುಳಿತುಬಿಟ್ಟನು ಬಳಿಕ ಅವನಿಗೆ ಜ್ಞಾನೋದಯವಾಯಿತು. ಆಗ ಅವನು ಮತ್ತೆ ತನ್ನಲ್ಲಿ ತಾನೇ ಆಲೋಚಿಸಿಕೊಂಡನೆಂತೆಂದರೆ: "ನನ್ನ ಪ್ರೇಮದ ಸಹೋದರ! ನಿನ್ನ ಕಾಲವು ಸನ್ನಿಹಿತವಾಯಿತು. ಪ್ರಾಪಂಚಿಕ ವಿಷಯಗಳಲ್ಲಿ ನಿನ್ನ ಮನಸ್ಸು ಲೀನವಾಗಿದ್ದಿತು. ಬಲಭರಿತವಾದ ನಿನ್ನ ಅಗಾಧ ಶರೀರವು ವಿಷಯ ಸುಖಗಳಿಗೆ ಆಶೆಗೊಂಡಷ್ಟು ನಿನ್ನ ಮನಸ್ಸು ಅತ್ಮವಿಚಾರಗಳ ಅರಿವಿಗಾಗಿ ಆತುರಗೊಳ್ಳಲಿಲ್ಲ. ನಿನ್ನ ಅವಗುಣಗಳು ಯತ್ಕಿಂಚಿತ್ತಾದವು. ಆದುದರಿಂದಲೇ ಸ್ವರ್ಗದ್ವಾರವನ್ನು ಇನ್ನೇನು ಸೇರಿಬಿಡಬಹುದು ಎನ್ನುವಷ್ಟರಲ್ಲಿ ನೀನು ಮೃತನಾದೆ."

ಹೀಗೆಂದು ಹೇಳುತ್ತ ಸತ್ಯಪ್ರಿಯನಾದ ಯುಧಿಷ್ಠಿರನು ಏಕಾಂಗಿಯಾಗಿ ಮುಂದೆ ನಡೆದನು ಸ್ವಾಮಿಭಕ್ತಿಯುಳ್ಳ ನಾಯಿಯೂ ಅವನನ್ನು ಹಿಂಬಾಲಿಸುತ್ತ ನಡೆಯಿತು. ಧರ್ಮಜನು ಇನ್ನೇನು ಮೇರುಪರ್ವತದ ತುತ್ತತುದಿಯನ್ನು ಮುಟ್ಟುವುದರಲ್ಲಿದ್ದನು. ಆದರೆ ಅವನಲ್ಲಿ ಅಜ್ಞಾನವು ಅಂಕುರಿಸಿತು; ಮನಸ್ಸಿನ ಶಾಂತಿಯು ಕಡಿಮೆಯಾಯಿತು. ದಿಗ್ಭ್ರಾಂತನಾಗಿ ಕ್ಷಣಕಾಲ ನಿಂತಲ್ಲಿ ತಟಸ್ಥನಾಗಿ ನಿಂತುಬಿಟ್ಟನು. ಬಳಿಕ ಏನನ್ನೋ ಯೋಚಿಸಿ

ಕೊಂಡು "ಅಷ್ಟು ದೂರ ನನ್ನೊಡನೆ ಬಂದ ಭೀಮನೊಬ್ಬನಾದರೂ ಕೈಲಾ... ಸಕ್ಕೆ ಕರೆದುಕೊಂಡು ಹೋಗಬಾರದೆ?—ಇಲ್ಲ ಇಲ್ಲ. ಭೀಮನ ಶವವನ್ನಾದರೂ... ಸಾಹಸಗಳನ್ನು ಮಾಡಿದ ಮಹಾಪುರುಷರುಗಳ ಸ್ವರ್ಗಕ್ಕಾಗಿ—ಅವನ ಶವವನ್ನು ಸ್ವರ್ಗದ ಬಾಗಿಲಿಗೆ ಹೊತ್ತುಕೊಂಡು ಹೋಗುವುದೇ ಸರಿ?" ಎನ್ನುತ್ತ ಧರ್ಮ... ಜನು ಮತ್ತೆ ಭೀಮನ ಶವದತ್ತ ಹಿಂತಿರುಗಿದನು.

ಭೀಮನ ಮೃತಶರೀರವನ್ನು ನೋಡಿ ಧರ್ಮನಂದನನ ಶೋಕವು ಈಗ ಒಂದಕ್ಕೆ ನೂರ್ಮಡಿಯಾಯಿತು. ಮೃತಶರೀರವನ್ನು ಒಮ್ಮೆ ಗಾಢವಾಗಿ ತಬ್ಬಿ ಎದೆಯುಕ್ಕಿದ ನೋವಿನಿಂದ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟನು. ಅರ್ಜುನ, ನಕುಲ, ಸಹದೇವ, ದ್ರೌಪದಿ ಇವರು ಮೃತರಾದಾಗ ಅವನು ಒಂದೂ ಹಿಂತಿರುಗಿ ನೋಡದೆ ಮುಂದೆ ನಡೆದಿದ್ದನು. ಅಷ್ಟರಲ್ಲಿ ಅದೇನೆಂದು ಸ್ವರ್ಗ... ವಾಕ್ಯ ಧರ್ಮನಂದನನು ಈಗ ಭೀಮನಿಗಾಗಿ ಬಿಕ್ಕಿಬಿಕ್ಕಿ ಅತ್ತುಬಿಟ್ಟನು... ಅವನು ಅವರಿಗಿಂತ ಅನ್ಯನಾಗಿದ್ದನೇ? ಇಲ್ಲ, ಅದಕ್ಕಾಗಿಯೇ ಅತ್ತನೇ?

ಅದೇ ಸಮಯಕ್ಕೆ ಸರಿಯಾಗಿ ಧರ್ಮನಂದನನ ದೃಷ್ಟಿಗೆ ಒಂದು ವಿಚಿತ್ರ ದೃಶ್ಯವು ಗೋಚರಿಸಿತು. ಮುಂದೆಲ್ಲ ಹೋಗುತ್ತಿದ್ದ ಕೈಕಾಲುಗಳು ಬಡಕಲಾಗಿದ್ದಂತ ಗಡಗಡನೆ ನಡುಗುತ್ತಿರುವ ಮುದುಕನೊಬ್ಬ... ತಲೆಕೆಳಗಾಗಿ ನಿಂತಿದ್ದ ಹೊನ್ನೆಮರದ ಅಶ್ವತ್ಥವೃಕ್ಷಕ್ಕೆ ನೀರೆರೆಯುತ್ತಿದ್ದ... ನೂರಾರು ತೂತುಗಳುಳ್ಳ ಒಂದು ಗಡಿಗೆಯಲ್ಲಿ ನೀರು ಸೇದುತ್ತಿದ್ದನು... ಗಡಿಗೆಯು ಬಾವಿಯಿಂದ ಮೇಲಕ್ಕೆ ಬರುವಷ್ಟರಲ್ಲಿ ನೀರು ಬಾವಿಯಲ್ಲಿ ಸುರಿದು ಇಷ್ಟರ ಕಾಲುಭಾಗವು ಸ್ವಲ್ಪ ಸಮಯದಲ್ಲಿ ಮುದುಕನು ಹೊ... ನೆಲಕ್ಕೆ ಸೋರಿಹೋಗುತ್ತಿದ್ದಿತು. ಎಷ್ಟು ಶ್ರಮಪಟ್ಟರೂ ಒಂದು ಹನಿ ನೀರಾದರೂ ಅಶ್ವತ್ಥವೃಕ್ಷಕ್ಕೆ ಎರೆಯುತ್ತಾಗಲಿಲ್ಲ. ಹತ್ತಾರು ಬಾರಿ... ನೀರು ಸೇದಿದರೂ ಒಂದೊಂದು ಸಲವೂ ಅದು ಸೋರಿಹೋಗಿ ತನ್ನ ಪ್ರಯತ್ನ... ನಿಷ್ಫಲವಾದುದನ್ನು ಕಂಡು ಮುದುಕನು ಹತಾಶನಾಗಿ ಬಾವಿಯ ಕಟ್ಟೆಯ... ತಲೆಯಮೇಲೆ ಕೈಯಿಟ್ಟು ಕುಳಿತುಬಿಟ್ಟನು.

ಇದೆಲ್ಲವನ್ನೂ ಕಣ್ಣಾರೆ ಕಂಡ ಧರ್ಮನಂದನನಿಗೆ ಕ್ಷಣಕಾಲ ಭ್ರಾತೃವಿಯೋ... ದುಃಖವು ಮರೆತಂತಾಗಿ ತನಗೂ ತಿಳಿಯದೆ ಅವನು ಮುದುಕನನ್ನು ಕಂ...

ಗೊಳ್ಳೆಂದು ನಕ್ಕುಬಿಟ್ಟನು. ಮುದಿಯನು ಧರ್ಮಪುತ್ರನನ್ನು ನೋಡಿ ಅವನು ನಕ್ಕುದಕ್ಕೆ ಕಾರಣವೇನೆಂದು ಕೇಳಿದನು.

ಧ—ಅಯ್ಯಾ ವೃದ್ಧನೆ! ನಿನ್ನನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವೂ ವ್ಯಸನವೂ ಉಂಟಾಗಲು ನಾನು ನಕ್ಕೆನಷ್ಟೆ. ಅದರಿಂದ ನಿನಗೆ ಕೋಪವುಂಟಾಗಲಾರದಷ್ಟೆ!?

ಮುದಿಯ—ಕೋಪ! ಏತಕ್ಕೆ ಕೋಪ ಬರಲಾರದು? ನಾನು ಮಾಡಿದ ಯಾವ ಕೆಲಸವು ಅನುಚಿತವೆಂದು ನೀನು ನಕ್ಕೆ? ಅದನ್ನು ಮೊದಲು ಹೇಳು.

ಧ—ಹಾಗೇನು? ಕೇಳು, ಹೇಳುತ್ತೇನೆ. ನೀನು ಮುದುಕ; ಕೈಲಾಗದವನು. ನಿನ್ನಿಂದ ಎಷ್ಟು ನೀರು ಸೇದಲಾದಿತು? ಅದಿರಲಿ; ಇದೋ ಒಣಗಿದ ವೃಕ್ಷ; ಅದರಲ್ಲಿಯೂ ಇದನ್ನು ತಲೆಕೆಳಕಾಗಿ ನೆಟ್ಟಿದೆ; ಇದಕ್ಕೆ ನೀರೆರೆದು ಏನು ಪ್ರಯೋಜನ? ಅದು ಮತ್ತೆ ಚಿಗುರಬಲ್ಲದೆ? ಅದೂ ಹೋಗಲಿ; ನೀನು ನೀರು ಸೇದುತ್ತಿರುವ ಘಟವು ಶತಚ್ಛಿದ್ರಗಳನ್ನುಳ್ಳದ್ದು. ಅದರಲ್ಲಿ ನೀರು ನಿಲ್ಲಬಲ್ಲುದೆ? ಈ ಎಲ್ಲತೆರನಾದ ಹುಚ್ಚುತನವನ್ನು ನಿನ್ನಲ್ಲಿ ನೋಡಿ ನನಗೆ ನಗು ಬಂದಿತು. ಇಂತಹ ಸರ್ವಪ್ರಕಾರವಾದ ಅವಿವೇಕ ಪ್ರಸಂಗವನ್ನು ನಾನು ನನ್ನ ಜೀವಿತಕಾಲದಲ್ಲಿ ನೋಡಿದುದು ಇದೇ ಮೊದಲು. ಅದಕ್ಕಾಗಿ ನನಗೂ ತಿಳಿಯದೆ ನಕ್ಕುಬಿಟ್ಟೆ. ನನ್ನ ಅಪರಾಧವನ್ನು ಮನ್ನಿಸಿ ಈ ನಿರರ್ಥಕ ಪ್ರಯತ್ನವನ್ನು ಕೊನೆಗಾಣಿಸು. ಇಷ್ಟೇ ನನ್ನ ಸಲಹೆ.

ಮು—ಒಪ್ಪಿದೆ. ಇದು ಒಣಗಿದ ವೃಕ್ಷ; ತಲೆಕೆಳಕಾಗಿ ಹೂಳಿದೆ. ಮತ್ತೆ ಜೀವುಜಿಟ್ಟು ಚಿಗುರಲಾರದು ಎಂದೆ; ಆಗಲಿ, ಒಪ್ಪಿಕೊಳ್ಳೋಣ; ಆದರೆ ನೀನು! ನಿನ್ನನ್ನು ನೋಡಿದರೆ, ನೀನಾಡುವ ಮಾತುಗಳನ್ನು ಕೇಳಿದರೆ, ಪರಮಜ್ಞಾನಿಯೆಂದು ಕಾಣುತ್ತೀಯೆ. ಆದರೂ ಈ ಮೃತಶರೀರಕ್ಕಾಗಿ ಇಷ್ಟೊಂದು ಮರುಗುವೆಯೇಕೆ? ಈ ಮರಕ್ಕೂ ಆ ಸತ್ತುಹೋದ ಮೃತಶರೀರಕ್ಕೂ ವ್ಯತ್ಯಾಸವೇನಿರಬಹುದು? ಅದೂ ಕಾಷ್ಠವಲ್ಲವೆ? ಅದರಲ್ಲಿ ಮತ್ತೆ ಜೀವಕಳೆ ತುಂಬಲಾದೀತೆ? ನಿನ್ನ ಚರ್ಯೆಯನ್ನು ನೋಡಿ ನನಗೂ ಆಶ್ಚರ್ಯವಾಗುತ್ತದೆ. ನಿನ್ನಂತಹ ಜ್ಞಾನಿಗೆ ನಾನು ಇನ್ನೇನು ಹೆಚ್ಚು ಹೇಳಬಲ್ಲೆ?

[illegible]

[illegible]

ನಮಸ್ಕಾರ ಮಾಡಿ.

[illegible]

[illegible]

[illegible]

ಆಗೀನಾರದರೂ! ದೇವೇಂದ್ರನು ಧರ್ಮಪುತ್ರನ ಮುಂದೆ [illegible] ವಿಮಾನದಲ್ಲಿ ಬಂದನು. ಅವನನ್ನು ಕುರಿತು "ಎಲೈ ಧರ್ಮನ [illegible] ಈ ವಿಮಾನದಲ್ಲಿ ಕುಳಿತುಕೋ. ನಿನ್ನನ್ನು ಸ್ವರ್ಗಕ್ಕೆ ಕರೆದು [illegible] ಕೊಂಡುಹೋಗುವುದಕ್ಕಾಗಿ ಬಂದಿದ್ದೇನೆ" ಎಂದನು.

ಧರ್ಮನಂದನನು ಹೇಳಿದನು :

"ಎಲೈ ದೇವೇಂದ್ರನೆ! ನಿನಗೆ ನಮಸ್ಕಾರವಾಗಲಿ. ನನ್ನ ತಮ್ಮ [illegible] ಪತಿವ್ರತೆಯಾದ ದ್ರೌಪದಿಯೂ ದಾರಿಯಲ್ಲಿ ಸತ್ತಿದ್ದಾರೆ. [illegible] ಅವರೂ ನನ್ನೊಡನೆ ಬರುವಂತೆ ಅನುಗ್ರಹಿಸಬಾರದೇನು? ಅವ [illegible]



"[illegible]"

ನಾನು ಒಬ್ಬನೆ ಸ್ವರ್ಗವನ್ನು ಸೇರುವುದೆಂದರೆ ಅದು ನನಗೆ ಅಷ್ಟೊ
ಹಿತಕರವಾಗಿ ತೋರುವುದಿಲ್ಲ."

ದೇವೇಂದ್ರನು ಈ ಮಾತನ್ನು ಕೇಳಿ ಯುಧಿಷ್ಠಿರನಿಗೆ ಹೇಳಿದನು :

"ಯುಧಿಷ್ಠಿರ ! ನೀನು ನಿನ್ನ ತಮ್ಮಂದಿರೂ ಮತ್ತು ದ್ರೌಪದಿ
ಸ್ವರ್ಗವನ್ನು ಸೇರುವುದು ಖಂಡಿತ. ತಮ್ಮ ಶರೀರಗಳನ್ನು ಭೂ
ಮಾಡಿದ ಅವರ ಆತ್ಮಗಳು ಆಗಲೇ ಸ್ವರ್ಗವನ್ನು ಸೇರಿವೆ.
ದೇವಾಧಿದೇವನು ಈ ಅಪೂರ್ವವಾದ ಅನುಗ್ರಹದ ಕಾರಣದಿಂದ
ಮಾತ್ರ ದೇಹದೊಡನೆ ಸ್ವರ್ಗವನ್ನು ಪ್ರವೇಶಮಾಡುವೆಯೆಂಬ ಅನು
ಮಾಡಿರುವನು."

ದೇವೇಂದ್ರನ ಮಾತನ್ನು ಕೇಳಿ ಯುಧಿಷ್ಠಿರನು ಸಮಾಧಾ
ಪ್ರಸನ್ನನಾದನು. ಆಗ ಧರ್ಮರಾಜನು "ಇನ್ನೊಂದು ವಿಷಯದಲ್ಲಿ ಹಿಂದಿ
ಈ ನಾಯಿಯನ್ನು ನನ್ನೊಡನೆ ಬರಗೊಡು" ಎಂದು ದೇವೇಂದ್ರ
ಪ್ರಾರ್ಥಿಸಿದನು.

"ನಾಯಿಗಳನ್ನು ಸಾಕುವವರಿಗೆ ಸ್ವರ್ಗಲೋಕದಲ್ಲಿ ಸ್ಥಳ
ನಾಗಿ ಸ್ವರ್ಗವು ದೊರೆಯುವುದಿಲ್ಲ."

ದೇವೇಂದ್ರನು ಅತ್ಯಂತ ಸ್ಪಷ್ಟವಾಗಿ ಹೇಳಿದನು.

"ಧರ್ಮರಾಜನೇ! ಈಗ ದೇವಗಣಕ್ಕೆ ಸೇರಿರುವೆ. ದೇವತೆಗಳ
ಶಕ್ತಿ—ಸಂಪತ್ತುಗಳನ್ನು ಪಡೆದುಕೊಂಡಿರುವೆ ಇವುಗಳನ್ನು ಒಂದು
ನಾಯಿಯೊಡನೆ ನೀನು ಹಂಚಿಕೊಳ್ಳುವುದೆಂತು ? ಆದುದರಿಂದ
ನಾಯಿಯನ್ನು ಬಿಟ್ಟು ಇಲ್ಲಿ ನನ್ನೊಡನೆ ಬಾ ; ಜಾಗ್ರತೆಮಾಡು."

ದೇವೇಂದ್ರನ ಮಾತನ್ನು ಕೇಳಿ ಧರ್ಮಪುತ್ರನಿಗೆ ವಿಶೇ
ಶೋಕವೂ ದುಃಖವೂ ಉಂಟಾಯಿತು. ಆತನು ಹೇಳಿದನು :

"ದೇವೇಂದ್ರನೇ ! ನಿನ್ನ ಮಾತನ್ನು ಕೇಳಿದುದಾಯಿತು
ಯೋಚಿಸಿ ನೋಡು. ನನ್ನಂತಹ ಧರ್ಮಾತ್ಮನು ಇಂತಹ
ವುದು ಉಚಿತವೆ ? ಸ್ವರ್ಗವನ್ನು ಪ್ರವೇಶಿಸುವ ಮಾತಂತಿರಲಿ ; ಸ್ವ
ಪಡೆದುಕೊಳ್ಳುವ ಅವಕಾಶವು ನನಗೆ ತಪ್ಪಿಹೋದರೂ ಅದಕ್ಕಾಗಿ
ಚಿಂತಿಸುವುದಿಲ್ಲ. ನನ್ನನ್ನೇ ನಂಬಿ ನನ್ನನ್ನು ಹಿಂಬಾಲಿಸಿರುವ ಈ ನಾ

ಒಲಿದವರನ್ನು ಕೈಬಿಡುವುದೆಂಬ ಪಾಪವನ್ನು ಮಾಡಿಬಿಟ್ಟು—ನಾನು ತ್ಯಜಿಸಲಾರೆನು. ಅದನ್ನು ಬಿಟ್ಟು ಸ್ವರ್ಗವನ್ನು ಪ್ರವೇಶಿಸಲು ನನ್ನ ಮನಸ್ಸು ಒಡಂಬಡುವುದಿಲ್ಲ.”

ಗಡಸು ಧ್ವನಿಯಲ್ಲಿ ದೇವೇಂದ್ರನು ಮತ್ತೆ ಹೇಳಿದನು :

“ನಾಯಿಯು ನೀಚಜಂತುವಲ್ಲವೆ? ಅಂತಹ ಕೊಳಕಾದ ಪ್ರಾಣಿಯನ್ನು ವನ್ನು ಜೊತೆಗಿರಿಸಿ ಪ್ರವೇಶಿಸಲಾದೀತು ಎಂದು ನಿನಗೆ ಹೊಳೆದುದು ಏತಕ್ಕೆ? ಇದು ಅಸಾಧ್ಯವೆಂಬುದನ್ನು ನೀನರಿಯೆಯಾ? ಇದರ ದಿಂದ ಪವಿತ್ರವಾದ ಸ್ವರ್ಗಕ್ಕೆ ಮಲಿನವುಂಟಾಗದೆ? ಚೆನ್ನಾಗಿ ಚಿಸಿ ನೋಡು. ನಾಯಿಯನ್ನು ಬಿಟ್ಟು ನನ್ನೊಡನೆ ಬಾ.”

ಧರ್ಮಾತ್ಮನು ಸ್ವಲ್ಪಕಾಲ ಯೋಚಿಸಿ ಹೇಳಿದನು :

“ಇಲ್ಲ; ಆಗುವುದಿಲ್ಲ. ನನ್ನನ್ನೇ ನಂಬಿದ ಈ ನಾಯಿಯನ್ನು ಕ್ಕೆ ತಳ್ಳಿಬಿಡುವುದು ಸಾಧ್ಯವಾಗಲಾರದು. ಅದು ಮಹಾಪಾಪವೆಂದು ಭಾಸವಾಗುತ್ತದೆ. ಈ ಬಡಪಾಯಿ ನಾಯಿಯನ್ನು ಕಠಿಣತೆಯಿಂದ ತಳ್ಳಿಬಿಡಲಿ? ನನ್ನನ್ನುಳಿದು ಈ ಪ್ರಪಂಚದಲ್ಲಿ ಇದಕ್ಕೆ ಮತ್ತಾವ ತನು ಇಲ್ಲ. ಇದನ್ನು ಇಲ್ಲೇ ಬಿಟ್ಟು ನಾನು ಮಾತ್ರ ನಿನ್ನೊಡನೆ ವುದೆಂದರೆ ನನ್ನ ಮನಸ್ಸೊಪ್ಪುವುದಿಲ್ಲ—ದೇವೇಂದ್ರ !”

ಆಗ ದೇವೇಂದ್ರನು ಶಾಂತಚಿತ್ತದಿಂದ ಹೇಳಿದನು ;

“ಸ್ವರ್ಗವನ್ನು ಪ್ರವೇಶಿಸಲು ಬಯಸುವವರು ಮನಸಾ ಕಾಯಾ ಚಾ ಶುದ್ಧರಾಗಿರಬೇಕು. ಕೆಲಸಕ್ಕೆ ಬಾರದ ಒಂದು ನಾಯಿಗಾಗಿ ಇಷ್ಟೇ ವುದಕ್ಕಾದೇ ಇಷ್ಟೊಂದು ಶ್ರಮಪಟ್ಟು, ಇಷ್ಟೊಂದು ಧೈರ್ಯಗೊಂಡು ಮೇರುಪರ್ವತದ ಬಳಿಗೆ ಬಂದುದು ?”

ಆಗ ಸ್ವಾರ್ಥರಹಿತನಾದ ಧರ್ಮಜನು

“ಸದಾತ್ಮರಿಂದ ಎಂದಿಗೂ ಪಾಪವುಂಟಾಗಲಾರದು. ಈ ವಿಶ್ವಾಸ ವಾದ, ಸ್ನೇಹಭಾವದ, ನಾಯಿಯನ್ನು ಇಲ್ಲಿಯೇ ಬಿಟ್ಟು ನಾನು ಮಾತ್ರ ವನ್ನು ಸೇರುವುದರಲ್ಲಿ ನನಗಾವ ಸಂತೋಷವೂ ಉಂಟಾಗಲಾರದು” ಪ್ರತ್ಯುತ್ತರವಿತ್ತನು.

"ಹಾಗೇನು?" ದೇವೇಂದ್ರನು ಆಶ್ಚರ್ಯದಿಂದ ಕೇಳಿದನು : "ನಿನ್ನ ಪ್ರೀತಿಪಾತ್ರರಾದ ಸಹೋದರರನ್ನೂ, ಪ್ರೇಮಮಯಿ ದ್ರೌಪದಿಯನ್ನೂ ಈಗಾಗಲೆ ಹಿಂದೆಬಿಟ್ಟು ಬಂದಿರುವೆಯಲ್ಲವೆ? ಈ ಹುಚ್ಚು ಪ್ರೇಮವನ್ನು ನಾಯಿಯಲ್ಲೇಕೆ ನಿನ್ನ ಮನಸ್ಸನ್ನು ಯಾತನೆಗೊಳಪಡಿಸುತ್ತಿರುವೆಯೇತಕ್ಕೆ?"

"ನಿಜ :" ಯುಧಿಷ್ಠಿರನು ಮಧುರಕಂಠದಿಂದ ಹೇಳಿದನು : "ಅವರಿ ಯಾವ ಸಹಾಯವನ್ನು ನಾನು ಮಾಡಬಲ್ಲವನಾಗಿದ್ದೆನು? ಅದಲ್ಲ, ಅ ನಾಯಿಯಾದರೋ ನನ್ನನ್ನು ಕೇವಲ ಸ್ವರ್ಗದ್ವಾರಕ್ಕೆ ಹಿಂಬಾಲಿಸಿದೆಯಲ್ಲವೆ ಇಷ್ಟು ದೂರ ನನ್ನೊಡನೆ ಬಂದ ಇದನ್ನು ನಾನು ಈಗ ದೂರ ತಳ್ಳಿಬಿಡಲೆ?"

"ಓಹೋ! ಹಾಗೇ ಹೇಳು. ಪ್ರಾಣಾಪ್ತರಾದ ಸಹೋದರರನ ಉಳಿಸುವುದಕ್ಕಾಗಿ ದಾರಿಯಲ್ಲಿ ಅರೆಕ್ಷಣ ನಿಲ್ಲಲೂ ಒಪ್ಪದ ನೀನು ಈ ಬ ಬಾಯಿ, ನಿನ್ನ ನಾಯಿಗಾಗಿ ಸ್ವರ್ಗವನ್ನು ಮರೆತು ಇಲ್ಲೇ ನಿಲ್ಲುವೆಯೇನು?"

ಯುಧಿಷ್ಠಿರನನ್ನು ಪರೀಕ್ಷಿಸಲೆಂದು ದೇವೇಂದ್ರನು ಕೇಳಿದನು.

ಆದರೆ ಧರ್ಮಪ್ರಿಯನಾದ ಯುಧಿಷ್ಠಿರನು ಶಾಂತಚಿತ್ತನಾಗಿ "ಸತ್ತ ರನ್ನು ತೊಂದರೆಪಡಿಸುವವರಾರು? ಅವರಿಗೆ ಸಹಾಯಮಾಡುವವರಾದರ ಯಾರು? ಅವರಿಗೆ ಮತ್ತೆ ಜೀವದಾನಮಾಡುವ ಶಕ್ತಿಯು ನನಗಿದ್ದಲ್ಲಿ ಇ ಗಲೇ ಹಿಂತಿರುಗಿ ಹೋಗಿಯೂ, ಅವರನ್ನೆಬ್ಬಿಸಿ ಕರೆದುಕೊಂಡುಬರ ನಾನು ಸಿದ್ಧನಾಗಿದ್ದೇನೆ. ಆದರೆ ಇಂತಹ ಪ್ರೇಮಪಾತ್ರವಾದ ಜಂತುವ ಕೈಬಿಡುವುದು ಮಹಾಪಾಪವೆಂದೇ ನಾನು ಎಣಿಸುತ್ತೇನೆ."

ಧನಾಢ್ಯನೂ ಧರ್ಮಾತ್ಮನೂ ಆದ ಯುಧಿಷ್ಠಿರನು ಈ ರೀತಿಯಾಗಿ ನ ಮೊಡನೆಯೇ ನಾಯಿಯು ಮಾಯವಾಯಿತು. ಧರ್ಮದೇವನೂ, ಲ ಕಾರಕನೂ ಆದ ಯಮಧರ್ಮರಾಯನು ಧರ್ಮನಂದನನ ಪಕ್ಕದಲ್ಲಿ ನಿ ಕೊಂಡನು.

ಬಳಿಕ ಪ್ರತ್ಯಕ್ಷನಾದ ಯಮಧರ್ಮರಾಯನು "ಓ ಯುಧಿಷ್ಠಿರ! ಸ ಜೀವಿಗಳಲ್ಲಿಯೂ ಕನಿಕರವುಳ್ಳವನು ನೀನು ಎಂದು ಈಗ ಲೋಕಕ್ಕೆ ಸ್ಪ ವಾಯಿತು. ತನ್ನನ್ನು ಅನುಸರಿಸಿ ಬಂದ ಒಂದು ನಾಯಿಗಾಗಿ ಅದರ ಸ್ವ ಸಲುವಾಗಿ, ದೇವದತ್ತವಾದ ಈ ದಿವ್ಯವಿಮಾನದಲ್ಲಿ ಹತ್ತದೆ ಹಿಂದುಳಿಯು ವರು ನಿನ್ನನ್ನುಳಿದು ಮತ್ತಾರಿರುವರು? ಭಲೆ! ಧರ್ಮನಂದನ! ನಿ

ಗದ್ಯಂಧ್ಯನೇ ಸರಿ! ನಿನ್ನ ಭೂತದಯೆಯನ್ನು ಪರೀಕ್ಷಿಸಲೆಂದೇ ನಾನು ಇಲ್ಲಿ ಯವರೆಗೂ ನಿನ್ನನ್ನು ಹಿಂಬಾಲಿಸಿ ಬಂದೆನು. ನಿಜಶರೀರದೊಂದಿಗೆ ನೀನು ರ್ಗವನ್ನು ಪ್ರವೇಶಿಸಬಹುದು. ಅಲ್ಲಿ ನಿರಂತರ ಸುಖಶಾಂತಿಗಳನ್ನು ಪಡೆಗೊಳ್ಳುತ್ತಿರಬಹುದು. ನಿನ್ನಂತಹ ಧರ್ಮಪ್ರಿಯರನ್ನು ಸ್ವರ್ಗದಲ್ಲಿಯೂ ಾಲಸದಳವಾದುದು. ನಿನಗೆ ಸರ್ವ ಸನ್ಮಂಗಳಗಳುಂಟಾಗಲಿ! ಜಗತ್ತಿನಲ್ಲಿ ನ್ನ ಹೆಸರು ಚಿರಸ್ಥಾಯಿಯಾಗಿ ನಿಲ್ಲಲಿ! ಶುಭಮಸ್ತು!"

ಎಂದು ಆಶೀರ್ವದಿಸಿ ಯಮಧರ್ಮರಾಯನು ಅದೃಶ್ಯನಾದನು. ಯುಧಿಷ್ಠಿರನು ದೇವವಿಮಾನದಲ್ಲಿ ಕುಳಿತು ಸ್ವರ್ಗಾರೋಹಣ ಮಾಡಿದನು.

೨. ಮತ್ಸರದ ವಿಷಫಲಗಳು.

ಹಿಂದೂಸ್ಥಾನದ ವಿಶೇಷ ಭಾಗಗಳನ್ನೊಳಗೊಂಡ ರಾಜ್ಯವನ್ನು ದಿಲ್ಲಿ ಕ್ರವರ್ತಿಯಾದ ಅನಂಗಪಾಲನು ಆಳುತ್ತಿದ್ದನು. ಇದು ಸುಮಾರು ರ್ಷಗಳ ಹಿಂದ ನಡೆದ ವಿಷಯು. ಅನಂಗಪಾಲನಿಗೆ ಗಂಡುಸಂತಾನವಿರಲಿಲ್ಲ. ನಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರ ಹೊಟ್ಟೆಯಲ್ಲಿ ಜಯಚಂದ್ರ, ಥ್ವಿರಾಜ ಎಂಬ ರಾಜಕುಮಾರರು ಹುಟ್ಟಿದರು. ಅವರಲ್ಲಿ ಜಯಚಂದ್ರನೇ ಥ್ವಿರಾಜನಿಗಿಂತಲೂ ಹತ್ತೆಂಟು ವರ್ಷಗಳು ಹಿರಿಯವನಾಗಿದ್ದನು. ಆದುದ ದಲೇ ಅನಂಗಪಾಲನ ನಂತರ ತಾನೇ ದಿಲ್ಲಿ ಚಕ್ರವರ್ತಿಯಾಗತಕ್ಕವನೆಂದು ಸಿದನು. ಆದರೆ ಸಕಲ ರಾಜಗುಣಸಂಪನ್ನನೂ ಪ್ರಜಾವತ್ಸಲನೂ ಆದ ಥ್ವಿರಾಜನನ್ನೇ ಅನಂಗಪಾಲನು ದಿಲ್ಲಿ ಸಿಂಹಾಸನದಮೇಲೆ ಕುಳ್ಳಿರಿಸಿದನು. ೇಕ ರಾಜಾಧಿರಾಜರು ದಿಲ್ಲಿ ಚಕ್ರವರ್ತಿಗೇ ವಿಶ್ವಾಸಗೌರವಗಳಿಂದ ಕಪ್ಪ ಣಿಕೆಗಳನ್ನು ಕಳುಹಿಸಿ ತಮ್ಮ ರಾಜಭಕ್ತಿಯನ್ನು ಸಲ್ಲಿಸುತ್ತಿದ್ದರು. ಜಯ ದ್ರನು ಕನೌಜಿನ ಅರಸನಾದನು. ಇದರಿಂದ ಅವನ ಎದೆಯಲ್ಲಿ ಅಸೂ ಯು ತುಂಬಿತು. ತನ್ನ ಸಂಬಂಧಿಯೂ ದಿಲ್ಲಿ ಚಕ್ರವರ್ತಿಯೂ ಆದ ಪೃಥ್ವಿ ಜನನ್ನು ಜಯಚಂದ್ರನು ಅಂದಿನಿಂದ ತನ್ನ ಪರಮ ವೈರಿಯಂತೆ ಪರಿಗಣಿ ನು.

ಘರಾಣರ ಸೇನೆಯು ಹಿಂದೂಸ್ಥಾನದಮೇಲೆ ದಂಡೆತ್ತಿ ಬರುವ ಸಮಾ ರವನ್ನು ಕೇಳಿದೊಡನೆಯೇ ಎಲ್ಲ ರಜಪೂತ ಮುಖಂಡರೂ ತಮ್ಮ ಸೈನ್ಯ

ಗಳನ್ನು ಪರಮಸಾಹಸಿಯೂ ವೀರಯೋಧನೂ ಆದ ಪೃಥ್ವಿರಾಜನ ಅಧೀನತೆಯಲ್ಲಿ ಒಟ್ಟುಗೂಡಿಸಿ ಶತ್ರುಸೇನೆಯನ್ನು ಸದೆ ಬಡಿಯಲೋಸುಗ ಸಿದ್ಧರಾಗಿ ನಿಂತರು. ಆದರೆ ಸೇನಾಧಿಪತಿ ಪೃಥ್ವಿರಾಜನಲ್ಲಿ ದ್ವೇಷವನ್ನುಳ್ಳ ಜಯಚಂದ್ರನು ಮಟ್ಟಿಗೆ ಈ ಸಂಯುಕ್ತ ರಜಪೂತ ಸೈನ್ಯದಲ್ಲಿ ಕಲೆತುಕೊಳ್ಳಲಿಲ್ಲ.

ಹಿಂದು ಮತ್ತು ಯವನರ ಸೇನೆಗಳು ಪವಿತ್ರವಾದ ಸ್ಥಾಣೇಶ್ವರ ಯುದ್ಧರಂಗದಲ್ಲಿ ಒಂದನ್ನೊಂದು ಇದುರಿಸಿದುವು. ಇರುಕಡೆಗಳಲ್ಲಿಯೂ ಸೈನಿಕರೂ ವೀರಾವೇಶದಿಂದ ಕಾದಿದರು. ಅನೇಕ ಯೋಧರು ಹೋರಾಡಿ ಯುದ್ಧರಂಗದಲ್ಲಿ ಕೆಳಗುರುಳಿದರು. ಆ ದಿನವೆಲ್ಲವೂ ಕದನವು ಘೋರವಾಗಿ ನಡೆಯಿತು. ತಮ್ಮ ಮತಕ್ಕೆ—ಸ್ವಾತಂತ್ರ್ಯಕ್ಕೆ—ಒದಗಿದ ಆಪತ್ತನ್ನು ನಿವಾರಿಸಿಕೊಳ್ಳಲೋಸುಗ ರಾಜಪುತ್ರಯೋಧರು ಧೈರ್ಯಸ್ಥೈರ್ಯಗಳಿಂದ ಯುದ್ಧಮಾಡಿದರು. ಸಂಧ್ಯಾಕಾಲವೇಳೆಗೆ ಯುದ್ಧವು ಕೊನೆಗೊಂಡಿತು.

ಹಿಂದುಗಳಿಗೇ ವಿಜಯವಾಯಿತು. ಘೋರಿ ಮಹಮೂದನು ತನ್ನ ಗುಂಡಾದ ಗಾಯಗಳಿಂದ ನೊಂದು ಮೂರ್ಛಾವಸ್ಥೆಯಲ್ಲಿ ರಣರಂಗದಲ್ಲಿ ಬಿದ್ದಿದ್ದನು. ವಿಶ್ವಾಸಪಾತ್ರನಾದ ಸೇವಕನೊಬ್ಬನು ಕತ್ತಲು ಕವಿದನಂತರ ಅವನನ್ನು ಯಾವುದೋ ಒಂದು ರಹಸ್ಯಸ್ಥಾನಕ್ಕೆ ಕರೆದುಕೊಂಡುಹೋಗಿ ಅವನ ಪ್ರಾಣವನ್ನು ರಕ್ಷಿಸಿದನು.

೨

ಜಯಚಂದ್ರನಿಗೆ ಸಂಯುಕ್ತೆಯೆಂಬ ಮಗಳಿದ್ದಳು. ಹಿಂದೂಸ್ಥಾನದಲ್ಲಿ ಅತ್ಯಂತ ರಮಣೀಯಳೆಂದು ಅವಳು ಪ್ರತೀತಿ ಪಡೆದಿದ್ದಳು. ಸಂಯುಕ್ತೆಯು ಸುಂದರಳಾಗಿದ್ದಂತೆ ಧೀರಳೂ ಆಗಿದ್ದಳು. ಮನೋಹರಾಕಾರನೂ, ವೀರಾಗ್ರಣಿಯೂ ಆದ ಪೃಥ್ವಿರಾಜನ ಸುಗುಣಾತಿಶಯಗಳನ್ನು ಕೇಳಿ ಸಂಯುಕ್ತೆಯು ಅವನನ್ನು ರಹಸ್ಯವಾಗಿ ಪ್ರೀತಿಸತೊಡಗಿದಳು.

ಸ್ಥಾಣೇಶ್ವರದಲ್ಲಿ ವಿಜಯಿಯಾದ ವೀರ ಪೃಥ್ವಿರಾಜನು ದೇಶದ ಅಚ್ಚುಮೆಚ್ಚಿನ ನಾಯಕನೆಂದು ಪರಿಗಣಿಸಲ್ಪಟ್ಟನು. ಕವಿಗಳು ಕೀರ್ತನೆಗಳನ್ನು ವಿರಚಿಸಿ ಆತನ ಯಶಸ್ಸನ್ನು ಕೊಂಡಾಡಿದರು. ಪೃಥ್ವಿರಾಜನ ಹೆಸರುವಾಸಿಯು

ಹಬ್ಬಿದಂತೆಲ್ಲ ಆತನಲ್ಲಿ ಸಂಯುಕ್ತೆಗಿದ್ದ ಸಂಪ್ರೀತಿಯು ಅಧಿಕರಿಸಿತು. ತನ್ನ ಪ್ರೇಯಸನ ವಿಜಯವಾರ್ತೆಯನ್ನು ತನಗರುಹಿದ ದೂತನಿಗೆ ಅವಳು ತನ್ನ ಮುಕ್ತಾವಳಿ ಹಾರವನ್ನು ಬಹುಮಾನವಾಗಿ ಕೊಟ್ಟಳು. ಹಗಲೆಲ್ಲವೂ ಆತನ ಕೀರ್ತಿಯನ್ನು ನೆನೆಸುತ್ತ ರಾತ್ರಿಯಲ್ಲಿ ಅದನ್ನ ಕನಸುಕಾಣುತ್ತ ಸಂಯುಕ್ತೆಯು ಕಾಲ ಕಳೆಯತೊಡಗಿದಳು. ಪೃಥ್ವಿರಾಜನ ಮೇಲಣ ಪ್ರೇಮವು ಹುಚ್ಚಾದುದೆಂದೂ ಅದನ್ನವಳು ಮರೆತುಬಿಡಬೇಕೆಂದೂ ಅಸೂಯಾಕಿಂಕರನಾದ ಜಯಚಂದ್ರನು ತನ್ನ ಮಗಳಿಗೆ ಅಡಿಗಡಿಗೆ ಬೋಧಿಸತೊಡಗಿದನು. ಪೃಥ್ವಿರಾಜನ ಕೀರ್ತಿಯನ್ನು ಕಂಡು ಅವನಿಗಷ್ಟೊಂದು ಅಸಹನೆಯು ಹುಟ್ಟಿದ್ದಿತು.

ಕಾಲಕ್ರಮೇಣ ಸಂಯುಕ್ತೆಯು ಪ್ರಾಪ್ತವಯಸ್ಕಳಾದಳು. ಅವಳಿಗೆ ತಕ್ಕ ವರನನ್ನು ಹುಡುಕಬೇಕೆಂದು ಜಯಚಂದ್ರನು ಪ್ರಯತ್ನಿಸಿದನು. ರಾಜಪುತ್ರ ಸಂಪ್ರದಾಯದಂತೆ ಸ್ವಯಂವರವನ್ನು ಏರ್ಪಡಿಸಿದನು. ನೆರೆದ ಮಹಾಮಹಾವೀರ ರಾಜ ರಾಜಪುತ್ರರಲ್ಲಿ ಸಂಯುಕ್ತೆಯು ತನಗೆ ಇಷ್ಟಬಂದವನನ್ನು ವರಿಸಿ ವಿವಾಹಮಾಡಿಕೊಳ್ಳಬಹುದೆಂದು ಸೂಚಿಸಿದನು. ಹಿಂದೂಸ್ಥಾನದಲ್ಲುಳ್ಳ ಎಲ್ಲ ರಾಜಾಧಿರಾಜರಿಗೂ ಆ ಸ್ವಯಂವರ ಮಂಟಪಕ್ಕೆ ಬಿಜಯಗೈಯಲೆಂದು ಆಹ್ವಾನವನ್ನು ಕಳುಹಿಸಿದನು. ಆದರೆ ಪೃಥ್ವಿರಾಜನನ್ನು ಅವಮಾನಪಡಿಸಲೆಂದು ಅವನನ್ನು ಮಟ್ಟಿಗೆ ಆಹ್ವಾನಿಸದೆ ಬಿಟ್ಟನು. ಅಷ್ಟುಮಾತ್ರವಲ್ಲ; ತನ್ನ ವೈರಿಯಾದ ಪೃಥ್ವಿರಾಜನ ಪ್ರತಿಮೆಯನ್ನು ಮಾಡಿಸಿ ಅದನ್ನು ಸ್ವಯಂವರ ಮಂಟಪದ ಹೆಬ್ಬಾಗಿಲಲ್ಲಿ ಕಾವಲುಗಾರನಾಗಿ ಇರಿಸಿ ಅವನಿಗೆ ಅವಮಾನ ಪಡಿಸಿದನು. ಜಯಚಂದ್ರನ ಈ ದುರ್ನೀತಿಯನ್ನು ಕಂಡು ಸಾಧ್ವಿ ಸಂಯುಕ್ತೆಯು ಬಹುವಾಗಿ ಸಂತಾಪಗೊಂಡಳು.

"ಪ್ರಿಯ ಸಖಿ ಸಂಯುಕ್ತೆ! ನಿನ್ನ ವಿವಾಹದಿನವು ಹತ್ತಿರವಾಗುತ್ತಿದೆ ನೀನು ಯಾರನ್ನು ವರಿಸಿ ಹೃದಯೇಶ್ವರನನ್ನಾಗಿ ಮಾಡಿಕೊಳ್ಳಲು ತೀರ್ಮಾನಿಸಿದ್ದೀಯಮ್ಮಾ?" ಸಖಿ ವಿಮಲೆಯು ಕೇಳಿದಳು.

ನಿಟ್ಟುಸಿರನ್ನು ಬಿಡುತ್ತ ಸಂಯುಕ್ತೆಯು ಪ್ರತ್ಯುತ್ತರವಿತ್ತಳು. "ಈ ಜಗತ್ತಿನಲ್ಲಿ ನನಗಿಂತಲೂ ದುರದೃಷ್ಟಶಾಲಿಯು ಮತ್ತೊಬ್ಬಳಿರುವಳೇ? ನನಗಿಷ್ಟವಿಲ್ಲದ ಯಾವನಾದರೊಬ್ಬನನ್ನು ನಾನು ಮದುವೆಮಾಡಿಕೊಳ್ಳಬೇಕೆಂದು ನಮ್ಮ ತಂದೆಯು ಹಠತೊಟ್ಟಿರುವುದನ್ನು ನೀನರಿಯೆಯಾ?"

"ಸ್ವಯಂವರಕಾಲದಲ್ಲಿ ನೀನು ಯಾವನಾದರೊಬ್ಬ ವೀರರಾಜಪುತ್ರನನ್ನು ವರಿಸಿ ಪೃಥ್ವಿರಾಜನನ್ನು ತ್ಯಜಿಸುವಿಯೆಂದೆಣಿಸಿಯೋ ನಿನ್ನ ಜನಕನು ಎಲ್ಲ ಮಹೀಪಾಲರಿಗೂ ಆಹ್ವಾನವನ್ನು ಕಳುಹಿಸಿರುವನಲ್ಲವೆ ?"

ಮನಕದರಿಂದ ಪೀಡಿತಳಾದ ಮಾನಿನಿ ಸಂಯುಕ್ತೆಯು ಹೇಳಿದಳು :

"ಘನಾಢ್ಯನಾದ ಪೃಥ್ವಿರಾಜನನ್ನು ಈ ತೆರನಾಗಿ ಅವಮಾನಪಡಿಸಿರುವುದನ್ನು ಕಂಡು ನನ್ನ ಹೃದಯವು ಜ್ವಲಿಸುತ್ತಿದೆ ವಿಮಲ ! ಈಗೇನು ಮಾಡಲಿ ? ನನ್ನ ತಂದೆಯ ಇಚ್ಛಾನುವರ್ತಿಯಾಗಿ ನಡೆಯಲಿ? ಅಲ್ಲವೆ, ನನ್ನ ಹೃದಯ ಮಂಟಪದಲ್ಲಿ ಪ್ರತಿಷ್ಠಿಸಿ, ಪ್ರೀತಿಸಿ, ಅಹರ್ನಿಶಿ ಪೂಜಿಸುತ್ತಿರುವ ಪೃಥ್ವಿಪತಿಯನ್ನು ಮರೆತುಬಿಡಲಿ? ಆಗದು, ಸಖಿ ಆ ನನ್ನ ಹೃದಯೇಶ್ವರನನ್ನುಳಿದು ನಾನು ಮತ್ತಾರನ್ನೂ ಕಣ್ಣೆತ್ತಿಯೂ ನೋಡಲಾರೆ. ನನ್ನ ತಂದೆಯು ಕುಪಿತನಾಗಿ ನನ್ನ ಶಿರಸ್ಸನ್ನು ಛೇದಿಸಿದರೂ ಸರಿ ; ನನ್ನ ಇನಿಯನನ್ನುಳಿದು ಮತ್ಯಾರನ್ನೂ ಮದುವೆಯಾಗಲು ನಾನು ಸಮ್ಮತಿಸುವಳಲ್ಲ. ಇದೇ ನನ್ನ ದೃಢಸಂಕಲ್ಪ !"

ಸಂಯುಕ್ತೆಯ ಅರವಿಂದಾಕ್ಷಿಗಳಿಂದ ಅಶ್ರುಧಾರೆಯು ಯಥೇಚ್ಛವಾಗಿ ಹರಿಯಿತು. ವಿಮಲೆಯು ಸಖಿಯ ಕಣ್ಣೀರನ್ನು ಒರಸಿ ಅವಳನ್ನು ಸಂತೈಸುತ್ತಾ, "ಆತನನ್ನು ನೀನು ಇಷ್ಟೊಂದು ಪ್ರೀತಿಸುತ್ತಿರುವೆಯೆಂಬುದನು ಪೃಥ್ವಿರಾಜನು ಬಲ್ಲನೆ ?" ಎಂದು ಕೇಳಿದಳು.

"ನಾನು ಹೇಗೆ ಹೇಳಲಮ್ಮ ? ಆತನೇ ನನ್ನ ಹೃದಯವಲ್ಲಭನೆಂದು ನಾನೇನೋ ಆತನ ಮೂರ್ತಿಯನ್ನು ಮನಸ್ಸಿನಲ್ಲೇ ನಿಲ್ಲಿಸಿ ಪೂಜಿಸುತ್ತಿರುವೆನು."

"ಹಾಗಾದರೆ ಇನ್ನು ಕಾಲವಿಳಂಬ ಮಾಡಿ ಪ್ರಯೋಜನವಿಲ್ಲ. ಇನ್ನೇನು ಸ್ವಯಂವರವು ಹತ್ತಿರಕ್ಕೆ ಬಂದಿತು. ಅರಮನೆಯ ವೃದ್ಧ ಪುರೋಹಿತನೊಂದಿಗೆ ನಿನ್ನ ಮನೋಗತವನ್ನು ಪೃಥ್ವಿರಾಜನಿಗೆ ಹೇಳಿ ಕಳುಹಿಸುವುದು ಮೇಲು. ಈ ಕಾರ್ಯವನ್ನು ಅತ್ಯಂತ ರಹಸ್ಯವಾಗಿ ನೆರವೇರಿಸಬೇಕು. ಇದರ ಸುಳಿವು ಜಯಚಂದ್ರಮಹಾರಾಜನಿಗೆ ತಿಳಿಯಿತೆಂದರೆ ಆಗ ವಿನಾಶವಾದೀತು. ಕೊನೆಗವನು ಪೃಥ್ವಿರಾಜನ........ ಹಾಯ್ ! ಹಾಯ್ ! ಏನು ಅಮಂಗಳ ಯೋಚನೆಗಳಿವು ! ಬೇಡ ; ಕಾಲವಿಳಂಬವಿಲ್ಲದೆ ಪುರೋಹಿತ

ನನ್ನು ವರ್ತಮಾನದೊಂದಿಗೆ ತಿಳಿಸಬೇಕು. ಕೈಮೀರುವುದಕ್ಕೆ ಮುನ್ನ ನಿನ್ನ ಇಷ್ಟಾರ್ಥವು ನೆರವೇರಬೇಕಾದರೆ ಪೃಥ್ವಿರಾಜನನ್ನು ಎಷ್ಟೊಂದು ಆರಾಧಿಸುತ್ತಿರುವೆನೆಂಬುದನ್ನು ಆತನನ್ನುಳಿದು ನೀನು ಮತ್ತಾರನ್ನೂ ಪತಿಯಾಗಿ ಅಂಗೀಕರಿಸುವುದಿಲ್ಲವೆಂದೂ ಇದೀಗಲೇ ರಹಸ್ಯವಾಗಿ ಸಮಾಚಾರವನ್ನು ಕಳುಹಿಸಬೇಕು. ಅಷ್ಟುಮಾತ್ರವಲ್ಲ! ಸ್ವಯಂವರಕಾಲಕ್ಕೆ ಸರಿಯಾಗಿ ಇಲ್ಲಿಗೆ ಬಂದು ನಿನ್ನನ್ನು ಕರೆದುಕೊಂಡು ಹೋಗಿಬಿಡಬೇಕು ಎಂದೂ ಬರೆದು ಕಳುಹಿಸು.”

ವಿಮಲೆಯ ಸೂಚನೆಯನ್ನು ಸಂಯುಕ್ತೆಯು ಸಂಪೂರ್ಣವಾಗಿ ಅನುಮೋದಿಸಿದಳು. ಅದರಂತೆ ನಂಬುಗೆಗರ್ಹನಾದ ಸೇವಕನೊಬ್ಬನನ್ನು ಪತ್ರದೊಂದಿಗೆ ಮರುದಿನವೆ ದೆಹಲಿಯ ಚಕ್ರವರ್ತಿಯಾದ ಪೃಥ್ವಿರಾಜನಲ್ಲಿಗೆ ಕಳುಹಿಸಿದುದೂ ಆಯಿತು. ಓಲೆಯನ್ನು ಬಿಚ್ಚಿನೋಡಿ, ಅದರೊಳಗಿನ ಒಕ್ಕಣೆಯನ್ನು ಓದಿ ಸಂಯುಕ್ತೆಗೆ ತನ್ನಲ್ಲಿರುವ ಅಪಾರ ಪ್ರೇಮವನ್ನು ಕಂಡು ಪೃಥ್ವಿರಾಜನು ಪರಮಾನಂದಭರಿತನಾದನು. ಅಧೀರಳಾಗದೆ ಶಾಂತತೆಯಿಂದಿರಬೇಕೆಂದೂ ಸಕಾಲದಲ್ಲಿ ಸ್ವಯಂವರಮಂಟಪದ ಬಳಿ ಬಂದು ತನ್ನ ಹೃದಯೇಶ್ವರಿಯಾದ ಅವಳನ್ನು ಬಂಧವಿಮುಕ್ತಳನ್ನಾಗಿ ಮಾಡುವೆನೆಂದೂ ಪೃಥ್ವಿರಾಜನು ಸತಿಸಂಯುಕ್ತೆಗೆ ಅಲ್ಲಿಂದಲ್ಲಿ ಪ್ರತ್ಯುತ್ತರವನ್ನು ಬರೆದು ಕಳುಹಿಸಿದನು.

ಸ್ವಯಂವರದ ದಿನವೂ ಬಂದಿತು. ಕನೌಜ ರಾಜಧಾನಿಯಲ್ಲಿ ಅಂದು ಎಲ್ಲೆಲ್ಲಿಯೂ ಒಂದೇ ಕೋಲಾಹಲ. ನಗರವೆಲ್ಲವೂ, ತಳಿರು ತೋರಣಗಳಿಂದ ಫಲಪುಷ್ಪಗಳಿಂದ ಅಲಂಕರಿಸಲ್ಪಟ್ಟು ನಯನಾನಂದಕರವಾಗಿ ಕಂಗೊಳಿಸುತ್ತಿದ್ದಿತು. ಯಾರ ಬಾಯಲ್ಲಿ ನೋಡಿದರೂ ಸ್ವಯಂವರದ ಮಾತೇ. ದೇಶದ ಎಲ್ಲೆಡೆಗಳಿಂದ ರಾಜಮಹಾರಾಜರು ಬಿಜಯಮಾಡಿ ತಮತಮಗೆ ಏರ್ಪಡಿಸಿದ್ದ ಆಸನಗಳಲ್ಲಿ ಮಂಡಿಸಿದ್ದರು.

ನಿರ್ದಿಷ್ಟ ಕಾಲವಲ್ಲಿ ನಿರುಪಮ ಲಾವಣ್ಯಮಯಿಯಾದ ಸಂಯುಕ್ತೆಯು ಸಖಿಯರಿಂದೊಡಗೂಡಿ, ಲಜ್ಜಾಗಾಂಭೀರ್ಯಯುತಳಾಗಿ, ಪುಷ್ಪಮಾಲಿಕೆಯನ್ನು ಕೈಯಲ್ಲಿ ಹಿಡಿದು ನೆರೆದ ಸ್ವಯಂವರ ಮಂಟಪವನ್ನು ಪ್ರವೇಶಿಸಿದಳು. ಒಬ್ಬೊಬ್ಬ ರಾಜಪುತ್ರನ ಗುಣಕಥನವನ್ನೂ ಕೇಳುತ್ತ ತಗ್ಗಿಸಿದ ತಲೆಯನ್ನು



ಪೃಥ್ವಿರಾಜನು ಸಂಯುಕ್ತೆಯನ್ನು ಎತ್ತಿಕೊಂಡು ಹೋಗುತ್ತಿರುವುದು.

ಮೇಲೆತ್ತದೆ, ಯಾರನ್ನೂ ಕಣ್ಣೆತ್ತಿ ನೋಡದೆ, ರಾಜಪುತ್ರಿಯು ಮುಂದೆ ಮುಂದೆ ನಡೆದಳು. ಆದರೆ ಅವರಲ್ಲಿ ಯಾರನ್ನೂ ವರಿಸಲಿಲ್ಲ. ಇದ್ದಕ್ಕಿದ್ದಂತೆ ಅವಳು ಸಭಾಮಂಟಪವನ್ನು ಬಿಟ್ಟು ಮಹಾದ್ವಾರದ ಕಡೆಗೆ ನಡೆದಳು.

ನೆರೆದ ರಾಜಪುತ್ರರಿಗೆ ಸಂಯುಕ್ತೆಯು ತಮ್ಮನ್ನು ನಿರಾಕರಿಸಿದುದನ್ನು ನೋಡಿ ಆಶ್ಚರ್ಯವುಂಟಾಯಿತು. ಜಯಚಂದ್ರನಿಗೆ ಉಂಟಾದ ಕೋಪ ವನ್ನಂತೂ ವರ್ಣಿಸಲಸದಳವಾದುದು. ಸಭಾದ್ವಾರದಲ್ಲಿ ಕಾವಲುಗಾರನಂತೆ ನಿಲ್ಲಿಸಲ್ಪಟ್ಟಿದ್ದ ಪೃಥ್ವಿರಾಜನ ಪ್ರತಿಮೆಯ ಮುಂದೆ ಬಂದು ನಿಂತು ಎಲ್ಲರಿಗೂ ಆಶ್ಚರ್ಯವೂ, ಖೇದವೂ, ನಿರಾಶೆಯೂ ಉಂಟಾಗುವಂತೆ ಪುಷ್ಪಮಾಲಿಕೆ ಯನ್ನು ಪ್ರತಿಮೆಯ ಕೊರಳಿಗೆ ಹಾಕಿದಳು.

ಅದೇ ಸಮಯಕ್ಕೆ ಸರಿಯಾಗಿ ತನ್ನ ಪರಿವಾರದೊಡನೆ ಅಲ್ಲಿಗೆ ಬಂದಿದ್ದ ವೀರ ಪೃಥ್ವಿರಾಜನು ಅಶ್ವಾರೂಢನಾಗಿ ನೆರೆದ ಗುಂಪಿನಲ್ಲಿ ನುಗ್ಗಿ ಎಲ್ಲರಿಗೂ ವಿಸ್ಮಯವನ್ನುಂಟುಮಾಡುವಂತೆ ಲಲಿತಮನೋಹರೆಯಾದ ತನ್ನ ಹೃದಯೇಶ್ವರಿ ಸಂಯುಕ್ತೆಯನ್ನು ಇರುಕೈಗಳಿಂದಲೂ ಎತ್ತಿ ತನ್ನ ಕುದುರೆಯಮೇಲೆ ಕೂಡಿಸಿಕೊಂಡು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಕಣ್ಮರೆ ಯಾಗಿದ್ದನು ಕೋಪಾವೇಶದಿಂದ ಕೂಡಿದ ಜಯಚಂದ್ರನೂ ಅವನ ಸೈನಿಕರೂ ಪೃಥ್ವಿರಾಜನನ್ನು ಹಿಂಬಾಲಿಸಬೇಕೆಂದು ಪ್ರಯತ್ನಿಸಿದರು. ಆದರೆ ಅವರ ಉದ್ದೇಶವು ಸಫಲವಾಗಲಿಲ್ಲ. ಅದಕ್ಕೆ ಬದಲು ಪೃಥ್ವಿರಾಜನ ಸೈನಿಕರು ಅವರೆಲ್ಲರನ್ನು ಸದೆಬಡಿದು ಹಿಂದಕ್ಕಟ್ಟಿ ತಾವೂ ತಮ್ಮ ನಾಯಕನ ಹಿಂದೆ ಹೊರಟು ಸುರಕ್ಷಿತವಾಗಿ ದೆಹಲಿಯನ್ನು ಸೇರಿದರು.

೩

ಮಾಯೋಪಾಯದಿಂದ ತನ್ನನ್ನು ವಂಚಿಸಿ ತನ್ನ ಕುವರಿಯನ್ನು ಸೆಳೆ ದೊಯ್ದನೆಂದು ಜಯಚಂದ್ರನು ಕುದಿಯತೊಡಗಿದನು. ಆದರೆ ಮಾನ್ಯ ಮಹೀಪಾಲನಾದ ದೆಹಲೀಶ್ವರನು ಸತಿಸಂಯುಕ್ತೆಯೊಂದಿಗೆ ಒಂದು ವರ್ಷ ಕಾಲ ಪರ್ಯಂತ ಅತ್ಯಂತ ಸಂತೋಷದಿಂದ ಬಾಳಿದನು. ಆದರೆ ವಿಧಿಯ ಪ್ರಬಲಹಸ್ತವನ್ನು ತಡೆಯಬಲ್ಲವರಾರು? ಅವರ ಆ ನಿರ್ದುಷ್ಟ ನೆಮ್ಮದಿಯ ಬಾಳಿನಲ್ಲಿ ವಿಷಬಿಂದುಗಳು ಬಿದ್ದುವು. ತನ್ನ ಕುವರಿಯು ಕಣ್ಮರೆಯಾದಂದಿ ನಿಂದ ಪೃಥ್ವಿರಾಜನು ತನ್ನ ಪರಮ ವೈರಿಯೆಂದು ಜಯಚಂದ್ರನು

ನಿರ್ಧರಿಸಿಕೊಂಡನು. ಅವನನ್ನು ಪತನಗೊಳಿಸದಿದ್ದರೆ ತಾನು ಹುಟ್ಟಿದುದು ವ್ಯರ್ಥವೆಂದು ಸಂಕಲ್ಪಿಸಿಕೊಂಡನು. ಪೃಥ್ವಿರಾಜನಂತಹ ಪರಮಪರಾಕ್ರಮಶಾಲಿಯು ತನ್ನ ಅಳಿಯನಾದುದನ್ನು ಕಂಡು ಹಿಗ್ಗುವುದಕ್ಕೆ ಪ್ರತಿಯಾಗಿ ಜಯಚಂದ್ರನು ದಿನೇದಿನೇ ಅವನನ್ನು ಹೆಚ್ಚುಹೆಚ್ಚಾಗಿ ದ್ವೇಷಿಸತೊಡಗಿದನು. ಮನಸ್ತಾಪಕ್ಕೆ ಮರುಳಾದ ಜಯಚಂದ್ರನು ಭವಿಷ್ಯಭಾರತದ ಪತನಕ್ಕೆ ಮೂಲಕಾರಣನಾದನು. ಮೊಟ್ಟಮೊದಲು ಭಾರತದ ಸ್ವಾತಂತ್ರ್ಯವನ್ನು ಪರಕೀಯರಿಗೆ ಕರೆದೊಪ್ಪಿಸಿದವನಿವನೆಂದು ಇಂದು ಚರಿತ್ರೆಯು ಘಂಟಾಘೋಷವಾಗಿ ಸಾರುತ್ತಿದೆ.

ಇತ್ತ ಘೋರಿ ಮಹಮ್ಮದನು ಸ್ಥಾನೇಶ್ವರದಲ್ಲಿ ತನಗುಂಟಾದ ಸೋಲಿನಿಂದ ಅವಮಾನಿತನಾಗಿ ಸೇಡಿನಿಂದ ಸ್ವದೇಶಕ್ಕೆ ಹಿಂತಿರುಗಿದ್ದನು. ಆದರೆ ಹಿಂದೂಸ್ಥಾನವನ್ನು ಗೆದ್ದು ತನ್ನ ಕೀರ್ತಿ ಮಾಡಿಕೊಳ್ಳಬೇಕೆಂಬುದೇ ಅವನ ಹೆಬ್ಬಯಕೆಯಾಗಿತ್ತು. ಇಷ್ಟು ದೊಡ್ಡ ಸೈನ್ಯವನ್ನು ಕೂಡಿಸಿಕೊಂಡು ಬಂದು ಈ ದೇಶದಮೇಲೆ ಮುತ್ತಿಗೆ ಹಾಕಬೇಕೆಂದು ಅವನು ತೀರ್ಮಾನಿಸಿಕೊಂಡನು. ಅದೇ ಸಮಯಕ್ಕೆ ಸರಿಯಾಗಿ ದ್ವೇಷಮಾತ್ಸರ್ಯದಿಂದ ಹುಚ್ಚು ಹಿಡಿದುಹೋದ ಜಯಚಂದ್ರನು ದೇಶದ್ರೋಹಕ್ಕೆ ಮನಸೋತು ಸೈನ್ಯ ಸೇನೆ ಸಹಿತ ಹಿಂದೂಸ್ಥಾನಕ್ಕೆ ಬಂದು ದಿಲ್ಲಿ ಸಾಮ್ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಘೋರಿಮಹಮ್ಮದನಿಗೆ ಒತ್ತಾಯಪಡಿಸಿದನು. ಈ ವಿಶ್ವಾಸಘಾತುಕನ ಆಹ್ವಾನವನ್ನು ಕಂಡು ಮಹಮ್ಮದನು ಸಂತುಷ್ಟನಾದನು. ಅವನಿಗೆ ಬೇಕಾಗಿದ್ದುದೂ ಇಂತಹ ಅನೈಕ್ಯವೇ. ರಜಪೂತರು ಬರಿದು ಕಲಹಿಸಿದುದರಿಂದ, ಜಯಚಂದ್ರನು ತನಗೆ ನೆರವಾಗಿರುವುದರಿಂದ, ಈ ಸಲ ತನ್ನ ದಂಡಯಾತ್ರೆಯು ಫಲಪ್ರದವಾಗಲೇಬೇಕೆಂದು ಘೋರಿಯು ಹಿಗ್ಗಿದನು.

ಬಲಾಢ್ಯವಾದ ಅಪರಿಮಿತ ಸೈನ್ಯೌಘದೊಡನೆ ಮಹಮ್ಮದನು ಹಿಂದೂಸ್ಥಾನದಮೇಲೆ ದಂಡೆತ್ತಿಬಂದನು. ಪೃಥ್ವಿರಾಜನಮೇಲೆ ತನಗಿದ್ದ ಅಪಾರವಾದ ಅಸೂಯೆಯಿಂದ ಅಂಧನಾದ ಜಯಚಂದ್ರನು ದೇಶದ ಕಲ್ಯಾಣವನ್ನೂ ತನ್ನ ಪವಿತ್ರ ಕರ್ತವ್ಯವನ್ನೂ ಮರೆತು ತನ್ನವರೊಂದಿಗೆ ತಾನೂ ಯವನಸೇನಾನಾಯಕರೊಂದಿಗೆ ಕಲೆತುಕೊಂಡನು. ಸ್ವಧರ್ಮ ಸ್ವದೇಶಾಭಿಮಾನ

ಗಳನ್ನು ತೊರೆದು, ಪಶುಸಮಾನವಾದ ಮಾತ್ಸರ್ಯಕ್ಕೆ ಮನಸೋತು, ಭಾರತ ಮಹಾರಾಷ್ಟ್ರವನ್ನು ಗೆಲ್ಲಲೆಂದೇ ದಂಡೆತ್ತಿ ಬಂದವನಿಗೆ ನಿರಾಯಾಸವಾಗಿ ವಿಶ್ವಾಸಘಾತುಕತನದಿಂದ ಅದನ್ನೊಪ್ಪಿಸಿಬಿಡಲು ಮುಂದು ಬಂದ. ಈ ಮಹಾಪಾತಕಿಯನ್ನು ಇರುಕೈಗಳಿಂದಲೂ ಪಠಾಣನು ಆ ಕ್ಷಣದಲ್ಲಿ ಆಲಂಗಿಸಿದುದೇನಾಶ್ಚರ್ಯ ?

ಎರಡನೆಯ ಆವರ್ತಿ ಹಿಂದೂ ಮುಸಲ್ಮಾನರ ಸೇನೆಗಳು ಮತ್ತೊಮ್ಮೆ ಅದೇ ಸ್ಥಾಣೇಶ್ವರದಲ್ಲಿ ಒಂದಕ್ಕೊಂದು ಎದುರಾದುವು. ರಜಪೂತವೀರರೆಲ್ಲರೂ ಒಟ್ಟುಗೂಡಿ ಈ ಸಲವೂ ಪೃಥ್ವಿರಾಜನನ್ನೇ ತಮ್ಮ ನಾಯಕನನ್ನಾಗಿ ಅಂಗೀಕರಿಸಿದರು.

ಉತ್ತಮ ಸತಿಗೆ ಸಹಜವಾದಂತೆ ಸಂಯುಕ್ತೆಯು ತನ್ನ ಪತಿವರ್ಯನಿಗೆ ಉಕ್ಕಿನ ಕವಚವನ್ನು ತೊಡಿಸಿ, ಅವನ ಕೊರಳಿಗೆ ಜಯಮಾಲೆಯನ್ನು ಹಾಕಿ, ನಮಸ್ಕರಿಸಿ "ಹೃದಯವಲ್ಲಭ! ಭಾರತದ ಮುಕ್ತಿಸೂತ್ರವು ನಿನ್ನ ಹಸ್ತಗತವಾಗಿರುವುದು. ಅದನ್ನುಳಿಸುವುದು ವೀರಾಗ್ರಣಿಯಾದ ನಿನ್ನನ್ನು ಹೊಂದಿಕೊಂಡಿದೆ. ಜನ್ಮಭೂಮಿಗೆ ವಿಜಯವನ್ನು ತರುವಂತೆ ಪರಮಾತ್ಮನು ನಿನ್ನನ್ನು ಆಶೀರ್ವದಿಸಲಿ. ದೇಶಚರಿತ್ರೆಯಲ್ಲಿ ಮಾತೆಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದನೆಂದು ನಿನ್ನ ಹೆಸರು ಚಿರಸ್ಥಾಯಿಯಾಗಿ ನಿಲ್ಲಲಿ ಸ್ವಾತಂತ್ರ್ಯ ಸಮರದಲ್ಲಿ ನಿನಗೆ ಮರಣವುಂಟಾದಲ್ಲಿ ನಾನು ಸಹಗಮನಮಾಡಿ ನಿನ್ನನ್ನು ಸ್ವರ್ಗದಲ್ಲಿ ಕಲೆತುಕೊಳ್ಳುತ್ತೇನೆ. ನಾಥ! ನಿನಗೆ ಮಂಗಳವಾಗಲಿ !" ಎಂದು ವೀರ ಸತಿಯು ತನ್ನ ವಲ್ಲಭನನ್ನು ರಣರಂಗಕ್ಕೆ ಬೀಳ್ಕೊಟ್ಟಳು.

ಭಾರತದ ಮಂಗಲಸೂತ್ರವು ಸ್ಥಾಣೇಶ್ವರದಲ್ಲಿ! ಯುದ್ಧದ ಪರಿಣಾಮವೇನಾಗುವುದು? ಬಲ್ಲವರಾರು ? ಈ ಸಲ ಪರಾಜಯ ಹೊಂದಕೂಡದೆಂದು ಪಠಾಣನು ಪಂಥತೊಟ್ಟಿದ್ದನು. ಅಂತೆಯೆ ಸ್ವಧರ್ಮ ಸ್ವದೇಶಗಳನ್ನು ಯವನರ ದಾಂಧಲೆಯಿಂದ ತಪ್ಪಿಸಬೇಕೆಂದು ರಾಜಪೂತವೀರರೂ ದೃಢನಿಶ್ಚಯ ಮಾಡಿಕೊಂಡಿದ್ದರು

ಸೂರ್ಯೋದಯದಿಂದ ಸೂರ್ಯಾಸ್ತಮಾನದವರೆಗೂ ನಿಮಿಷವೂ ನಿಲ್ಲದೆ ಯುದ್ಧವು ಮುಂದೆ ಸಾಗಿತು. ಇರುಪಂಗಡದವರೂ ಅಮಿತ ಪರಾಕ್ರಮದಿಂದಲೂ, ಅಚಲ ಸಂಕಲ್ಪದಿಂದಲೂ ಕಾದಿದರು. ಅಸ್ತಮಾನದವೇಳೆಗೆ

ಯವನ ಸವಾರರು ಹಿಂದೂಗಳ ಸೇನೆಯಲ್ಲಿ ನುಗ್ಗಿ ವೀರಾವೇಶದಿಂದ ಸಿಕ್ಕಿಸಿಕ್ಕಿದವರನ್ನು ಮರ್ದನ ಮಾಡಿದರು. ಅತುಳ ಪರಾಕ್ರಮಿಗಳಾದ ರಜಪೂತ ವೀರರನೇಕರು ಹೇಗಾದರೂ ಭಾರತದ ಸ್ವಾತಂತ್ರ್ಯವನ್ನು ರಕ್ಷಿಸಲೇಬೇಕೆಂದು ಹೋರಾಡಿ ತಮ್ಮ ಕೈಸಾಗದೆ ರಣರಂಗದಲ್ಲಿ ಮಡಿದರು.

ನಿಜವಾದ ರಾಜಪುತ್ರ ವೀರನಂತೆ ಕೈಯಲ್ಲಿ ಕತ್ತಿಯನ್ನು ಹಿಡಿದು ಪೃಥ್ವಿರಾಜನು ಕಂಡ ಕಂಡ ಯವನರ ತಲೆಗಳನ್ನು ತುಂಡರಿಸಿದನು. ಈ ಹೋರಾಟದಲ್ಲಿ ವಿಶೇಷವಾಗಿ ಘಾತಿಹೊಂದಿದನು. ಕಟ್ಟಕಡೆಯಲ್ಲಿ ಅವನು ರಣಯಾತನೆಯನ್ನು ಇನ್ನೆಷ್ಟು ಮಾತ್ರವೂ ತಡೆಯಲು ಶಕ್ತಿಯಿಲ್ಲದೆ ಯುದ್ಧರಂಗದಲ್ಲಿ ಬಿದ್ದು ಅವನೂ ಪ್ರಾಣವನ್ನು ತೊರೆದನು. ಹೃದಯೇಶ್ವರನ ಮರಣವಾರ್ತೆಯನ್ನು ಕೇಳಿ ದುಃಖಾಕ್ರಾಂತಳಾದ ಸಂಯುಕ್ತೆಯು, ಅವನ ಅಂತ್ಯಸಂಸ್ಕಾರಗಳನ್ನು ನಡೆಸಿ, ಉತ್ತಮ ಸತಿಯಂತೆ ತಾನೂ ಪತಿಯ ಚಿತೆಯೇರಿ ಸಂತುಷ್ಟವದನಳಾಗಿ ಸಹಗಮನಮಾಡಿದಳು.

ಇತ್ತ ಘೋರಿ ಮಹಮ್ಮದನು ಅಜಮೀರ, ದೆಹಲಿ ಮೊದಲಾದ ಅನೇಕ ಪ್ರಾಂತ್ಯಗಳನ್ನು ಗೆದ್ದು ತನ್ನ ಮಿತ್ರನಾದ ಜಯಚಂದ್ರನ ರಾಜಧಾನಿಯಾದ ಕನೌಜದಮೇಲೆ ದಂಡೆತ್ತಿ, ಅದನ್ನು ಸ್ವಾಧೀನಪಡಿಸಿಕೊಂಡು, ಅವನನ್ನೂ ಕೊಲ್ಲಿಸಿದನು.

ಸ್ಥಾನೇಶ್ವರದಲ್ಲಿ ಯವನರಿಗಾದ ವಿಜಯದಿಂದ ಹಿಂದೂಸ್ಥಾನದ ಸ್ವಾತಂತ್ರ್ಯಸೂತ್ರವು ಕಳಚಿಬಿದ್ದಿತು. ಜಯಚಂದ್ರನು ಮಾತ್ಸರ್ಯಕ್ಕೆ ಮನಸೋಲದಿದ್ದರೆ, ಮಾತೃಭೂಮಿಯ ದ್ರೋಹಕ್ಕೆ ಕಾತುರಗೊಳ್ಳದಿದ್ದರೆ, ಅಜ್ಞಾನಕ್ಕೆ ಬಲಿಯಾಗದಿದ್ದರೆ, ಯವನರು ಅಂದು ಜಯಿಸುವಂತಿರಲಿಲ್ಲ. ಭಾರತದ ಭವಿಷ್ಯದ ಇತಿಹಾಸವೇ ಬೇರೆ ತೆರನಾಗಿರುತ್ತಿದ್ದಿತು. ಎಂದೆಂದಿಗೂ ಭಾರತೀಯರು ಜಯಚಂದ್ರನ ವಿಶ್ವಾಸಘಾತುಕತನವನ್ನು ತುಚ್ಛದೃಷ್ಟಿಯಿಂದ ನೋಡುವರು. ಅಂತೆಯೇ ಪೃಥ್ವಿರಾಜನ ದಿವ್ಯ ದೇಶಭಕ್ತಿಯು ಭಾರತದ ಸ್ವಾತಂತ್ರ್ಯಸಮರ ಚರಿತ್ರೆಯಲ್ಲಿ ನಿಷ್ಕಳಂಕ ತಾರೆಯಂತೆ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವುದು.

೩. ಸಿದ್ಧಾರ್ಥನೂ ಹಂಸಪಕ್ಷಿಯೂ

ಸಿದ್ಧಾರ್ಥನೊಬ್ಬ ರಾಜಪುತ್ರನು. ಇವನನ್ನುಳಿದು ಇವನ ತಾಯ್ತಂದೆಯರಿಗೆ ಬೇರೆ ಮಕ್ಕಳಿರಲಿಲ್ಲ. ರಾಜ ಸುದ್ಧೋಧನನೇ ಇವನ ತಂದೆ; ಮಹಾರಾಣಿ ಮಾಯಾದೇವಿಯು ಇವನ ತಾಯಿ; ಅನೇಕ ವರ್ಷಗಳು ಬಗೆಬಗೆಯಾಗಿ ದೇವರಿಗೆ ಹರಕೆ ಹೊತ್ತು ಮಾಯಾದೇವಿಯು ಸಿದ್ಧಾರ್ಥನೆಂಬ ಈ ಪುತ್ರನನ್ನು ತನ್ನ ವೃದ್ಧಾಪ್ಯದಲ್ಲಿ ಪಡೆದಿದ್ದಳು. ಆದರೆ ತನ್ನ ಮುದ್ದಿನ ಕಂದನ ತೊದಲ್ನುಡಿಗಳನ್ನು ಕೇಳಿ ಆನಂದಿಸುವ ಸುಯೋಗವೂ ಮಾಯಾದೇವಿಗಿರಲಿಲ್ಲ. ಸಿದ್ಧಾರ್ಥನ ಜನನವಾದ ಕೆಲವೇ ದಿನಗಳಿಗೆ ಆ ಪುಣ್ಯಮಾತೆಯು ಪರಲೋಕಕ್ಕೆ ತೆರಳಿದಳು. ಅಂದಿನಿಂದ ಶಿಶುವನ್ನು ಕ್ರಮ ಕ್ರಮೇಣ ಸುದ್ಧೋದನ ಮಹಾರಾಜನೇ ಪ್ರೀತಿಸಿ ಪೋಷಿಸುತ್ತ ಬಂದನು.

ಈಗಿನ ನೇಪಾಳ ರಾಜ್ಯಕ್ಕೆ ಕಲೆತ ಕೆಲಪ್ರಾಂತ್ಯಗಳಿಗೆ ಸುದ್ಧೋಧನನು ರಾಜನಾಗಿದ್ದನು. ಯುವಕ ರಾಜಕುವರನು ತನ್ನ ಉನ್ನತ ಅಂತಸ್ತಿಗೆ ತಕ್ಕಂತೆ ವಿವಿಧವಾದ ಶಿಕ್ಷಣಗಳನ್ನು ಪಡೆದನು. ಕಾಲಾನುಗುಣವಾಗಿ ಸಿದ್ಧಾರ್ಥನು ಪವಿತ್ರತಮವಾದ ವೇದಾದಿ ಸಕಲ ಶಾಸ್ತ್ರ ಪುರಾಣೇತಿಹಾಸ ಗಳನ್ನು ಪಠಿಸಿ ಪಂಡಿತನಾದನು. ರಾಜಕುಮಾರನಿಗೆ ಯೋಗ್ಯವೆನಿಸುವ ಧನುರ್ವಿದ್ಯೆ, ಗದಾಯುದ್ಧ, ಮಲ್ಲಯುದ್ಧ ಮೊದಲಾದುವುಗಳಲ್ಲಿ ಅಪ್ರತಿಮ ಪ್ರವೀಣನೆನಿಸಿದನು. ಕುದುರೆ ಸವಾರಿಯಲ್ಲಿ, ಬೇಟೆಯಾಡುವುದರಲ್ಲಿ, ರಥ ವನ್ನು ನಡೆಸುವುದರಲ್ಲಿ, ಸಿದ್ಧಾರ್ಥನಿಗೆ ಸಮನೆನಿಸುವ ಯುವಕನೇ ಇರಲಿಲ್ಲ ಕತ್ತಿಯನ್ನು ಹಿಡಿದು ಕಾದುವುದರಲ್ಲಿ, ಗುರಿಯಿಟ್ಟು ಬಾಣಪ್ರಯೋಗ ಮಾಡು ವುದರಲ್ಲಿ, ಸಿದ್ಧಾರ್ಥನಿಗೆ ಎದುರಾಗಬಲ್ಲವರಿರಲಿಲ್ಲ

ವಯಸ್ಸಾದಂತೆಲ್ಲಾ ಮಾನವ ಗಣದಲ್ಲಿ, ಅಚರಲ್ಲಿಯೂ ಮೂಕಪ್ರಾಣಿ ಗಳಲ್ಲಿ ಸಿದ್ಧಾರ್ಥನ ಕನಿಕರವು ದಿನೇ ದಿನೇ ಅಭಿವೃದ್ಧಿಯಾಯಿತು. ಇತರ ರಾಜಕುಮಾರರಂತೆ ಅವನಿಗೂ ಮೃಷ್ಟಮೃಗಗಳನ್ನು ಬೇಟೆಯಾಡುವ ಹೆಬ್ಬಯಕೆ ಯಿದ್ದಿತು. ಅವರೂ ಬೇಟೆಯಾಡುವ ನಡುವಿನಲ್ಲಿ ಒಮ್ಮೊಮ್ಮೆ ತನ್ನಿದಿರಿನಲ್ಲಿ

[illegible] ಮರಗಳನ್ನು ನೋಡಿ ಅವು [illegible] ದಾರಿಯಲ್ಲಿ ನಡೆದು [illegible] ರಥಗಳ [illegible] ತನ್ನ [illegible] ಸಾಕು; ಸಿದ್ಧಾರ್ಥನು [illegible] ಅದರಿಂದ ಅವು [illegible]

[illegible] ಸಿದ್ಧಾರ್ಥನು [illegible] ವಿಶಾಲ [illegible] ಸಿದ್ಧಾರ್ಥನ [illegible] ದಿನೇ ದಿನೇ [illegible] ಸಿದ್ಧಾರ್ಥನಿಗೆ [illegible]

೨

[illegible] ಅಲ್ಲಿ ಇಲ್ಲಿ [illegible] ತಂಪಾದ [illegible] ಆನಂದ ದಿಂದ [illegible] ಗಳಲ್ಲಿ [illegible]

[illegible] ಕರೆತಂದಿದ್ದ [illegible]

ನಂದಕರವಾದ ಉದ್ಯಾನವನದಲ್ಲಿ ಕುಳಿತು ಸೃಷ್ಟಿಯ ಸೌಂದರ್ಯವನ್ನು ಕಣ್ಣು ತುಂಬ ನೋಡಿ ನಲಿಯುತ್ತ "ಆಹಾ ! ಎಂತಹ ಸುಮನೋಹರವಾದ ಜಗತ್ತಿದು! ಇಲ್ಲಿ ವಾಸಿಸುವ ನಾವು ಎಷ್ಟೊಂದು ಪುಣ್ಯಶಾಲಿಗಳು ! ಈ ಅದ್ಭುತವಾದ ಸೃಷ್ಟಿಯ ಸೌಂದರ್ಯವನ್ನು ಸಾಕೆನ್ನುವಷ್ಟು ಸೂರೆಗೊಂಡು ಮಾನವನು ಸಂತೃಪ್ತನಾಗಿರಲು ಅಡ್ಡಿಯೇನಿದೆ ?" ಎಂದಂದುಕೊಂಡನು. ಅವನ ಮನಸ್ಸಿನಲ್ಲಿ ವಿಚಾರವಾಹಿನಿಯ ತರಂಗ ತರಂಗವಾಗಿ ಪ್ರವಹಿಸತೊಡಗಿತು. "ಮಾನವರೇಕೆ ಕಟುಕರಂತಿರಬೇಕು ? ಒಬ್ಬರೊಂದಿಗೊಬ್ಬರು ಅನ್ಯೋನ್ಯ ಪ್ರೀತಿಯಿಂದ ಬಾಳಲಾಗದೆ ? ಲತಾವೃಕ್ಷಗಳಂತೆ ಮಾನವನೂ ಪರೋಪಕಾರಿಯಾಗಿರಬೇಡವೇ ? ಪರರಿಗಾಗಿ ಮರುಗುವುದು ಮಾನವನ ಧರ್ಮವಲ್ಲವೇ ?" ಸಿದ್ಧಾರ್ಥನ ಪ್ರಶಾಂತವದನದಲ್ಲಿ ಶೋಕದ ಚಿನ್ಹೆಗಳು ಅಂಕುರಿಸಿದುವು. ನೊಂದು ನರಳುವ ನರಸಮುದಾಯದ ಅನಂತ ಯಾತನೆಗಳು ಸ್ವರೂಪಧಾರಣಮಾಡಿ ಅವನ ಕಣ್ಣು ಮುಂದೆ ಬಂದು ನಿಂತುವು. "ಮಾನವನು ನರಳುವುದೇಕೆ? ಮಾನವರು ನರಳುವುದೇಕೆ?" ಈ ಹೊಸ ಪ್ರಶ್ನೆಯು ಸಿದ್ಧಾರ್ಥನನ್ನು ಕಾಡತೊಡಗಿತು. "ಮಾನವರೆಲ್ಲರೂ ಒಬ್ಬರನ್ನೊಬ್ಬರು ಪರಸ್ಪರ ಅನುರಾಗದಿಂದ ಕಂಡರೆ—ಅಬಲರನ್ನು ಸಬಲರು ರಕ್ಷಿಸಿದರೆ—ಬಡವರಲ್ಲಿ ಭಾಗ್ಯವಂತರು ಮರುಕಗೊಂಡರೆ—ಸುಲಲಿತವಾದ ಪ್ರಾಣಿದಯೆಯೆಂಬ ಪವಿತ್ರ ಪ್ರೇಮಸೂತ್ರವು ನರಗಣವನ್ನು ಬಂಧಿಸಿದರೆ—ಈ ಜಗತ್ತನ್ನು ಕಂಡು ದೇವಾಧಿದೇವರೂ ಕರುಬುವಂತಾಗುತ್ತದೆ. ಪ್ರೇಮ ! ಪ್ರೇಮಬಂಧನ ! ಪ್ರೇಮಾತಿಶಯದಿಂದ ಕೂಡಿದ ಪ್ರಾಣಿದಯೆ ! ಮಾನವನಿಗೆ ಮಂಗಳಕರವಾದ ಪರಸ್ಪರ ಪ್ರೀತಿ ! ಪರೋಪಕಾರ ! ಹಾಯ್ ! ಮನಸ್ಸು ಮಹಾಮಹಿಮನಿಗೆ ಮಹದಾಶ್ರಯವಾಗಬೇಕು. ಮಾನವನಾಗಿ ಜನ್ಮತಾಳಿ ಮಾನವರಿಗೆ ಮುಂದಾಳಕಾಗಿರಬೇಕು. ಅವರ ಅನಂತಯಾತನೆಗಳ ಅಳಿವಿಗೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಇದೀಗ ಶ್ರೇಯಸ್ಕರ ! ಇದೀಗ ಪವಿತ್ರ ಕರ್ತವ್ಯ !"

ಸಿದ್ಧಾರ್ಥನ ಭಾವಸಮಾಧಿಯು ಮುಗಿದು ಅವನು ಮೇಲೇಳುವ ವೇಳೆಗೆ ಸೂರ್ಯಾಸ್ತಮಾನವಾಗಿ ಎಷ್ಟೋ ಹೊತ್ತು ಕಳೆದು ಎಲ್ಲೆಡೆಯೂ ಕತ್ತಲು ಕವಿದಿದ್ದಿತು ಮೆಲ್ಲನೆ ಎದ್ದು ಹೆಜ್ಜೆಯಮೇಲೆ ಹೆಜ್ಜೆಯಿಟ್ಟು

ಅವನು ಅರಮನೆಯನ್ನು ಸೇರಿದನು. ಅಂದವನಿಗೆ ಅನ್ನಾಹಾರಗಳಮೇಲೆ ಅಭಿರುಚಿಯಿರಲಿಲ್ಲ. "ಮಾನವರ ಮೋಕ್ಷೆಯಾಗುವುದೆಂತು ?" ಎಂದು ಯೋಚಿಸಿ ಯೋಚಿಸಿ ಅವನು ಬೇಸತ್ತನು. ಹಂಸತೂಲಿಕಾತಲ್ಪದಲ್ಲಿ ಮಲಗಿದನು. ಆದರೆ ನಿದ್ರೆಯು ಹಿಡಿಯಲಿಲ್ಲ. ಅವನು ಮಲಗಿದ್ದುದು ರಾಜಯೋಗ್ಯವಾದ ಶಯ್ಯೆಯಲ್ಲಿ. ಆದರೆ ಅದು ಶರತಲ್ಪವಾಯಿತು ಅವನ ಮನಸ್ಸು ವಿಶ್ವಪ್ರಪಂಚದಲ್ಲಿ ಪ್ರವಹಿಸಿತು ತನ್ನನ್ನು ಬಾಧಿಸ ತೊಡಗಿದ ಪ್ರಶ್ನೆಗೆ ಪ್ರತ್ಯುತ್ತರವನ್ನು ಎಲ್ಲೆಲ್ಲೂ ಹುಡುಕತೊಡಗಿದನು. ಉದಯವಾಗುವ ಪ್ರಹರದಲ್ಲಿ ಕೊನೆಗೆ ಅವನು ನಿದ್ರಾಪರವಶನಾದನು. ಆಗವನ ಯೋಚನೆಗಳು ಒಂದು ಬಗೆಯ ನಿಲ್ದಾಣವನ್ನು ಮುಟ್ಟಿದವು.

ಮರುದಿನ ಸಂಧ್ಯಾಕಾಲ ಸಿದ್ಧಾರ್ಥನು ಉದ್ಯಾನವನದಲ್ಲಿ ಹಿಂದಿನ ದಿನ ತಾನು ಕುಳಿತಿದ್ದ ಲತಾಮಂಟಪದಲ್ಲಿ ಕುಳಿತು "ಮಾನವರ ಮೋಕ್ಷೆಯಾಗುವುದೆಂತು ?" ಎಂದು ಮತ್ತೆ ಯೋಚಿಸತೊಡಗಿದನು. ಅದೇ ಸಮಯಕ್ಕೆ ಸರಿಯಾಗಿ ಆಕಾಶಮಾರ್ಗದಲ್ಲಿ ಹಂಸಪಕ್ಷಿಗಳು ಗುಂಪು ಗುಂಪಾಗಿ ಹಾರುತ್ತಹೋಗುತ್ತಿದ್ದವು: ಅವು ಉತ್ತರದ ಹಿಮವತ್ಪ್ರದೇಶಗಳಲ್ಲಿ ತಮ್ಮ ವಾಸಸ್ಥಾನಗಳನ್ನು ಕುರಿತು ಗಮಿಸುತ್ತಿದ್ದುವು ಹೀಗೆ ಹಾರಿಹೋಗುತ್ತಿದ್ದ ಪಕ್ಷಿಗಳು ಒಂದನ್ನೊಂದು ಸಂಬೋಧಿಸಿ ಸಂತೋಷದಿಂದ ಕಿಲಕಿಲಧ್ವನಿಗೈದು ಪ್ರೇಮವನ್ನು ವ್ಯಕ್ತಗೊಳಿಸುತ್ತಿದ್ದುದನ್ನು ಸಿದ್ಧಾರ್ಥನು ಕಂಡನು

ಇದ್ದಕ್ಕಿದ್ದಂತೆ ತಾನು ಕುಳಿತಿದ್ದೆಡೆಯಲ್ಲಿ ತನ್ನ ಸಮೀಪದಲ್ಲಿದ್ದ ಗುಲಾಬಿಗಿಡಗಳ ನಡುವಿನಲ್ಲಿ ಆ ಹಂಸನಿಕರದ ನಾಯಕನು ಬಿದ್ದುದನ್ನು ರಾಜಪುತ್ರನು ನೋಡಿದನು. ದೇವದತ್ತನೆಂಬುವನು ಸಿದ್ಧಾರ್ಥನ ಸಮೀಪ ಬಂಧುವು. ಅವನೂ ಯುವಕನೇ ! ದೇವದತ್ತನು ಅದೇ ಉದ್ಯಾನವನದ ಮತ್ತೊಂದು ಭಾಗದಲ್ಲಿ ತನ್ನ ಸಂಗಾತಿಗಳೊಂದಿಗೆ ಸಂತಸದಿಂದ ನಲಿದಾಡುತ್ತಿದ್ದನು.

ಆಕಾಶಮಾರ್ಗದಲ್ಲಿ ಹಂಸಪಕ್ಷಿಗಳು ಅವನ ಕಣ್ಣಿಗೆ ಗೋಚರಿಸಿದವೋ ಇಲ್ಲವೋ ತಕ್ಷಣವೇ ಧನುಸ್ಸಿಗೆ ಬಿಲ್ಲನ್ನು ಹೂಡಿ ಪ್ರಯೋಗಿಸಿಬಿಟ್ಟನು ಝೇಂಕರಿಸುತ್ತ ಹೊರಟ ಬಾಣವು ಪಕ್ಷಿನಾಯಕನ ವಿಶಾಲವಾದ ರೆಕ್ಕೆಯಲ್ಲಿ



ಬಾಣಪೀಡಿತ ಹಂಸಪಕ್ಷಿಯನ್ನು ಸಿದ್ಧಾರ್ಥನು ಆದರಿಸುತ್ತಿರುವುದು

ಹೋಗಿ ನಾಟಿಕೊಂಡಿತು. ಮುಂದೆ ಹಾರಲಾಗದೆ, ನೋವನ್ನು ತಡೆಯಲಾರದೆ ಹಂಸಪಕ್ಷಿಯು ಸಿದ್ಧಾರ್ಥನು ಕುಳಿತಿದ್ದೆಡೆಯಲ್ಲಿ ಚೀರುತ್ತ ಕೆಳಗೆ ಬಿದ್ದಿತು.

ಅದನ್ನು ನೋಡಿದ ಸಿದ್ಧಾರ್ಥನು ಸಿಮ್ಮನೆನ್ನು ಪಕ್ಷಿಯು ಬಿದ್ದೆಡೆಗೆ ಓಡಿದನು. ಬಾಣವು ಅದರ ರೆಕ್ಕೆಯನ್ನು ಹೊಕ್ಕು ಒಡಲಲ್ಲಿ ನಾಟಿಕೊಂಡಿದ್ದುದನ್ನು ಕಂಡನು. ಅದರ ಬಿಳಿಯ ಗರಿಗಳು ಥಳಥಳಿಸುವ ಕೆಂಗನೆಯು ರಕ್ತದಿಂದ ತೊಯ್ದುಹೋಗಿದ್ದುವು. ಪಕ್ಷಿಯು ವಿಶೇಷವಾಗಿ ಗಾಯಗೊಂಡಿದ್ದಿತು. ದಯಾಮಯನಾದ ಸಿದ್ಧಾರ್ಥನು ಹಂಸಪಕ್ಷಿಯನ್ನು ನಯದಿಂದ ಎರಡು ಕೈಗಳಿಂದಲೂ ಮೇಲಕ್ಕೆತ್ತಿ, ತನ್ನ ಮಡಿಲಲ್ಲಿ ಇರಿಸಿದನು. ವಾಡಿಕೆಯಂತೆ (ಕಾಲುಗಳನ್ನು) ಚಕ್ಕಳ ಮಕ್ಕಳ ಹಾಕಿಕೊಂಡು ಹಸಿರು ಹುಲ್ಲಿನಮೇಲೆ ಕುಳಿತನು; ಅವನ ನುಡಿಗಳಿಂದ ನೊಂದಿರುವ ಪಕ್ಷಿಯನ್ನು ಬಗೆ ಬಗೆಯಾಗಿ ಸಂತೈಸತೊಡಗಿದನು.

"ಎಲೈ ಪಕ್ಷಿಯೇ! ಅನಾಥ ಹಕ್ಕಿ! ನಿನ್ನನ್ನು ಹೊಡೆದು ನೋವುಂಟು ಮಾಡಿದ ಅಧರ್ಮಾತ್ಮನಾರು? ಪಾಪಿಷ್ಠ! ಭಯದಿಂದಲೂ, ನೋವಿನಿಂದಲೂ ನೀನೆಂತು ನಡುಗುತ್ತಿರುವೆ!"

ಹೀಗೆನ್ನುತ್ತ, ದುಂಡಗಿದ್ದ ಅದರ ಕತ್ತನ್ನು ತಡವುತ್ತ, ಪಕ್ಷಿಯನ್ನು ತನ್ನ ಹೃದಯಕ್ಕೆ ಅಪ್ಪಿಕೊಂಡು ಸಂತೈಸಿ ಲಾಲಿಸಿದನು. ನಡುಗುತ್ತಿದ್ದ ಅದರ ರೆಕ್ಕೆಗಳನ್ನು ನೆಲೆಗೊಳಿಸಿ ತನ್ನ ಮೃದುಹಸ್ತಗಳಿಂದ ಅವುಗಳನ್ನು ಸವರಿ ಶಾಂತತೆಯನ್ನುಂಟುಮಾಡಿದನು. ಕೆಲಹೊತ್ತು ಚಡಪಡಿಸಿದ ನಂತರ ಹಂಸ ಪಕ್ಷಿಯು ಭಯವು ತೊಲಗಿ ಬದು ಶಾಂತತೆಯಿಂದ ಸಿದ್ಧಾರ್ಥನ ತೊಡೆಯಲ್ಲಿ ಮಲಗಿ ವಿಶ್ರಮಿಸಿಕೊಂಡಿತು.

ತನ್ನ ಎಡಗೈಯಿಂದ ಪಕ್ಷಿಯನ್ನು ಹಿಡಿದು, ಬಲಗೈಯಿಂದ ಪಕ್ಷಿಯ ರೆಕ್ಕೆಯಲ್ಲಿ ನಾಟಿಕೊಂಡಿದ್ದ ಬಾಣವನ್ನು ಸಿದ್ಧಾರ್ಥನು ಹೊರಗೆಳೆದನು. ಆಗ ರಕ್ತವು ಚಿಮ್ಮಿ ಹರಿಯಿತು; ಹಕ್ಕಿಯು ನೋವನ್ನು ಸಹಿಸಲಾರದೆ ಚಿಟ್ಟನೆ ಚೀರಿತು. ಸಿದ್ಧಾರ್ಥನ ಮೈಕೈಗಳು ರಕ್ತಮಯವಾದುವು. ಆ ರಕ್ತಧಾರೆಯನ್ನು ಕಂಡೊಡನೆಯೆ ಅವನ ಹೃದಯದಲ್ಲಿ ಅಲ್ಲೋಲಕಲ್ಲೋಲವುಂಟಾಯಿತು. ಚಿಲುಮೆಯ ನೀರಿನಿಂದ ಗಾಯವನ್ನು ತೊಳೆದು, ತಂಪಾದ ಹಸಿರೆಲೆಗಳ ರಸವನ್ನು ಹಿಂಡಿ, ಜೇನುತುಪ್ಪದಿಂದ ತಿಕ್ಕಿದನು.

ಅದುವರೆಗೂ ಗುಣನಿಧಿ ಸಿದ್ಧಾರ್ಥ ರಾಜಪುತ್ರನಿಗೆ ನೋವಿನ ಸುಳಿವು ಇಂತಹುದೆಂಬುದರ ಅರಿವಾಗಿರಲಿಲ್ಲ. ಬಾಣವನ್ನು ಹಿಡಿದೆಳೆಯುವಾಗ ಅದರ ತೀಕ್ಷ್ಣವಾದ ಮೊನೆಯು ಅವನ ಮಣಿಕಟ್ಟನ್ನು ಪರಚಿತು; ಅದರಿಂದುಂಟಾದ ನೋವನ್ನು ಸಹಿಸಲಾರದೆ ಅವನು 'ಅಯ್ಯೋ' ಎಂದು ಕ್ಷಣಕಾಲ ಸೋತು ಸೊರಗಿದನು. ಅವನ ಕಣ್ಣಿನಿಂದ ಶೋಕಭಾಷ್ಪವು ಸುರಿಯಿತು. ಆಗಲೆ ತನಗುಂಟಾದ ಗಾಯದಿಂದ ಆ ಬಡಪಕ್ಷಿಯು ಎಷ್ಟೊಂದು ನೊಂದಿರಬೇಕೆಂದು ಅವನಿಗೆ ಅರಿವುಂಟಾಯಿತು. ಮತ್ತೊಮ್ಮೆ ಹಂಸಪಕ್ಷಿಯನ್ನು ತನ್ನ ಇರುಕೈಗಳಲ್ಲಿ ಆದರದಿಂದ ಹಿಡಿದೆತ್ತಿ ಕಂದನಂತೆ ಅದನ್ನು ಮುದ್ದಿಸಿ, ಲಾಲಿಸಿ, ಎದೆಗೆ ತಬ್ಬಿಕೊಂಡು, ನಯವಾದ ಮೃದುನುಡಿಗಳಿಂದ ಸಂತೈಸಿದನು

ಅದೇ ಕಾಲಕ್ಕೆ ಸರಿಯಾಗಿ ದೇವದತ್ತನ ದೂತನೊಬ್ಬನು ಸಿದ್ಧಾರ್ಥನ ಇದಿರಿನಲ್ಲಿ ಬಂದು ನಿಂತು ಆ ಪಕ್ಷಿಯನ್ನು ಕೊಟ್ಟುಬಿಡುವಂತೆ ಕೇಳಿದನು. "ನನ್ನ ನಾಯಕನು ಹಂಸಪಕ್ಷಿಯೊಂದಕ್ಕೆ ಗುರಿಯಿಟ್ಟು ಹೊಡೆದನು ಅದು ಈ ಲತಾನಿಕರದ ನಡುವಿನಲ್ಲಿ ಬಿದ್ದಿತು. ಅದನ್ನು ತಮಗೆ ಕೊಟ್ಟು ಬಿಡುವಂತೆ ನಿಮ್ಮಲ್ಲಿ ವಿಜ್ಞಾಪಿಸಿಕೊಳ್ಳಲು ನನ್ನನ್ನು ಇಲ್ಲಿಗೆ ಕಳುಹಿಸಿರುವನು." ಆದರೆ ದೇವದತ್ತನ ದೂತನನ್ನು ಕಂಡು ಹಂಸಪಕ್ಷಿಯನ್ನು ತಾನು ಕೊಡುವುದಿಲ್ಲವೆಂದು ಸ್ಪಷ್ಟವಾಗಿ ನುಡಿದು, ನಯವಾದ ಮಾತುಗಳನ್ನಾಡಿ ಸಿದ್ಧಾರ್ಥನು ಅವನನ್ನು ಕಳುಹಿಸಿಬಿಟ್ಟನು.

ಸಿದ್ಧಾರ್ಥನನ್ನು ಕಂಡರೆ ದೇವದತ್ತನಿಗೆ ಹಿಡಿಸುತ್ತಿರಲಿಲ್ಲ ಅವನ ಅನೇಕಾನೇಕ ಸುಗುಣಗಳಿಗಾಗಿ ಸಿದ್ಧಾರ್ಥನನ್ನು ಪ್ರಜಾಸಮೂಹವು ಮುಕ್ತಕಂಠದಿಂದ ಹೊಗಳುತ್ತಿದ್ದುದರಿಂದ ಅವನಲ್ಲಿ ದೇವದತ್ತನಿಗೆ ಅಸೂಯೆಯು ತುಂಬಿಹೋಗಿದ್ದಿತು. ಅವನ ಮೃದುಸ್ವಭಾವವನ್ನು ಕಂಡು ದೇವದತ್ತನು ಅವಹೇಳನ ಮಾಡುತ್ತಿದ್ದನು ಕ್ಷತ್ರಿಯರಿಗೆ ಇಂತಹ ಹೃದಯ ಮೃದುತ್ವವು ಸಲ್ಲದೆಂದೂ, ಅದು ಅವನ ದೌರ್ಬಲ್ಯವನ್ನು ಸೂಚಿಸತಕ್ಕುದೆಂದೂ ಅವನು ಎಣಿಸಿದನು

ಸ್ವಲ್ಪ ಹೊತ್ತಿಗೆ ದೇವದತ್ತನೇ ಸಿದ್ಧಾರ್ಥನಿದ್ದೆಡೆಗೆ ಬಂದನು. ಕೋಪದಿಂದ ಅವನ ಕಣ್ಣುಗಳು ಕೆಂಪೇರಿದ್ದುವು. ಸಿದ್ಧಾರ್ಥನು ತನ್ನ

ಇಷ್ಟಾರ್ಥವನ್ನು ಸಲ್ಲಿಸದೆ ತನ್ನನ್ನು ಅಲ್ಲಗಳೆದುದು ದೇವದತ್ತನಿಗೆ ಸಹಿಸಲಿಲ್ಲ.

"ಸಿದ್ಧಾರ್ಥ! ಪಕ್ಷಿಯನ್ನು ಕೊಡದೆ ನನ್ನ ಕಿಂಕರನನ್ನು ಬರಿಯ ಕೈಯಲ್ಲಿ ಕಳುಹಿಸಿದುದೇಕೆ?" ಕೋಪದಿಂದ ಗುಡುಗುಡಿಸುತ್ತ ದೇವದತ್ತನು ಕೇಳಿದನು. "ಈ ಹಂಸಪಕ್ಷಿಯು ನನ್ನದು; ಇದನ್ನು ನಾನು ಹೊಂದಲೇ ಬೇಕು. ತಿಳಿಯಿತೇ?"

"ಪ್ರೇಮಮಯ ಬಂಧುವೆ! ಇದು ನಿನ್ನದಾಗಿದ್ದಲ್ಲಿ ಅತ್ಯಂತ ಸಂತೋಷದಿಂದ ಇದನ್ನು ನಿನಗೊಪ್ಪಿಸಿಬಿಡಲು ನಾನು ಸಿದ್ಧನಾಗಿದ್ದೇನೆ. ಆದರೆ ಇದು ನಿನ್ನದಲ್ಲ"

ಸಿದ್ಧಾರ್ಥನು ಶಾಂತವಾಗಿ, ದೃಢವಾಗಿ ಪ್ರತ್ಯುತ್ತರವಿತ್ತನು.

"ನನ್ನದಲ್ಲದೆ ಈ ಪಕ್ಷಿಯು ಮತ್ತಾರದು?" ದೇವದತ್ತನು ಕೇಳಿದನು. "ಇದನ್ನು ಗುರಿಯಿಟ್ಟು ಹೊಡೆದವನು ನಾನೇ ಅಲ್ಲವೆ? ಆದರಿಂದಲೇ ಅದು ನನ್ನದೆಂದು, ಅದನ್ನು ನನಗೆ ಕೊಟ್ಟುಬಿಡೆಂದು ಕೇಳುತ್ತಿರುವುದು. ಸುಮ್ಮನೆ ತರ್ಕವಾದಿಸುತ್ತ ಮರುಮಾತಿಲ್ಲದೆ ಪಕ್ಷಿಯನ್ನು ನನಗೆ ಕೊಟ್ಟು ನಿನ್ನ ಕೆಲಸವನ್ನು ನೋಡು. ವೃಥಾ ಕಾಲಹರಣವು ಯೋಗ್ಯವಲ್ಲ; ತಿಳಿಯಿತೆ!"

"ತಿಳಿಯಿತು; ದೇವದತ್ತ! ಸುಮ್ಮನೆ ಕಂಠಶೋಷಣೆ ಮಾಡಿಕೊಳ್ಳುವುದು ಒಳಿತಲ್ಲ; ಕೋಪವು ಕೆಲಸಕ್ಕೆ ಬರುವುದಲ್ಲ" ಸಹನಾಶೀಲನಾದ ಸಿದ್ಧಾರ್ಥನು ಹೇಳಿದನು "ಈ ಪಕ್ಷಿಯು ಸತ್ತುಹೋಗಿದ್ದರೆ, ಆಗ ನಿನ್ನ ಬೇಡಿಕೆಯು ಸಮಂಜಸವಾಗಿರುತ್ತಿದ್ದಿತು. ಆದರೆ ಇದು ಜೀವಿಸಿದೆ. ಇದರ ರೆಕ್ಕೆಯಲ್ಲಿ ಕೂರಂಬನ್ನು ಕ್ರೌರ್ಯದಿಂದ ನಾಟಿ ಇದರ ಗಮನ ವೇಗವನ್ನು ನೀನು ಕುಂದಿಸಿದೆ ಮಾತ್ರ!"

ಕೋಪದಿಂದ ಕುದಿಯುತ್ತ ದೇವದತ್ತನು ಕೇಳಿದನು: "ಯಾರ ಶಾಸನವಿದು? ಸತ್ತಿರಲಿ, ಸಜೀವವಾಗಿರಲಿ, ಅಡವಿ ಹಕ್ಕಿಗಳನ್ನು ವಾಯುಮಂಡಲದಿಂದ ಕೆಡಹಿದರೆ ಅವು ಕೆಡಹಿದವರ ಸ್ವತ್ತಲ್ಲದೆ ಮತ್ತಾರದು? ವಾಯುಮಂಡಲದಲ್ಲಿಯೇ ಸಂಚರಿಸುತ್ತಿರುವಲ್ಲಿ ಹಕ್ಕಿಗಳು

ಯಾರೊಬ್ಬರಿಗೂ ಸೇರಿದುದಲ್ಲ; ನಿಜ. ಆದರೆ ಗುರಿಯಿಟ್ಟು ಜಾಣ್ಮೆಯಿಂದ ಕೂರಂಬುಗಳನ್ನು ಪ್ರಯೋಗಿಸಿ ಇದನ್ನು ಕೆಳಗುರುಳಿಸಿದವನು ನಾನು. ನನಗಿಂತಲೂ ನಿನಗೆ ಈ ಪಕ್ಷಿಯಮೇಲೆ ಹೆಚ್ಚಿನ ಅಧಿಕಾರ ವಿರುವುದೇನು ? ಬಿಡುಬಿಡು-ಈ ಕುತರ್ಕವನ್ನು. ಕೊಡು-ನನ್ನ ಪಕ್ಷಿಯನ್ನು ನನಗೆ. ಅದು ನನಗೆ ಸೇರಿದುದು."

ಪಕ್ಷಿಯ ಕಂಠವನ್ನು ತನ್ನ ನಯವಾದ ಕೆನ್ನೆಗೆ ಒರಗಿಸಿಕೊಂಡು "ಇಲ್ಲ; ರಕ್ಷಣ ತತ್ತ್ವದಿಂದ, ದಯಾಸೂತ್ರದಿಂದ ಈ ಪಕ್ಷಿಯು ನನ್ನದು. ಇದು ನನ್ನನ್ನು ಮೊರೆಹೊಕ್ಕಿತು. ನಾನಿದಕ್ಕೆ ಆಶ್ರಯವನ್ನಿತ್ತಿರುವೆನು. ಇದಕ್ಕೆ ದಯೆಯನ್ನು ತೋರುವುದು ನನ್ನ ಕರ್ತವ್ಯ. ನೀನೇನೇ ಹೇಳು. ಶರಣಾಗತವಾದ ಈ ಪಕ್ಷಿಯನ್ನು ಬಿಟ್ಟುಕೊಡುವುದು ಸರ್ವಥಾ ಧರ್ಮವಲ್ಲ. ಈ ವಿಚಾರದಲ್ಲಿ ನಿನಗೆ ಸಮ್ಮತಿಯುಂಟಾಗದಿದ್ದ ಪಕ್ಷದಲ್ಲಿ ತಿಳಿದವರ ಸಮ್ಮುಖದಲ್ಲಿ ನಮ್ಮ ವ್ಯವಹಾರವನ್ನು ವಿಮರ್ಶೆಗೆ ಒಪ್ಪಿಸೋಣ; ಅವರ ನಿರ್ಧಾರದಂತೆ ನಡೆದುಕೊಳ್ಳೋಣ. ಆಗಬಹುದಷ್ಟೆ ?"

ಆ ಬಡಪಕ್ಷಿಯು ಸಿದ್ಧಾರ್ಥನ ವಕ್ಷಸ್ಥಲದಲ್ಲಿ ಇನ್ನೂ ಭದ್ರವಾಗಿ ಹುದುಗಿಕೊಂಡಿತು.

೩

ರಾಜಪುತ್ರರಿರುವರಿಗೂ ಉಂಟಾದ ಕಲಹದ ಸಮಾಚಾರವು ಶುದ್ಧೋಧನ ಮಹಾರಾಜನ ಕಿವಿಯಲ್ಲಿ ಬಿದ್ದಿತು. ಆತನು ತನ್ನ ಆಸ್ಥಾನ ಸಚಿವರನ್ನೂ ಪಂಡಿತರನ್ನೂ ಸಭೆಗೆ ಆಹ್ವಾನಿಸಿದನು. ವೈಭವಭರಿತವಾದ ಸಭೆಯನ್ನು ನಡೆಸಿದನು. ರಾಜ್ಯದ ಎಲ್ಲೆಡೆಗಳಿಂದಲೂ ವಿದ್ವನ್ಮಣಿಗಳು ಅಲ್ಲಿ ಬಂದು ನೆರೆದರು. ಇಂತಹ ಕೌತುಕಜನಕವಾದ ವಿವಾದವನ್ನು ಇದುವೊದಲು ಅವರು ಕಂಡು ಕೇಳಿರಲಿಲ್ಲ.

ನೆರೆದ ಮಹಾಮೇಧಾವಿಗಳನ್ನು ಕುರಿತು ರಾಜಪುತ್ರರ ವಿವಾದದಲ್ಲಿ ಧರ್ಮಸಮ್ಮತವಾದ ತೀರ್ಪನ್ನು ಕೊಡುವಂತೆ ಮಹಾರಾಜನು ಪ್ರಾರ್ಥಿಸಿದನು. ಸಭಿಕರೆಲ್ಲರೂ ತಮ್ಮ ತೀರ್ಮಾನಕ್ಕಾಗಿ ಒಪ್ಪಿಸಲ್ಪಟ್ಟ ವಿಚಾರವನ್ನು ಕುರಿತು

ದೀರ್ಘಕಾಲ ಪರ್ಯಾಲೋಚಿಸಿದರು. ಸಾಧಕಬಾಧಕಗಳನ್ನು ಮುಂದಿಟ್ಟು ಸ್ಪಷ್ಟವಾಗಿ ಚರ್ಚಿಸಿದರು. ವಿದ್ವನ್ಮಣಿಗಳ ಇತ್ಯರ್ಥವು ಅನೇಕ ತೆರನಾಗಿದ್ದಿತು. ಶಾಂತಿಯ ಉಪಾಸಕನಾದ ಸಿದ್ಧಾರ್ಥನ ಪರವಾಗಿ ಹಲವರು ತೀರ್ಪನ್ನಿತ್ತರು. ನೋವುಂಡ, ತನ್ನನ್ನು ಶರಣುಹೊಕ್ಕ, ಪಕ್ಷಿಯನ್ನು ಕಾಯುವುದೇ ಅವನ ಪರಮ ಧರ್ಮವೆಂದರು. ದೇವದತ್ತನ ಪರವಾಗಿ ವಾದಿಸಿದವರನೇಕರ ಅಭಿಪ್ರಾಯವೂ ಹುರುಪಿನಿಂದ ಕೂಡಿದ್ದಿತು. ತಮ್ಮ ತೀರ್ಮಾನಕ್ಕೆ ಸರಿಹೊಂದುವಂತೆ ಅವರು ಅನೇಕಾನೇಕ ಕಾರಣಗಳನ್ನು ಸಭೆಯ ಮುಂದಿಟ್ಟರು. ಬೇಟೆಯ ಶಾಸನದಂತೆ ದೇವದತ್ತನು ಪಕ್ಷಿಯನ್ನು ಪಡೆಯುವುದೇ ನ್ಯಾಯವೆಂದು ಅವರು ಉದ್ಘೋಷಿಸಿದರು.

ತರ್ಕದ ಆವೇಶದಲ್ಲಿ ಅನೇಕ ಪಂಡಿತರು ಅಳವಿಗೆ ಮಿಂಚಿದ ಕೋಪಕ್ಕೆ ವಶರಾದರು; ಬಿರುನುಡಿಗಳನ್ನಾಡಿದರು. ವಿವೇಕಿಗಳು ಒಬ್ಬರೊಂದಿಗೊಬ್ಬರು ಕಚ್ಚಾಡಿದರೆ ಧರ್ಮಸಮ್ಮತವಾದ ನ್ಯಾಯವನ್ನು ನೆಲೆನಿಲ್ಲಿಸುವವರಾರು? ದಯಾಮಯನಾದ ಮಹಾರಾಜನಿಗೆ ಏನೊಂದನ್ನು ಮಾಡಲೂ ತೋರದಂತಾಯಿತು.

ಆ ಸಮಯದಲ್ಲಿ ಕುಗ್ಗಿದ ಶರೀರದ, ನೆರೆತ ಕೂದಲುಳ್ಳ, ವೃದ್ಧತಾಪಸನೊಬ್ಬನು ಸಭೆಯಲ್ಲಿ ಎದ್ದುನಿಂತನು. ಆಶ್ಚರ್ಯಚಕಿತರಾಗಿ ಸಭಿಕರೆಲ್ಲರೂ ಆತನ ಬಾಯಿಂದ ಏನು ಇತ್ಯರ್ಥವು ಹೊರಡುವುದೋ ನೋಡಬೇಕೆಂದು ಉತ್ಸುಕಗೊಂಡರು. ಶಾಂತವಾಗಿಯೂ ನಮ್ರವಾಗಿಯೂ ವೃದ್ಧತಾಪಸನು ಸಭಿಕರನ್ನು ಕುರಿತು ಈ ರೀತಿ ಹೇಳಿದನು;

“ಹೇ ಧರ್ಮಪ್ರಭುವೇ! ಪಂಡಿತಶಿರೋಮಣಿಗಳೇ! ವಿವೇ ಸಂಪನ್ನರೆ! ಕೇಳಿರಿ. ಈ ರಸಭರಿತವಾದ ವಿಚಾರದಲ್ಲಿ ನಾವು ಕೇಳಿದ ಅ ಪ್ರಾಯವು ಅನೇಕ ತೆರನಾಗಿವೆ. **“ಪ್ರಾಣವು ಪರಮಾತ್ಮನಿಂದ ಅನು ಹಿಸಲ್ಪಟ್ಟ ಅತ್ಯಮೂಲ್ಯವಾದ ದಾನ”** ಎಂಬ ಅಂಶವನ್ನು ನಮ್ಮ ಯಾರೂ ಮರೆಯಬಾರದು. ಪ್ರಾಣವನ್ನು ಉಳಿಸುವುದಕ್ಕೂ ಅಳಿಸು ದಕ್ಕೂ ನಮಗೆ ಶಕ್ತಿ ಇದೆ; ನಿಜ, ಮತ್ತೊಂದು ಜೀವಿಯ ಪ್ರಾಣವನ್ನು ಉಳಿಸಿದವನು ಆ ಜೀವಿಗೆ ಒಡೆಯನಾಗುತ್ತಾನೆ. ಅದನ್ನಳಿಸುವುದ

ಪ್ರಯತ್ನಿಸುವವನಿಗೆಂದಿಗೂ ಅದರ ಮೇಲೆ ಅಧಿಕಾರವುಂಟಾಗುದಿಲ್ಲ ಕೊಲ್ಲುವವನು ಜೀವಿಯನ್ನು ಹದಗೆಡಿಸಿ ನಾಶಗೊಳಿಸುತ್ತಾನೆ. ರಕ್ಷಕನು ಅದನ್ನು ಉತ್ತಮಸ್ಥಿತಿಯಲ್ಲಿಟ್ಟು ಅದರ ಉಪಯೋಗ ಹೊಂದುತ್ತಾನೆ. ಸಿದ್ಧಾರ್ಥನಿಗೆ ಈ ಪಕ್ಷಿಯು ಸೇರತಕ್ಕದ್ದು. ಅದನ್ನವನಿಗೆ ಕೊಟ್ಟುಬಿಡಿ.”

ವೃದ್ಧತಾಪಸನು ಈ ರೀತಿ ನುಡಿದು ತನ್ನ ಆಸನದಲ್ಲಿ ಕುಳಿತುಕೊಂಡನು. ಸಮಸ್ತ ಸಭಿಕರೂ ವೃದ್ಧನ ಸಮ್ಮತವಾದ ತೀರ್ಪನ್ನು ಅನುಮೋದಿಸಿ ಕೋಲಾಹಲದಿಂದ ತಮ್ಮ ಸಮ್ಮತಿಯನ್ನು ಸೂಚಿಸಿದರು. ಅತನ ಇತ್ಯರ್ಥವು ನ್ಯಾಯವೂ ಆದುದೆಂದು ಪ್ರಶಂಸಿಸಿದರು. ಧನಾಢ್ಯನಾದ ಮಹಾರಾಜನು ವೃದ್ಧನಿಗೆ ತಕ್ಕರೀತಿಯಲ್ಲಿ ಸನ್ಮಾನವನ್ನು ಮಾಡುವುದಕ್ಕೆಂದು ಮೇಲೆದ್ದನು. ಆದರೆ ಸಚಿವೋತ್ತಮರು ಎಷ್ಟು ಹುಡುಕಿದರೂ ಆತನನ್ನು ಸಭೆಯಲ್ಲಿ ಕಾಣದೆ ಹೋದರು. ಆ ವೇಳೆಗೆ ಆತನು ಎಲ್ಲಿಯೋ ಮಾಯವಾಗಿಬಿಟ್ಟಿದ್ದನು. ಸಚಿವರು ನಿರುತ್ಸಾಹಿಗಳಾದರು ಮಹಾರಾಜನು ದಿಗ್ಭ್ರಾಂತನಾದನು ಎಲ್ಲರೂ ಉತ್ಸಾಹದಿಂದ ಮೈದುಂಬಿ ಹಿಗ್ಗುತ್ತಿದ್ದ ವೇಳೆಯಲ್ಲಿಯೇ ವೃದ್ಧನು ಮಾಯವಾಗಿದ್ದನು. ದೊಡ್ಡದಾದ ಹೆಡೆಯುಳ್ಳ ಸರ್ಪವೊಂದು ಸಭೆಯನ್ನು ಬಿಟ್ಟು ರಾಜೋದ್ಯಾನವನದಲ್ಲಿ ಪೊದರಿನಲ್ಲಿ ಹರಿದುಹೋದುದನ್ನು ತಾವು ನೋಡಿದುದಾಗಿ ಹಲವು ಸಭಿಕರು ಮಹಾರಾಜನಲ್ಲಿ ವಿಜ್ಞಾಪಿಸಿದರು. ಅಗ ಅವರಿಗೆ ಭಾಸವಾಯಿತು. ಸರ್ವಸಮ್ಮತವಾದ, ಧರ್ಮ ನ್ಯಾಯಕ್ಕನುಗುಣವಾದ ತೀರ್ಪನಿತ್ತು, ವಾದವಿವಾದಗಳನ್ನು ಕೊನೆಗಾಣಿಸಿದ ಆ ವೃದ್ಧ ತಾಪಸನು ಪರಮಾತ್ಮನೇ ಎಂದು ಅವರು ನಂಬಿದರು. ಪರಮಾತ್ಮನನ್ನುಳಿದು ಮತ್ತಾರಿಗೆ ಈ ತೆರನಾದ ವಿಚಿತ್ರ ಲೀಲೆಗಳನ್ನು ತೋರಿಸಲು ಸಾಧ್ಯವಾದೀತು ?

ಮರುದಿನ ಸಿದ್ಧಾರ್ಥನು ಹಂಸಪಕ್ಷಿಯ ಗಾಯವು ಮಾಯವಾದುದನ್ನು ಕಂಡು ಅದನ್ನು ಮುದ್ದಿಟ್ಟು, ಪ್ರೇಮಭರದಿಂದ ಎದೆಗಪ್ಪಿ, ಮೈದಡವಿ, ಅದಕ್ಕೆ ಸ್ವಾತಂತ್ರ್ಯ ಭಿಕ್ಷೆಯನ್ನು ನೀಡಿದನು. ರಾಜಪುತ್ರನನ್ನೊಮ್ಮೆ ಕೃತಜ್ಞತೆಯಿಂದ ನೋಡಿ ಅವನ ಪಾದಗಳನ್ನು ಮುತ್ತಿಟ್ಟು, ಸಂತೋಷದಿಂದ ಹಂಸಪಕ್ಷಿಯು ಗಗನಾಭಿಮುಖವಾಗಿ ಹಾರಿಹೋಯಿತು

ಮನೋಹರ ಹಂಸಪಕ್ಷಿಯು ಆನಂದದಿಂದ ಆಕಾಶಮಾರ್ಗವಾಗಿ ಹಾರಿ ಹೋಗುತ್ತಿದ್ದುದನ್ನು ನೋಡಿ ಸಿದ್ಧಾರ್ಥನೂ ಪರಮಾನಂದಭರಿತನಾದನು.

ನಗರದ ಮತ್ತೊಂದು ವನದಲ್ಲಿ ಕಾಯುತ್ತಿದ್ದ ಇತರ ಹಂಸಪಕ್ಷಿಗಳು ತಮ್ಮ ನಾಯಕನ ಬರುವಿಕೆಯನ್ನು ಕಂಡು ಸಂತಸಗೊಂಡು ಎಲ್ಲವೂ ತಮ್ಮ ವಾಸಸ್ಥಾನವನ್ನು ಕುರಿತು ಚಿಲಿಪಿಲಿಗುಟ್ಟುತ್ತ ಹಾರಿಹೋದವು.

ಮಿಠಾಯಿ ಬುಟ್ಟಿ

"ಇನ್ನೆಷ್ಟು ಕಾಲ ಈ ಪಹರೆಯ ಕೆಲಸವನ್ನು ನಡೆಸಬೇಕು?" ದಣಿದ ಹುಸೇನನು ಇರಾನಿಯನ್ನು ಕೇಳಿದನು. "ಈಗಾಗಲೇ ಒಂದು ವಾರವಾಯಿತು. ಇನ್ನೇನಿದೆ ಪಹರೆ ಇರುವುದಕ್ಕೆ?"

"ಹಾಗೆಂದರೇನು ಹುಸೇನ? ಶಿವಾಜಿಯನ್ನು ಈಗಲೇ ಬಿಟ್ಟುಬಿಡುವರೇನು? ಬಾದಶಹನು ಅವನನ್ನು ಸೆರೆಹಿಡಿದಿರುವುದೇತಕ್ಕೆ ತಿಳಿಯದೆ? ಬಾದಶಹನಿಗೆ ಬೇಕಾದನೆಂದು ತೋರಿದರೆ ಈ ಮಹಲಿನಿಂದ ಶಿವಾಜಿಯನ್ನು ಬಿಡಬಹುದು. ಆಗ ನಮಗೂ ಈ ಪಹರೆಯ ಕೆಲಸವು ತಪ್ಪುವುದು. ಅದುವರೆಗೂ............—"

"ಅದುವರೆಗೂ ನಾವಿಲ್ಲಿ ನೊಣ ಹೊಡೆಯುತ್ತ ಕುಳಿತಿರಬೇಕು ಅಲ್ಲವೆ?"

"ನೊಣ ಹೊಡೆಯದಿದ್ದರೆ ಬೆಕ್ಕಿನ ಮರಿಯನ್ನು ತಂದಿಟ್ಟುಕೊಂಡು ಆಟವಾಡಿಸುತ್ತಿರು–ಬೇಡವೆಂದವರಾರು?"

"ಇರಾನಿ! ಅದಿರಲಿ. ಈ ವೀರ ಶಿವಾಜಿಯು ಬಾದಶಹನ ಬಲೆಯಲ್ಲಿ ಬಿದ್ದುದಾದರೂ ಹೇಗೆ?"

ಹುಸೇನನು ಕೇಳಿದನು.

"ಅದರಲ್ಲೇನು ಆಶ್ಚರ್ಯ! ಹುಂ! ಸ್ವಲ್ಪ ಗಾಂಜ ತಾ ಇತ್ತಲಾಗೆ; ಹೇಳುತ್ತೇನೆ."

ಹುಸೇನನೂ ಇರಾನಿಯೂ ಗಾಂಜ ಸೇದುತ್ತ ಕುಳಿತರು. ಇರಾನಿಯು ಹೇಳಿದನು.

"ಶಿವಾಜಿಯನ್ನು ಸೆರೆಹಿಡಿದುದೇನೂ ಆಶ್ಚರ್ಯವಲ್ಲ. ಘಟ್ಟಿಗನಾದ ಸೇನಾಧಿಪತಿ ಜಯಸಿಂಹನು ದೆಹಲಿ ಆಸ್ಥಾನದಲ್ಲಿ ಉನ್ನತಪದವಿಯನ್ನೂ ಬಹುಮಾನಗಳನ್ನೂ ಕೊಡಿಸುತ್ತೇನೆಂದು ಹೇಳಲು ಶಿವಾಜಿಯ ಬಾಯಲ್ಲಿ ನೀರೂರಿತು. ಅವನು ಬಾದಶಹನ ಕುಟಿಲೋಪಾಯಗಳಿಗೆ ಬಲಿಯಾಗಿ ಈಗ



ವೀರ ಶಿವಾಜಿ ಮಹಾರಾಜ್

ನಮ್ಮಿಬ್ಬರ ಸೆರೆಯಲ್ಲಿ ಬಂದಿಯಾಗಿದ್ದಾನೆ. ಇರಲಿ; ಶಿವಾಜಿಯ ಕಡೆ ಜನರು ಒಳ್ಳೆಯವರು. ಇನ್ನೊಂದು ವಿಚಾರ-ಹುಸೇನ!"

"ಏನದು?"

ಶಿವಾಜಿಗೆ ಮೊಗಲಾಯಿ ದಕ್ಷಿಣದ ಮುಖ್ಯ ಆಡಳಿತವನ್ನು ಬಾದಶಹನು ಒಪ್ಪಿಸುವನೆಂದೂ ಜಯಸಿಂಹನು ಆಶೆ ತೋರಿಸಿರುವನಂತೆ ....ಆದ್ದರಿಂದ."

"ಆದರೆ ಮಹಾರಾಷ್ಟ್ರ ನಾಯಕನಾದ ಶಿವಾಜಿಯು ಮೊಗಲಾಯಿ ಸೈನ್ಯಕ್ಕೆ ಬಹಳ ತೊಂದರೆಪಡಿಸಿದನಂತಲ್ಲ?"

"ಹೌದು; ಮೊಗಲ ಸಾಮ್ರಾಜ್ಯದಲ್ಲಿ ಅನೇಕ ಹಳ್ಳಿಗಳನ್ನೂ ಪಟ್ಟಣಗಳನ್ನೂ, ಕೋಟೆಕೊತ್ತಲಗಳನ್ನೂ ಅವನು ಮುತ್ತಿ ವಶಪಡಿಸಿಕೊಂಡನು. ಅಲ್ಲದೆ ಮೊಗಲ ಪ್ರಜೆಗಳನ್ನು ಕಂಗಾಲುಪಡಿಸಿ, ಕೊಳ್ಳೆ ಹೊಡೆದು ನಿಂತದೆ ನಿಲ್ಲದಂತೆ ಅವರನ್ನು ಗೋಳಾಡಿಸುವನು. ಮೊಗಲಾಯಿ ಸೈನ್ಯವು ಬಹಳ ದೊಡ್ಡದಾಗಿದ್ದರೂ ಶಿವಾಜಿಯು ಸೈನ್ಯವನ್ನು ದುರ್ಬಲಗೊಳಿಸುವುದಕ್ಕೆ ಮುನ್ನ ಬಹಳ ಕಾಲ ಹೋರಾಡಬೇಕಾಯಿತು. ಮರಾಠರೆಂದರೆ ಸಾಧಾರಣರೆಂದು ತಿಳಿದೆಯಾ ಹುಸೇನ?"

"ಏತಕ್ಕಾಯಿತು? ಮೊಗಲ ಬಾದಶಹನಿಗೆ ಶಿವಾಜಿ ಕೊಟ್ಟಿದ್ದ ತೊಂದರೆಯನ್ನು ಮರೆತ ಹಿಂದುವೂ ಇರಲಿಲ್ಲ. ಇವನನ್ನು ನನ್ನ ಕೈನಿಂದಲೇ ಬೇಗಾದನ್ನು ಕೇಳಿಸ್ತೇನೆ ಇರಾನಿ! ಏಕೆ? ನೀನು ಫಿರೋಜನ ಹೇಳಲಿಲ್ಲವೆ? ಮಕ್ಕಾಕಡೆ ಹೋಗುತ್ತಿದ್ದ ಮುಸಲ್ಮಾನ ಯಾತ್ರಾರ್ಥಿಗಳನ್ನು ಹಡಗಿನಲ್ಲಿ ಸುಲಿಗೆಮಾಡಿದನೆಂಬ ಕಾರಣದಿಂದ ಶಿವಾಜಿಯನ್ನು ಬೇಗಾದರೂ ಸಕಲ ಧ್ವಂಸಮಾಡಿಬಿಡಬೇಕೆಂದು ಬಾದಶಹನು ಹಂಬಲ ತೊಟ್ಟಿರುವನಂತೆ. ಮಕ್ಕಾ ಯಾತ್ರಾರ್ಥಿಗಳ ಗೊಡವೆಗೆ ಹೋಗದಿದ್ದರೆ ಔರಂಗಜೇಬ ಬಾದಶಹನು ಶಿವಾಜಿಯ ವಿಚಾರದಲ್ಲಿ ಇಷ್ಟೊಂದು ಕಠಿಣವಾಗಿರುತ್ತಿರಲಿಲ್ಲ. ಈಗ ಅವನನ್ನು ಹಿಡಿದು ಬೊಕ್ಕೆಯಲ್ಲಿ ಹಾಕಬೇಕೆಂದಿದ್ದಾನೆ."

"ಹುಷ್! ಬಾಯಿಮುಚ್ಚು ಹುಸೇನ! ನಿನಗೆ ಬುದ್ಧಿಯಿಲ್ಲ. ಬಾದಶಹನ ಗುಪ್ತಚಾರರು ಎಲ್ಲೆಡೆಗಳಲ್ಲಿಯೂ ಸಂಚರಿಸುತ್ತಿರುವರೆಂಬುದನ್ನು ನೀನು ಮರೆತಂತಿದೆ. ಶಿವಾಜಿಯನ್ನು ಬೊಕ್ಕೆಯಲ್ಲಿ ಹಾಕುವುದಂತಿರಲಿ! ಬೇಗನಾಗುವುದರೊಳಗೆ ಬಾದಶಹನು ನಿನ್ನನ್ನೇ ಶೂಲಕ್ಕೆ ಏರಿಸಿಬಿಟ್ಟಾನು; ಎಚ್ಚರಿಕೆ."

"ಏಕೆ?"

"ಅದಕ್ಕೆ; ಶಿವಾಜಿಯು ಬಾದಷಹನ ಅತಿಥಿ ಎಂದು ಹೊರಗೆ ಹೇಳುವುದು. ಅಂತರ್ಯವಾದರೂ ಏನು? ಅವನು ಈಗ ಬಂದಿಯಾಗಿರುವನು. ಬಾದಷಹನ ಪರಮ ವೈರಿಯಾದ ಅವನನ್ನು ಗಲ್ಲಿಗೇರಿಸಿಬಿಡುವುದು ನಿಜ. ಈ ಸಮಾಚಾರವು ಶಿವಾಜಿಗಾಗಲಿ ಅವನ ಜನರಿಗಾಗಲಿ ತಿಳಿಯಕೂಡದು. ಗಾಂಜಾವಿನ ಅಮಲೇರಿ ನಿನಗೆ 'ಸರ್ಕಾರದ ಹುಕುಂ' ಮರೆತಂತೆ ಕಾಣುತ್ತದೆ"

"ಇರಾನಿ! ನೀನೇನೇ ಹೇಳು. ಶಿವಾಜಿಯೂ ರಾಜನಲ್ಲವೆ? ಅವನ ಮುಖದಲ್ಲಿ ಎಷ್ಟು ಕಳೆ ಇದೆ ನೋಡು. ಅದಿರಲಿ; ಬೆಟ್ಟಗುಡ್ಡಗಳಲ್ಲಿ ಹಕ್ಕಿಗಳಂತೆ ಬೆಳೆದ ಈ ಶಿವಾಜಿಯು ಯಾವಾಗಲೂ ಸ್ವತಂತ್ರನಾಗಿರತಕ್ಕವನು. ನಿಮ್ಮ ಬಾದಷಹನ ಪದವಿಯಿಂದ - ಬಹುಮಾನ ಸತ್ಕಾರಗಳಿಂದ ಅವನಿಗಾಗ ಬೇಕಾದುದೇನು? ಅವನಿಗೊಂದು 'ಸಲಾಂ'ಹಾಕಿದರೆ ಒಂದು ಚಿನ್ನದ ಮೊಹರನ್ನು ಪಹರೆಯವರಿಗೆ ಎಸೆಯುವ ಪ್ರಭು ಅವನು! ಅವನ ತಾಯಿಯು ಅವನನ್ನು ಹಿಂದೂಮತಕ್ಕನುಗುಣವಾಗಿ ಸಾಕಿ ಸಲಹಿ ವಿವೇಕವನ್ನುಂಟುಮಾಡಿದ್ದಾಳೆ. ಹಿಂದುಗಳು ತಮ್ಮ ಮತಕ್ಕಾಗಿ ಪ್ರಾಣವನ್ನಾದರೂ ಧಾರೆಯೆರೆದು ಕಾದತಕ್ಕ ಪ್ರಕೃತಿಯುಳ್ಳವರು. ಅದರಲ್ಲಿಯೂ ಮರಾಠರ ನಾಯಕನಾದ ಶಿವಾಜಿಯು ಸ್ವಧರ್ಮ ಸ್ವದೇಶಗಳ ರಕ್ಷಣೆಗಾಗಿ – ಸ್ವಾತಂತ್ರ್ಯದ ಸಲುವಾಗಿ – ಅನ್ನಾಹಾರಗಳನ್ನು ತೊರೆದು ಕಾದತಕ್ಕವನೆಂದು ನಮ್ಮ ಸೈನಿಕರ ಹೇಳುತ್ತಿದ್ದಾರಲ್ಲವೆ? ಬಾದಷಹನ ಒಡಬಡಿಕೆಗೆ ಶಿವಾಜಿಯು ಬೆದರಿ ಬೆಂಡಾಗತಕ್ಕವನಲ್ಲ."

"ಇರಲಿ; ಅದನ್ನೊಪ್ಪಿಕೊಳ್ಳೋಣ............ಹಾಂ! ಗುಪ್ತಚಾರರು ಯಾರಾದರೂ ಬಂದಾರು ನೋಡು......... ...ಔರಂಗಜೇಬನು ಹಿಂದುಗಳಮೇಲೆ ತಲೆಗಂದಾಯವನ್ನು ಹಾಕಿ ಅವರ ದೇವಾಲಯಗಳನ್ನು ಒಡೆದು ಧ್ವಂಸಮಾಡುವುದನ್ನು ಶಿವಾಜಿಯಂತಹ ವೀರನಾಯಕರು ಕಣ್ಣಾರೆ ಕಂಡು ಕೈಕಟ್ಟಿಕೊಂಡು ನಿಲ್ಲುವರೇನು?"

"ಅದಕ್ಕೇ ಬಾದಷಹನನ್ನು ನಾಲ್ಕು ರೀತಿಗಳಿಂದ ಎದುರಿಸಿ ಅವನ ಸಾಮ್ರಾಜ್ಯವನ್ನು ನೆಲಮಟ್ಟ ಮಾಡಬೇಕೆಂದು ಶಿವಾಜಿಯು ಕಂಕಣ ತೊಟ್ಟಿರುವುದು. ಇಲ್ಲದಿದ್ದರೆ ರೈತರನ್ನೊಳಗೊಂಡ ಸಣ್ಣ ಸಣ್ಣ ಸೈನ್ಯಗಳನ್ನು ಮುಂದಿಟ್ಟು ಮೊಗಲ ಬಾದಷಹರನ್ನು ಶಿವಾಜಿಯು ಧೈರ್ಯದಿಂದ ಇದುರಿಸುತ್ತಿದ್ದನೆ?

ಹಿಂದೂ ಮತಕ್ಕಾಗಿ-ಅದರ ಸಂಪ್ರದಾಯಗಳನ್ನು ಉಳಿಸುವುದಕ್ಕಾಗಿ-ಹೋರಾಡುವ ಈ ಸಣ್ಣ ಸೇನೆಗಳಲ್ಲಿಯೂ ಅಂತಹ ಪ್ರಚಂಡವಾದ ಹುರುಪು ನೆಲೆಗೊಂಡಿದೆ. ಆದುದರಿಂದಲೇ ಪ್ರಬಲವಾದ ಮೊಗಲಾಯಿ ಸೈನ್ಯಗಳನ್ನು ಅವು ಧೈರ್ಯದಿಂದ ಎದುರಿಸುತ್ತಿವೆ. ಮೊಗಲರೂ ಇಂತಹ ಪ್ರತಿಘಟನೆಯನ್ನು ಹಿಂದೆಂದೂ ನೋಡಿರಲಿಲ್ಲ."

ಇರಾಸಿಂಯು ಹೇಳಿದುದನ್ನು ಅನುಮೋದಿಸಿ ಹುಸೇನನು ಹೇಳಿದನು. "ಜಯಸಿಂಹನ ನಾಯಕತ್ವದಲ್ಲಿ ಮೊಗಲ ಸೇನೆಯು ಶಿವಾಜಿಯೊಂದಿಗೆ ಎಷ್ಟೋ ಬಾರಿ ಕದನಮಾಡಿ ಅನೇಕ ದುರ್ಗಗಳನ್ನು ವಶಪಡಿಸಿಕೊಂಡಿತು. ಕಟ್ಟಕಡೆಯಲ್ಲಿ ಶಿವಾಜಿಯು ಅವನೊಂದಿಗೆ ಕವಲನ್ನು ಮಾಡಿಕೊಳ್ಳಬೇಕಾಯಿತು. ಮುಸಲ್ಮಾನ ಬಾದಶಹನಿಗೆ ತಲೆತಗ್ಗಿಸಲು ಶಿವಾಜಿಯಂತಹ ವೀರನಿಗೆ ಮನಸ್ಸೊಪ್ಪಲಿಲ್ಲ. ಕವಲು ಮಾಡಿಕೊಳ್ಳುವುದಕ್ಕೆ ಮುಂಚೆ ಅವನ ಅನುಚರರೂ ದೀರ್ಘಾಲೋಚನೆ ಮಾಡಿದರು. ಕಠಿಣಾತ್ಮನಾದ ವೈರಿಯ ದವಡೆಗಳಲ್ಲಿ ತಾನು ಸಿಲುಕಿ ನರಳಬೇಕಾದೀತು ಎಂದು ಶಿವಾಜಿಗೆ ತಿಳಿಯದೆ ಇಲ್ಲ. ಆದರೂ ಜಯಸಿಂಹನು ಹೂಡಿದ ತಂತ್ರದಿಂದ ಶಿವಾಜಿಯು ಔರಂಗಜೇಬನ ಸೆರೆಯಾಳಾದನು."

ಮಹಾರಾಷ್ಟ್ರದ ನಾಯಕನಾದ ಶಿವಾಜಿಯನ್ನು ಬಂಧಿಸಿಟ್ಟಿದ್ದ ದೊಡ್ಡ ಮಹಲಿನ ಮುಂದೆ ಪಹರೆಯಿದ್ದ ಇರಾಸಿಂಯೂ ಹುಸೇನನೂ ಬಹುಕಾಲ ತಮ್ಮಲ್ಲಿ ತಾವೇ ಮಾತನಾಡಿಕೊಳ್ಳುತ್ತಿದ್ದರು.

ಔರಂಗಜೇಬನೇನೋ ಶಕ್ತಿಯುತನಾದ ಬಾದಶಹನೇ ಅಹುದು. ಅವನು ಕಟ್ಟಾಳಿಯೂ ಸತ್ಯಸಂಧನೂ ಆಗಿದ್ದನು. ಅವನ ಜೀವನವು ಸರಳವೂ ಮಿತಸಮ್ಮತವೂ ಆಗಿದ್ದಿತು. ಆಳುವಿಕೆಯಲ್ಲಿ ಅವನು ನಿರ್ದಾಕ್ಷಿಣ್ಯದಿಂದ ವ್ಯವಹರಿಸುತ್ತಿದ್ದುದರಿಂದಲೇ ಅವನನ್ನು ಕಂಡರೆ ಎಲ್ಲರಿಗೂ ಹೆದರಿಕೆಯಿದ್ದಿತು. ಶತ್ರುಗಳ ವಿಷಯದಲ್ಲಂತೂ ಅವನ ಕ್ರೌರ್ಯಕ್ಕೂ ಅನ್ಯಾಯಕ್ಕೂ ಕೊನೆಮಿತಿಯಿರಲಿಲ್ಲ. "ಒಮ್ಮೆ ಆ ಪುಂಡ ಶಿವಾಜಿಯು ನನ್ನ ಬಂದಿಯಾದರೆ ಸಾಕು; ಮತ್ತವನು ದಿಹಲಿಯಲ್ಲಿಯೇ ಸಾಯುವವರೆಗೂ ಸೆರೆಮನೆಯಲ್ಲಿ ಬಿದ್ದು ಕೊಳೆಯಬೇಕು." ಹೀಗೆಂದು ಒಮ್ಮೆ ಶಿವಾಜಿಯ ವಿಚಾರದಲ್ಲಿ ತನ್ನನು ಪ್ರಶ್ನಿಸಿದ ಒಬ್ಬ ಸಚಿವನನ್ನು ಕುರಿತು ಹೇಳಿದನು.

ಅಕ್ಬರ್ ಬಾದಷಹನಂತೆ ಕರುಣಾಳುವಾಗಿದ್ದು ಧಾರಾಳತೆಯಿಂದ ಶಿವಾಜಿಯಲ್ಲಿ ವರ್ತಿಸಿದ್ದರೆ ಔರಂಗಜೇಬನಿಗೆ ಸಾಮ್ರಾಜ್ಯಸೂತ್ರಗಳನ್ನು ಶಿಥಿಲವಾಗದಂತೆ ಇಟ್ಟಿರಲು ಯಾವ ತಡೆಯೂ ಇರುತ್ತಿರಲಿಲ್ಲ. ನಯದಿಂದ, ವಿವೇಕದಿಂದ, ಸರಳತೆಯಿಂದ ವೀರಾಗ್ರಣಿಯಾದ ಮಹಾರಾಷ್ಟ್ರ ನಾಯಕನನ್ನು ತನ್ನ ಆಪ್ತಮಿತ್ರನನ್ನಾಗಿ ಮಾಡಿಕೊಳ್ಳುವ ರಾಜತಂತ್ರವು ಔರಂಗಜೇಬನಲ್ಲಿದ್ದಿದ್ದರೆ-ತನಗೂ ಶಿವಾಜಿಗೂ-ಅಷ್ಟೇಕೆ? ಮೊಗಲ ಸಾಮ್ರಾಜ್ಯಕ್ಕೆ ಅಡಿಗಡಿಗೆ ಒದಗಿದ ಅಸಂಖ್ಯಾತ ಕಷ್ಟನಷ್ಟಗಳನ್ನು ನಿರಾತಂಕವಾಗಿ ನಿವಾರಿಸಬಹುದಾಗಿದ್ದಿತು. ಆದರೆ ಅಕ್ಬರ್ ಬಾದಷಹನಲ್ಲಿದ್ದ ದಯಾಳು ಸ್ವಭಾವವು, ಧೀರರಲ್ಲಿ ಆ ಮಹಾಶಯನು ತೋರುತ್ತಿದ್ದ ಗೌರವ ಪುರಸ್ಕಾರಗಳು ಔರಂಗಜೇಬನಂತಹ ಕ್ರೂರಾತ್ಮನಲ್ಲಿ; ಅನ್ಯಮತ ವೈರಿಯಲ್ಲಿ, ಹೇಗೆತಾನೇ ನೆಲೆಸಿ ನಲಿದಾವು? ತನ್ನನ್ನು ಅನಂತ ಯಾತನೆಗಳಿಗೆ ದೆಹಲೀಶ್ವರನು ಗುರಿಮಾಡುವನೆಂದು ಶಿವಾಜಿಗೆ ಸ್ಪಷ್ಟವಾಗಿ ಗೊತ್ತಿದ್ದಿತು. ಆದರೂ ಜಯಸಿಂಹನ ಮಾತನ್ನು ಮನ್ನಿಸಿ ಅವನು ದೆಹಲಿಗೆ ಬರಲು ಸಮ್ಮತಿಸಿದ್ದನು.

೨

ಆ ಕಾಲದಲ್ಲಿ ಮೊಗಲಾಯಿ ಚಕ್ರವರ್ತಿಯ ಪ್ರಭುತ್ವವು ಹಿಂದೂಸ್ಥಾನದ ಅನೇಕ ಪ್ರದೇಶಗಳಲ್ಲಿ ಹಬ್ಬಿದ್ದಿತು. ಮೊಗಲಾಯಿ ಆಸ್ಥಾನವಂತೂ ಅತ್ಯಂತ ವಿಜೃಂಭಣೆಯಿಂದ ವಿರಾಜಿಸುತ್ತಿತ್ತು. ಆದರೆ ಜಹಾಂಗೀರ್ ಷಹಜಹಾನರ ಕಾಲದಲ್ಲಿದ್ದಷ್ಟು ವೈಭವವು ಈಗ ಇರಲಿಲ್ಲ. ಆಸ್ಥಾನದ ದೃಶ್ಯವು ಅತ್ಯಂತ ರಮಣೀಯವಾಗಿದ್ದು ಒಮ್ಮೆ ಅದನ್ನು ನೋಡಿದವರಿಗೆ ಮತ್ತೆಮತ್ತೆ ನೋಡಬೇಕೆಂದೆನಿಸುತ್ತಿದ್ದಿತು.

ಆಲಮಗೀರನು ಆಗ್ರಾದ ಅರಮನೆಯ ದಿವಾನ್‌ಖಾನೆಯಲ್ಲಿ ತನ್ನ ದರ್ಬಾರನ್ನು ನಡೆಸುತ್ತಿದ್ದನು. ಆ ಮನಮೋಹಕ ಭವನಕ್ಕೆ ಮೂರು ಕಡೆ ಹೆಬ್ಬಾಗಿಲಿದ್ದು ಬೆಳಕು ಗಾಳಿಗಳು ಧಾರಾಳವಾಗಿ ಪ್ರವೇಶಿಸುವುದಕ್ಕೆ ಅವಕಾಶವಿದ್ದಿತು. ಮಹಲಿನ ಮೇಲ್ಛಾವಣಿಗೂ ಸ್ಫಟಿಕ ಶಿಲೆಯಿಂದ ವಿರಚಿತವಾದ ಅನೇಕ ಸ್ಥಂಭಗಳಿಗೂ, ಅವುಗಳ ನಡುವಿನಲ್ಲಿದ್ದ ಕಮಾನುಗಳಿಗೂ ಬಗೆಬಗೆಯ ಬಣ್ಣಗಳನ್ನು ಬಳಿದು ಹೊನ್ನಿನ ರೇಖನ್ನು ಹೊದಿಸಿದ್ದಿತು.

ವಿಶಾಲವಾದ ಸಭಾಮಂಟಪದ ಮೇಲ್ಭಾಗದಲ್ಲಿ ಸುಪ್ರಸಿದ್ಧವಾದ ನವರತ್ನಾಲಂಕಾರಭರಿತ ದಿವ್ಯ ಮಯೂರಾಸನದಲ್ಲಿ ಮೊಗಲಾಯಿ ಸಾಮ್ರಾಟನು ಮಂಡಿಸುತ್ತಿದ್ದನು. ಎತ್ತರವಾದ ಗಾತ್ರವಾದ ಸಿಂಹಾಸನದ ಪಾದಗಳು ಸ್ವರ್ಣದಿಂದಲೇ ಮಾಡಲ್ಪಟ್ಟಿದ್ದವು. ಅದರ ಇರುಕಡೆಗಳಲ್ಲಿಯೂ ಇದ್ದ ಆಚ್ಛಾದನವು ವಜ್ರವೈಢೂರ್ಯಗೋಮೇಧಿಕ, ಪುಷ್ಯರಾಗ, ಪಚ್ಚೆ, ಕೆಂಪು, ಮುತ್ತು ಮೊದಲಾದ ದಿವ್ಯರತ್ನಗಳಿಂದ ಕೆತ್ತಲ್ಪಟ್ಟಿದ್ದಿತು. ಹಿಂಭಾಗದಲ್ಲಿ ರತ್ನಖಚಿತವಾದ ಮಯೂರವು ಉನ್ನತವಾಗಿ ಎದ್ದುನಿಂತಿದೆ. ಅದರ ಒಡಲಾದರೂ ಸ್ವರ್ಣದಿಂದ ನಿರ್ಮಾಣವಾದುದು. ಪಚ್ಚೆ, ನೀಲ, ಮತ್ತು ಇತರವರ್ಣಗಳ ರತ್ನಗಳಿಂದ ಕೆತ್ತಲ್ಪಟ್ಟ ಮಯೂರದ ವಿಶಾಲವಾದ ರೆಕ್ಕೆಯು ಎತ್ತಿಹಿಡಿದ ಚಾಮರದಂತೆ ಕಂಗೊಳಿಸುತ್ತಿದ್ದಿತು. ಮಯೂರದ ಶಿರಸ್ಸಿನಲ್ಲಿ ಜಗದ್ವಿಖ್ಯಾತವಾದ ಕೋಹಿನೂರ್ ವಜ್ರವು ವಿರಾಜಿಸುತ್ತಿದ್ದಿತು.

ಇಂತಹ ವೈಭವಯುಕ್ತವಾದ ಮಯೂರಾಸನದ ಮೇಲೆ, ಬಿಳಿಯ ರೆಕ್ಕೆಯ ಗರಿಯನ್ನು ಕಟ್ಟಿ ಜರಿಗೆಯಿಂದ ಕೂಡಿದ ಶಿರೋಲಂಕಾರವನ್ನು ಧರಿಸಿ, ಕೊರಳಲ್ಲಿ ಶೋಭಿಸುವ ರತ್ನದ ಮುಕ್ತಾವಳಿಯೊಡನೆ ಸಾಮ್ರಾಟನು ಮಂಡಿಸುತ್ತಿದ್ದನು. ರಾಜಕುಮಾರರೂ, ಉನ್ನತಾಧಿಕಾರಿಗಳೂ, ರಾಜಪರಿವಾರದವರೂ ಅವರವರ ಅಂತಸ್ತಿಗೆ ಅನುಗುಣವಾಗಿ ಸಾಮ್ರಾಟನ ಇರುಕಡೆಗಳಲ್ಲಿಯೂ ತಮತಮಗೆ ನಿರ್ದಿಷ್ಟವಾದ ಸ್ಥಳಗಳಲ್ಲಿ ಕುಳಿತುಕೊಳ್ಳುತ್ತಿದ್ದರು.

ಇಂತಹ ಬಾದಶಹಿ ದರ್ಬಾರಿನಲ್ಲಿ ಮೊಗಲ ಚಕ್ರವರ್ತಿ ಔರಂಗಜೇಬನು ಆ ದಿವಸದ ಅತ್ಯವಸರವಾದ ರಾಜಕಾರ್ಯಗಳನ್ನು ಮುಗಿಸಿದನಂತರ "ಶಿವಾಜಿ ರಾಜ! ಬಾ" ಎಂದು ಸಂಜ್ಞೆ ಮಾಡಿದನು. ಶಿವಾಜಿಯು ಕಾಣಿಕೆಯನ್ನು ಹೊತ್ತು, ಮಯೂರಾಸನದ ಬಳಿ ನಡೆದು, ಅತ್ಯಂತ ವಿನಯದಿಂದ ಬಾದಶಹನಿಗೆ ನಮಿಸಿ ತನ್ನೊಡನೆ ತಂದಿದ್ದ ಬೆಲೆಬಾಳುವ ವಸ್ತುಗಳನ್ನು ಅವನಿಗರ್ಪಿಸಿದನು.

ಶಿವಾಜಿಯೊಡನೆ ಸ್ವಲ್ಪಕಾಲ ಸಂಭಾಷಿಸಿದ ನಂತರ ಬಾದಶಹನು ಅವನನ್ನು ಹಿಂದಕ್ಕೆ ಕಳುಹಿಸಿದನು. ಸಾಮ್ರಾಟನ ಸಚಿವರು ಅವನನ್ನು ಕೆಳಮಟ್ಟ ದರ್ಜೆಯ ಅಧಿಕಾರಿಗಳೊಂದಿಗೆ ಕುಳ್ಳಿರಿಸಿದನು. ಶಿವಾಜಿಗೆ ಅತ್ಯಂತ ಸೋಜಿಗವೂ ಖೇದವೂ ಉಂಟಾಯಿತು. ತಾನು ನಿರೀಕ್ಷಿಸಿದಂತೆ ಜಯಸಿಂಹನು

ಬಣ್ಣಿಸಿದಂತೆ ಪದವಿ ಪ್ರತಿಷ್ಠೆಗಳು ದೊರೆಯದುದೊಂದು ಕಡೆ; ಸಾಮ್ರಾಟ ನಿಂದ ತಾನಪೇಕ್ಷಿಸಿದಂತೆ ಬೆಲೆಬಾಳುವ ಪಾರಿತೋಷಕಗಳು ಲಭಿಸದಿದ್ದುದು ಮತ್ತೊಂದುಕಡೆ; ಈ ಎರಡೂ ಕಾರಣಗಳಿಂದ - ತನ್ನನ್ನು ಬಾದಷಹನು ತಕ್ಕ ರೀತಿಯಲ್ಲಿ ಸನ್ಮಾನಿಸಲಿಲ್ಲವೆಂದು ಶಿವಾಜಿಯು ಕೋಪದಿಂದ ಕುದಿಯಹತ್ತಿದನು. ಅವನು ಸಹಜವಾಗಿ ನಿರೀಕ್ಷಿಸಬಹುದಾದ ನಾಲ್ಕು ನಯವಾದ ಮಾತುಗಳನ್ನೂ ಔರಂಗಜೇಬನು ಆಡಲಿಲ್ಲ. ಇದೆಲ್ಲ ನಿರಾಶೆಗಳಿಂದಾಗಿ ತನ್ನ ಸ್ಥಳವನ್ನು ಸೇರಿ ದೊಡನೆಯೇ ಶಿವಾಜಿಯು ಅಲ್ಲಿ ಮೂರ್ಛೆಹೊಂದಿದನು. ತಂಪಾದ ಪನ್ನಿ ರನ್ನು ಮುಖದ ಮೇಲೆರಚಿದೊಡನೆ ಅವನು ಎಚ್ಚೆತ್ತು ನಾಲ್ಕೂಕಡೆ ನೋಡಿ ದನು. ಆಗ ಅವನ ಪರಿವಾರದವರು ಅವನನ್ನು ಅವನ ಬಿಡಾರಕ್ಕೆ ಕರೆದೊಯ್ದರು ಔರಂಗಜೇಬನು ಶಿವಾಜಿಯನ್ನು ಅಪರಿಮಿತವಾಗಿ ದ್ವೇಷಿಸುತ್ತಿದ್ದನೆಂದೂ ಆ ದ್ವೇಷವನ್ನು ನೆರೆದ ದರ್ಬಾರದಲ್ಲಿ ಬಹಿರಂಗವಾಗಿ ತೋರ್ಪಡಿಸಿದನೆಂದೂ ಬೇರೆ ಹೇಳಬೇಕಾಗಿಲ್ಲ. ಅಂದಿನಿಂದ ಅರಮನೆಯ ಮಾಲೆಯಲ್ಲಿದ್ದ 'ಜಯಪುರಭವನ' ದಲ್ಲಿ ಅವನು ಸಾಮ್ರಾಟನ'ಅತಿಥಿ'ಯಾಗಿ ಉಳಿದನು. ಅವನು ಕೈದಿಯಾಗೀ ಪರಿಭಾವಿಸಲ್ಪಟ್ಟನು ಸಾಮ್ರಾಟನ ದರ್ಬಾರಿನಲ್ಲಿ ಅವನಿಗೆ ಪ್ರವೇಶವಿರಲಿಲ್ಲ.

ಶಿವಾಜಿಯೂ ಅವನ ಗೆಳೆಯರೂ ಅವನ ಈ ಪ್ರಕರಣವನ್ನು ಎಲ್ಲ ದೃಷ್ಟಿ ಯಿಂದಲೂ ಪರಿಶೀಲಿಸಿ ಮುಂದೇನು ಮಾಡಬೇಕೆಂದು ಮಂತ್ರಾಲೋಚನೆ ಮಾಡಿದರು. ಅವನೇನೋ ಧೀರನೂ ತಂತ್ರಜ್ಞನೂ ಆದ ಯೋಧನಾಗಿದ್ದನು. ತನಗೊದಗಿದ ತೊಡಕುಗಳನ್ನು ಶಾಂತತೆಯಿಂದ ಅವನು ಎದುರಿಸಬಲ್ಲವನಾಗಿ ದ್ದನು. ಆದರೂ ಮಹಾ ಮರ್ಮಿಯೂ ಕ್ರೂರಿಯೂ ಆದ ಆಲಮಗೀರನನ್ನು ವಂಚಿಸುವುದು ಕಷ್ಟಸಾಧ್ಯವೆಂದು ಶಿವಾಜಿಯು ಸ್ಪಷ್ಟವಾಗಿ ತಿಳಿದಿದ್ದನು. ಕುಟಿಲ ಚಕ್ರವರ್ತಿಯ ಕೊರಳನ್ನು ಕುಟಿಲತೆಯಿಂದಲೇ ಕತ್ತರಿಸಬೇಕೆಂದು ಅವನು ನಿರ್ಧರಿಸಿದನು

ಬಿಜಾಪುರದ ಪ್ರಾಂತ್ಯವನ್ನು ಗೆದ್ದು ಅದನ್ನು ಚಕ್ರವರ್ತಿಗೆ ಒಪ್ಪಿಸುವು ದಾಗಿ ಆಸೆತೋರಿಸಿ ನೋಡಿದನು. ಮತ್ತೊಮ್ಮೆ ರಹಸ್ಯಸಮಾಚಾರವನ್ನು ತಿಳಿಸಬೇಕಾಗಿರುವುದರಿಂದ ಸಾಮ್ರಾಟನು ತನಗೆ ಸಂಭಾಷಿಸಲು ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡನು. ಆದರೆ ಔರಂಗಜೇಬನು ಅವನ ಮಾತನ್ನು ಪುರಸ್ಕರಿಸಲಿಲ್ಲ; ಅದಕ್ಕೆ ಕಾರಣವಿಲ್ಲದೆ ಇಲ್ಲ; "ಹಗುರವಾದ ಶರೀರವುಳ್ಳ -

ಕಟಕ್ಕನೆ ಜಿಂಕೆಯಂತೆ ನಾಲ್ಕಾರು ಗಜಹಾರಬಲ್ಲ ಶಿವಾಜಿ"ಯು ಒಬ್ಬ ಮಂತ್ರವಾದಿಯೆಂದೇ" ಬಾದಶಹನು ಭಾವಿಸಿದ್ದನು.

ಇದಾದಮೇಲೆ ಶಿವಾಜಿಯು ಆಲಮಗೀರನ ಸಚಿವರ ಸಹಾಯವನ್ನು ಪಡೆಯಲು ಪ್ರಯತ್ನಿಸಿದನು; ಆದರೆ ಅದೂ ನಿರರ್ಥಕವಾಯಿತು. ತನ್ನ ಮರಾಠಾ ಅನುಚರರನ್ನು ದಕ್ಕನ್ನಿಗೆ ಕಳುಹಿಸಿಬಿಡುವುದಕ್ಕೆ ಮಾತ್ರ ಚಕ್ರವರ್ತಿಯು ಅನುಮತಿಯಿತ್ತನು. ಅವನ ಬಿಡಾರದ ಮುಂದೆ ಶಸ್ತ್ರಸಜ್ಜಿತರಾದ ಶಿಪಾಯಿಗಳನ್ನು ಕಾವಲಿಗೆ ಇಡಲಾಯಿತು. ಶಿವಾಜಿಗೆ ಈಗ ಸ್ವಪ್ರಯತ್ನದಿಂದಲ್ಲದೆ ತನ್ನ ಬಿಡುಗಡೆಯುಂಟಾಗಲಾರದೆಂದು ಮನದಟ್ಟಾಯಿತು. ಸ್ವಾತಂತ್ರ್ಯವನ್ನು ಪಡೆದು ಆ ಪಾಷಾಣಕುಂಭದಿಂದ ಹೊರಗಾಗಲು ಅವನು ತನ್ನ ಯುಕ್ತಿಯೆಲ್ಲವನ್ನೂ ಪ್ರಯೋಗಿಸಿದನು. ಧೈರ್ಯವಂತನೂ, ದೃಢನಿಶ್ಚಯವುಳ್ಳವನೂ ಆದ ಮಾನವನಿಗೆ ಯಾವುದು ತಾನೆ ಅಸಾಧ್ಯವೆನಿಸೀತು?

೩

ನಾಲ್ಕಾರು ವಾರಗಳು ಕಳೆದುವು. ಶಿವಾಜಿಗೆ ಸ್ವಾಸ್ಥ್ಯವಿಲ್ಲವೆಂದು ವದಂತಿ ಹೊರಟಿತು. ಅದು ಅರಮನೆಯಲ್ಲಿ ಹರಡಿ ಬಾದಶಹನ ಕಿವಿಯಲ್ಲಿಯೂ ಬಿದ್ದಿತು. ಆದರೂ ಬೆಟ್ಟಗುಡ್ಡಗಳಲ್ಲಿ ನಿರಾತಂಕವಾಗಿ ಸಂಚರಿಸಿಕೊಂಡಿರಲು ಅಪೇಕ್ಷೆಯುಳ್ಳ ವೀರಯೋಧನನ್ನು ಬಿಡುಗಡೆಮಾಡಲು ಬಾದಶಹನಿಗೆ ಮನಸಾಗಲಿಲ್ಲ.

ಒಂದು ದಿವಸ ಸಂಧ್ಯಾಸಮಯದಲ್ಲಿ ಇಬ್ಬರು ಮರಾಠಾ ಯೋಧರು ಶಿವಾಜಿಯ ಮಹಲನ್ನು ಬಿಟ್ಟು ಹೊರಗೆ ಬಂದರು.

"ಯಾರದು ಹೊರಗೆ ಹೋಗುತ್ತಿರುವುದು?" ಇರಾನಿಯು ಕೇಳಿದನು.

"ನಾವು; ಶಿವಾಜಿ ಮಹಾರಾಜನ ಸೇವಕರು, ಏಕೆ?"

"ಅದೇನದು ....ತೋಳಮೇಲೆ ಹೊತ್ತಿರುವ ಬಿದಿರು ಬೊಂಬಿಗೆ ಕಟ್ಟಿ ಸಾಗಿಸುತ್ತಿರುವ ಬುಟ್ಟಿ? ಅದರಲ್ಲೇನಿದೆ? ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ?"

"ಓಹೋ............ಅದೇ ! ಅದು ಮಿಠಾಯಿ ಬುಟ್ಟಿ." ಸೇವಕರು ಹೇಳಿದರು. "ನಮ್ಮ ನಾಯಕರಿಗೆ ಸ್ವಸ್ಥವಿಲ್ಲವೆಂದು ನಿಮಗೆ ತಿಳಿಯದೇನು ? ಅದಕ್ಕೆ............"

"ಅದಕ್ಕೆ........"

"ಅದಕ್ಕೆ ಈ ಬುಟ್ಟಿಯ ಮಿಠಾಯಿಯನ್ನು ಹೊತ್ತುಕೊಂಡು ಹೋಗಿ ಬ್ರಾಹ್ಮಣರಿಗೂ ರಾಜಪರಿವಾರದವರಿಗೂ ಹಂಚಬೇಕು. ಇದು ನಮ್ಮ ಮತದ ವಾಡಿಕೆ. ಬ್ರಾಹ್ಮಣರು ಹರಸಿದರೆ ನಮ್ಮರಸನ ವ್ಯೈ ಬೇಗನೆ ಸ್ವಸ್ಥಗೊಂಡೀತೆಂಬುದೇ ನಮ್ಮ ನಂಬಿಕೆ."

"ಹಾಗೇನು ? ಸರಿ ಆಗಬಹುದು."

ಶಿವಾಜಿಯ ಸೇವಕರು ಪಹರೆಯವರಾದ ಇರಾನಿ - ಹುಸೇನ ಮೊದಲಾದವರ ಹಸ್ತದಲ್ಲಿ ಮಿಠಾಯಿಯನ್ನಿಟ್ಟು ಮುಂದೆ ನಡೆದರು.

ಇದೇ ಪ್ರಕಾರ ಪ್ರತಿದಿನವೂ ಸಂಧ್ಯಾಕಾಲ ಹಲವು ಬುಟ್ಟಿಗಳನ್ನು ಮಹಲಿನಿಂದ ಸೇವಕರು ಹೊರಗೊಯ್ದರು. ಎಂದಿನಂತೆ "ಬುಟ್ಟಿಯಲ್ಲಿರುವುದೇನು ?" ಎಂದು ಶಿಪಾಯಿಗಳು ಕೇಳಿ ಪ್ರತ್ಯುತ್ತರವಾಗಿ ಮಿಠಾಯಿಯನ್ನು ಕೈಯ್ಯಲ್ಲಿ ಪಡೆದು ಬುಟ್ಟಿಗಳನ್ನು ಹೊತ್ತವರನ್ನು ಹೊರಗೆ ಬಿಡುತ್ತಿದ್ದರು. ಹೀಗೆ ಎಷ್ಟೋ ಬುಟ್ಟಿಗಳು ಮಹಲಿನಿಂದ ಹೊರಬಿದ್ದುವು. ಕೆಲವಾರು ದಿವಸಗಳು ಹೀಗೆಯೇ ನಡೆದ ನಂತರ ಶಿಪಾಯಿಗಳು ಸಂಶಯರಹಿತರಾಗಿ ಬುಟ್ಟಿಗಳನ್ನು ಹೊತ್ತ ಸೇವಕರು ಹೊರಬಾಗಿಲಿಗೆ ಬಂದೊಡನೆಯೇ ಬುಟ್ಟಿಗಳನ್ನು ಶೋಧಿಸದೆ ಅವರನ್ನು ಏನೊಂದು ಪ್ರಶ್ನೆಯನ್ನೂ ಕೇಳದೆ ಬಿಟ್ಟುಬಿಡುತ್ತಿದ್ದರು.

ಇಂತಹ ಸುಸನ್ನಿವೇಶವನ್ನೇ ಶಿವಾಜಿಯು ಎದುರುನೋಡುತ್ತಿದ್ದನು. ಈಗ ತನ್ನ ಸೇವಕರ ವಿಷಯದಲ್ಲಿ ಪಹರೆಯವರಿಗೆ ಯಾವ ಸಂದೇಹವೂ ಇಲ್ಲವೆಂದು ಅವನಿಗೆ ಮನದಟ್ಟಾಯಿತು. ಶಿವಾಜಿಯ ಸೇವಕರಿಗೂ ಪಹರೆಯವರಿಗೂ ಈಗ ಗಾಢವಾದ ಸ್ನೇಹವು ಬೆಳೆದಿದ್ದಿತು. ಮಹಾರಾಷ್ಟ್ರ ನಾಯಕನ ಮನದೆಣಿಕೆಯು ಕೈಗೂಡುವ ಕಾಲವು ಒದಗಿತು.

ಒಂದಾನೊಂದು ದಿವಸ ಶಿವಾಜಿಯ ಸೇವಕರು ತಮ್ಮ ನಾಯಕನ ದೇಹಾಲಸ್ಯವು ಅಧಿಕರಿಸಿತೆಂದೂ ಅವನು ಹಾಸಿಗೆಯನ್ನು ಬಿಟ್ಟೇಳಲಾರ

ದಷ್ಟು ದುರ್ಬಲನಾಗಿರುವನೆಂದೂ ವದಂತಿಯನ್ನು ಹರಡಿದರು. ಪಹರೆಯವರು ನಿಶ್ಶಬ್ದವಾಗಿರಬೇಕೆಂದೂ ಹಾಗಿಲ್ಲದಿದ್ದರೆ ಶಿವಾಜಿಗೆ ವಿಶ್ರಾಂತಿಯಿಲ್ಲವೆಂದೂ ಅವರು ಬೇಡಿಕೊಂಡರು. ಮರುದಿನ ಶಿವಾಜಿಯ ದೇಹಸ್ಥಿತಿಯನ್ನು ಪರೀಕ್ಷಿಸಲು ಒಬ್ಬ ವೈದ್ಯನನ್ನು ಸೇವಕರು ಕರೆತಂದುದೂ ಆಯಿತು

ಶಿವಾಜಿಯ ಅನುಚರರಲ್ಲಿ ಹೀರಾಜಿಯೆಂಬ ಅವನ ಮುಖಸಹೋದರನೊಬ್ಬನಿದ್ದನು. ಅವನಾದರೋ ಹೆಚ್ಚುಕಮ್ಮಿ ನೋಡುವುದಕ್ಕೆ ಶಿವಾಜಿಯಂತೆಯೇ ಇದ್ದನು. ಆ ದಿನ ಸಂಜೆ ಅವನು ಶಿವಾಜಿಯ ಹಾಸಿಗೆಯಲ್ಲಿ ಮಲಗಿ ಹೊದ್ದಿಕೆಯನ್ನೆಳೆದು ಮೈಯನ್ನು ಮುಚ್ಚಿಕೊಂಡನು. ಆದರೆ ಶಿವಾಜಿಯ ಚಿನ್ನದ ಕಡಗವನ್ನು ಧರಿಸಿದ್ದ ಅವನ ಬಲಗೈ ಮಟ್ಟಿಗೆ ಹೊರಗೆ ಗೋಚರಿಸುತ್ತಿದ್ದಿತಷ್ಟೆ. ಎಲ್ಲ ಬಗೆಯಲ್ಲಿ ನೋಡಿದರೂ ಮರಾಠರ ನಾಯಕನು ಪ್ರಬಲ ಜ್ವರಾಲಸ್ಯದಿಂದ ಅತ್ತಿತ್ತ ಕದಲುವುದಕ್ಕೆ ಶಕ್ತನಿಲ್ಲದೆ ಹಾಸಿಗೆಯಲ್ಲಿಯೇ ಮಲಗಿದ್ದಂತೆ ಕಾಣುತ್ತಿದ್ದಿತು.

ಸೂರ್ಯಾಸ್ತಮಾನವಾದ ಸ್ವಲ್ಪಕಾಲಾನಂತರ ಎಂದಿನಂತೆ ಹಲವಾರು ಮಿಠಾಯಿಬುಟ್ಟಿಗಳು ಹೊರಗೊಯ್ಯಲ್ಪಟ್ಟುವು. ಮಹಲಿನ ಮುಂದೆ ಸಾಲಾಗಿ ನಿಂತಿದ್ದ ಪಹರೆಯವರು ಮಿಠಾಯಿಯನ್ನು ಪಡೆದು ಆನಂದದಿಂದ ತಿನ್ನತೊಡಗಿದರು. ಆದರೆ ಬುಟ್ಟಿಗಳನ್ನು ಶೋಧಿಸಿ ನೋಡಬೇಕೆಂದು ಅವರಿಗೆ ತೋಚಲಿಲ್ಲ.

ಬುಟ್ಟಿಯನ್ನು ಹೊತ್ತ ಸೇವಕರು ಅರಮನೆಯ ಹೆಬ್ಬಾಗಿಲನ್ನೂ ದಾಟಿ ಪಟ್ಟಣದಿಂದ ಹೊರಬಿದ್ದು ನಿರ್ಜನವಾದ ಒಂದು ಹೊಲದ ಅಂಚಿಗೆ ಬಂದು ಸೇರಿದರು. ಬುಟ್ಟಿಗಳನ್ನು ಸೇವಕರು ಕೆಳಗಿಳಿಸಿದರು. ಬುಟ್ಟಿಗಳೊಂದರಿಂದ- ಬಂಧನದಲ್ಲಿ ಮುಚ್ಚಿಟ್ಟ ಹಾವಿನಂತೆ - ಮುಕ್ತಿಯನ್ನಪೇಕ್ಷಿಸಿ - ಧೀರನೂ ತಂತ್ರಿಯೂ ಆದ ಮರಾಠರ ನಾಯಕ ಶಿವಾಜಿಯು ಕೈಕಾಲುಗಳನ್ನು ಕೊಡವುತ್ತ ಹೊರಬಿದ್ದನು. ಸುಂದರವಾದ ತನ್ನ ಗಡ್ಡವನ್ನು ಬೋಳಿಸಿ, ಮೈಗೆಲ್ಲ ಭಸ್ಮವನ್ನು ಬಳಿದುಕೊಂಡು, ಕಾಷಾಯವಸ್ತ್ರಗಳನ್ನೂ ರುದ್ರಾಕ್ಷಿಮಾಲೆಯನ್ನು ಧರಿಸಿ ಶಿವಾಜಿಯು ದಿವ್ಯ ಯೋಗೀಶ್ವರನಂತೆ ರೂಪಾಂತರ ಹೊಂದಿದನು. ಆಗ್ರಾದಿಂದ ಹಲವಾರು ಮೈಲಿಗಳಾಚೆ ಒಂದು ಹಳ್ಳಿಯ ಬಳಿ ಮೊದಲೇ ಏರ್ಪಡಿ



ಮಿಠಾಯಿ ಬುಟ್ಟಿಯನ್ನು ಹೊತ್ತ ಶಿವಾಜಿ ಸೇವಕರು.

ಸಿದ್ಧಂತೆ ಕುದುರೆಗಳನ್ನು ಸಿದ್ಧವಾಗಿಟ್ಟುಕೊಂಡು ಕಾದಿದ್ದ ಮರಾಠಾ ಯೋಧರೊಡನೆ ಕಲೆತು ಶಿವಾಜಿಯು ಸುರಕ್ಷಿತವಾಗಿ ಪುಣೆಯ ಕಡೆ ವಾಯುವೇಗದಿಂದ ಪಲಾಯನಮಾಡಿ ಸ್ವಗೃಹವಾದ ಸಿಂಹಗಡವನ್ನು ಸುರಕ್ಷಿತವಾಗಿ ಸೇರಿದನು.

ಮರುದಿನ ಶಿವಾಜಿಯ ಬಿಡಾರವಾದ 'ಜಯಪುರ ಮಹಲ್' ನಲ್ಲಿ ಮನುಷ್ಯರ ವಾಸನೆಯೂ ಇರಲಿಲ್ಲ. ಶಿವಾಜಿಯ ಮಲಸಹೋದರನಾದ ಹೀರಾಜಿಯೂ ತಂತ್ರದಿಂದ ತಪ್ಪಿಸಿಕೊಂಡು ಹೋಗಿದ್ದನು. ಮಿಠಾಯಿಯನ್ನು ತಿಂದು, ಗಾಂಜಾವನ್ನು ಸೇದಿ ಹಿಂದಿನ ಪ್ರಶಾಂತ ರಾತ್ರಿಯಲ್ಲಿ ತೂಕಡಿಸಿದ್ದ ಪಹರೆಯವರು ಮಹಲನ್ನು ಪ್ರವೇಶಿಸಿ - ಅಲ್ಲಿ ಯಾರನ್ನೂ ಕಾಣದೆ ಕೈಕೈ ಹಿಸುಕಿಕೊಂಡರು; ಹಲ್ಲುಕಡಿದು ಕೋಪೋದ್ರೇಕಿತರಾದರು.

ಶಿವಾಜಿ ಮತ್ತು ಅವನ ಪರಿವಾರದವರ ಪಲಾಯನ ಸಮಾಚಾರವನ್ನು ಕೇಳಿದ ಆಲಮಗೀರನು ಹುಚ್ಚನಂತಾದನು. ತುಟಿಗಳನ್ನು ಕಚ್ಚುತ್ತ, ಹೆಚ್ಚು ಮೀಸೆಯನ್ನು ಜಾಡಿಸಿಕೊಂಡು ಸಾಮ್ರಾಟನು "ಹುಂ! ಪಾರಿವಾಳವು ಹಾರಿ ಹೋಯಿತು; ಕೆಲಸವು ಕೈಮಿಂಚಿತು" ಎಂದು ನಿಟ್ಟುಸಿರಿಟ್ಟನು.

ದೇವರಾಯನೂ ನೇಹಲನೂ

ಫಲಭರಿತವಾದ ತಟ್ಟೆಯನ್ನು ದೊರೆಯ ಮುಂದಿಟ್ಟು "ಮಹಾರಾಜ! ನಿಜವಾಗಿಯೂ ನೀನು ಉನ್ನತ ಪರಾಕ್ರಮಿಯೇ ಸರಿ. ಆದರೆ ನಿನ್ನ ಸುಖ ಸಂತೋಷಗಳು ಸಂಪೂರ್ಣವಾಗಬೇಕಾದರೆ ಒಂದೇ ಒಂದು ಕೊರತೆಯುಂಟು" ಎಂದು ವೃದ್ಧ ಬ್ರಾಹ್ಮಣನು ನುಡಿದನು.

"ಎಲೈ ವಿಪ್ರೋತ್ತಮನೆ! ಅದೇನಿರಬಹುದು?" ಎಂದು ವಿಜಯನಗರ ಸಂಸ್ಥಾನಾಧೀಶ್ವರನಾದ ದೇವರಾಯನು ಪ್ರಸನ್ನಮುಖನಾಗಿ ಕೇಳಿದನು

"ಆ ಬಹುಮಾನವನ್ನು ಹೊಂದಲು ರಾಜಮಹಾರಾಜರು ಒಬ್ಬರೊಡನೊಬ್ಬರು ಹೋರಾಡಲು ಹಿಂಜರಿಯುವುದಿಲ್ಲ. ಆದರೂ ಆ ವಿಷಯವನ್ನು ನಿನ್ನಲ್ಲಿ ಹೇಳಬಹುದೋ ಕೂಡದೋ ಎಂದು ಯೋಚನೆಯಾಗಿದೆ ಮಹಾರಾಜ!"

ಹೀಗೆಂದು ಸೋಮದೇವನು ಸ್ವಲ್ಪ ಹಿಂಜರಿದನು.

"ಎಲೈ ವೃದ್ಧ ಬ್ರಾಹ್ಮಣನೆ! ಯಾವ ಭಯವೂ ಇಲ್ಲದೆ ಇದ್ದುದನ್ನು

ಇದ್ದ ಹಾಗೆ ಮರೆಮಾಚದೆ ಹೇಳಬಹುದು. ನಿನ್ನ ಮಾತು ಹಿತಕರವಾಗಿದ್ದರೆ ನಿನಗೆ ಬಹುಮಾನವುಂಟು. ಅಂಜಬೇಡ; ಹೇಳು"

ರಾಜನ ಅಭಯವನ್ನು ಮುಂದಿಟ್ಟು ಸೋಮದೇವನು ಹೇಳತೊಡಗಿದನು.

"ಗುಲಾಬಿಗಿಂತಲೂ ಮನೋಹರವಾದುದು; ಚಂದ್ರನಿಗಿಂತಲೂ ಪ್ರಕಾಶಮಾನವಾದುದು; ಮುತ್ತಿಗಿಂತಲೂ, ಸ್ವಚ್ಛವಾದುದು—ನಾನು ಮಹಾರಾಜರಲ್ಲಿ ಒಪ್ಪಿಸಬೇಕೆಂದಿರುವ ವಸ್ತುವಿನ ಗುಣವು ಈ ತೆರನಾಗಿರುವುದು.......... ಪ್ರಭು ಚಿತ್ತವು..........."

"ನೀನಾಡುವ ಮಾತು ಒಗಟಿಯಂತಿವೆ. ನಿನ್ನ ಒಂದೊಂದು ಮಾತೂ ನೀನು ವರ್ಣಿಸುತ್ತಿರುವ ವಸ್ತುವಾವುದು ಎಂದು ತಿಳಿಯಲು ನನ್ನಲ್ಲಿ ಕುತೂಹಲವನ್ನು ಹುಟ್ಟಿಸುತ್ತಿದೆ. ಹೇಳು; ಬೇಗ ಹೇಳು. ಇಂತಹ ಅಸಮಾನ ಗುಣಗಳನ್ನುಳ್ಳ ಆ ವಸ್ತುವಾದರೂ ಯಾವುದು?"

"ಹಾಗಾದಲ್ಲಿ ಕೇಳು;" ಸೋಮದೇವನು ಮತ್ತೆ ಹೇಳತೊಡಗಿದನು. "ನಿನ್ನ ಅಂತಃಪುರವನ್ನು ತೇಜಸ್ಸಿನಿಂದ ಬೆಳಗಬಲ್ಲ ಅಪೂರ್ವ ಸುಂದರಿ—ನಾರೀರತ್ನದ-ವಿಚಾರವಾಗಿ ಅರಿಕೆಮಾಡಿಕೊಳ್ಳಲು ನಿಮ್ಮಲ್ಲಿಗೆ ಬಂದಿರುವೆನು-ಪ್ರಭು?"

"ಹಾಗೇನು? ಒಳಿತಾಯಿತು. ಅವಳಾರು? ಅವಳ ಹೆಸರೇನು? ಅವಳೆಲ್ಲಿರುವಳು? ವಿಪ್ರವರ್ಯ! ಹೇಳು; ಅವಳ ಸಮಾಚಾರವೆಲ್ಲವನೂ ಸಂಪೂರ್ಣವಾಗಿ ಹೇಳು."

ನಾರಿಯರಲ್ಲಿ ಪಕ್ಷಪಾತವುಳ್ಳ ದೇವರಾಯನು ಆತುರದಿಂದ ಕೇಳಿದನು. ತನ್ನ ರಾಯಭಾರವು ಫಲಿಸಿತೆಂದು ಹಿಗ್ಗಿ ಸೋಮದೇವನು ಮುಂದುವರಿದು ಹೇಳಿದನು.

"ನಿನ್ನ ಸಂಸ್ಥಾನದ ಎಲ್ಲೆಯಲ್ಲಿ ಮುದ್ಗಲ್ ಎಂಬುದೇ ಈ ನಾರೀರತ್ನವು ವಾಸಮಾಡುವ ಸ್ಥಳ. ಅವಳ ಹೆಸರು ನೇಹಲ........"

"ನೇಹಲ! ನೇಹಲ! ಆಹಾ! ಎಷ್ಟು ಮುದ್ದಾಗಿದೆ ಹೆಸರು!" ದೇವರಾಯನು ಸಂತೋಷದಿಂದ ಮೈಯುಬ್ಬಿದನು. "ನೇಹಲ! ಎಷ್ಟು ಮನೋಹರವಾದ ಹೆಸರಿದು! ಹುಂ! ಮುಂದೇನು?"

ದೊರೆಯು ತವಕದಿಂದ ಕೇಳಿದನು.

"ಅವಳೊಬ್ಬ ಬಡವನಾದ ಆದರೆ ಗುಣಾಢ್ಯನಾದ ರೈತನ ಮಗಳು-ಪ್ರಭು!" ಬ್ರಾಹ್ಮಣನು ಹೇಳಿದನು.

"ರೈತನ ಮಗಳು!" ರಾಜನು ಹತಾಶನಾದನು. "ರೈತನ ಮಗಳೆ? ಹಾಗಿದ್ದಲ್ಲಿ ದುರದೃಷ್ಟವೆ!"

"ಹಾಗೆಂದರೇನು ಪ್ರಭು! ರೈತನ ಮಗಳಾದಾಕ್ಷಣಕ್ಕೇನು?" ಸೋಮದೇವನು ರಾಜನನ್ನು ಒಡಂಬಡಿಸತೊಡಗಿದನು. "ಅರಣ್ಯದಲ್ಲಿ ದಿವ್ಯಪರಿಮಳಯುಕ್ತವಾದ ಕುಸುಮವು ಹುಟ್ಟಿ ಬೆಳೆಯುವುದಿಲ್ಲವೇನು? ಸಮುದ್ರದ ಅಂತರಾಳದಲ್ಲಿ ರಾಜಾಧಿರಾಜರ ಕಂಠವನ್ನಲಂಕರಿಸಬಲ್ಲ ಮುಕ್ತಾಫಲವು ದೊರಕುವುದಿಲ್ಲವೆ? ಅದರಿಂದೇನು? ಪ್ರಭು! ನಾನು ಆ ಕನ್ನಿಕೆಯನ್ನು ಚೆನ್ನಾಗಿ ಬಲ್ಲೆ. ಸಣ್ಣವಯಸ್ಸಿನಿಂದಲೂ ಅವಳಿಗೆ ಪಾಠಹೇಳಿರುವೆನು. ಅವಳ ಗುಣವು ಚಿನ್ನದಂತಹುದು. ನಿನಗವಳು ಸರಿಯಾದ ವಧು. ಅವಳನ್ನು ನಿನ್ನ ಪಾದಗಳಲ್ಲಿ ತಂದೊಪ್ಪಿಸುವ ಭಾರವು ನನ್ನದಾಗಿರಲಿ. ಇಂತಹ ಪರಮ ಸುಂದರ ಮನೋಹರ ಕನ್ನೆಯನ್ನು ಸೃಷ್ಟಿಸುವುದಕ್ಕಾಗಿ ವಿಧಾತನು ತನ್ನ ಸಕಲ ಶಕ್ತಿ, ಯುಕ್ತಿ, ಸಾಮರ್ಥ್ಯಗಳನ್ನೂ ಬಳಗಿಸಿರಬೇಕೆಂದು ಭಾಸವಾಗುತ್ತದೆ."

'ಹಾಗೇನು? ಹಾಗಾದರೆ ಅವಳ ಕುಲದ ವಿಚಾರವಾಗಿ ಯೋಚಿಸಬೇಕಾದುದು ಅನಾವಶ್ಯಕವೇ ಸರಿ." ದೇವರಾಯನ ಮನಸ್ಸು ಈಗ ಅಪರಿಚಿತ ನಾರೀರತ್ನವನ್ನು ಹೇಗಾದರೂ ಹೊಂದಬೇಕೆಂದು ನಿರ್ಧರಗೊಂಡಿತು. "ವಿಪ್ರವರ್ಯನೆ! ಕೇಳು. ನನಗಾಗಿ ಆ ಕನ್ಯೆಯ ತಂದೆಯೊಂದಿಗೆ ವ್ಯವಹಾರ ನಡೆಸಬಲ್ಲೆಯಾ? ಆ ಸ್ಫುರದ್ರೂಪಿಣಿಯನ್ನು ನನ್ನ ಪಟ್ಟಮಹಿಷಿಯಾಗಿ ಅಂಗೀಕರಿಸುವೆನೆಂದೂ ಅವಳ ತಾಯ್ತಂದೆಯರಿಗೆ ನನ್ನ ಆಸ್ಥಾನದಲ್ಲಿ ಉನ್ನತ ಪದವಿಯನ್ನು ಕೊಡುವುದಾಗಿಯೂ ಅವರಲ್ಲಿ ಹೇಳು. ಅವರ ಒಪ್ಪಿಗೆಯನ್ನು ನನಗೆ ತಿಳುಹಿಸುವವರೆಗೂ ನನ್ನ ಮನಸ್ಸು ಶಾಂತವಾಗಿರದು—ಕಂಡೆಯಾ?"

ಇದಾಗಿ ಹಲವಾರು ದಿವಸಗಳು ಕಳೆದನಂತರ ಸೋಮದೇವನು ದೇವರಾಯನ ರಾಯಭಾರವನ್ನು ವಹಿಸಿ ನೇಹಲಳನ್ನು ವಿಜಯನಗರ

ಸಂಸ್ಥಾನದ ಪಟ್ಟಮಹಿಷಿಯನ್ನಾಗಿ ಮಾಡುವ ಉದ್ದೇಶದಿಂದ ಮುದ್ಗಲ್ಲಿಗೆ ಬಂದು ಸೇರಿದನು. ಕನ್ಯಾಪಿತೃವಾದ ರೈತನ ಮನೆಯನ್ನು ಪ್ರವೇಶಿಸಿದನು. ರಾಜನು ತನ್ನೊಡನೆ ಕಳುಹಿಸಿಕೊಟ್ಟಿದ್ದ- ಕಣ್ಣು ಕುಕ್ಕುವಂತೆ ಪ್ರಜ್ವಲಿ ಸುತ್ತಿದ್ದ ದಿವ್ಯ ರತ್ನಾಭರಣಗಳನ್ನು ನೇಹಲಳ ತಾಯ್ತಂದೆಯರ ಮುಂದೆ ಹರಡಿದನು. ಅವನು ತಂದಿದ್ದ ಪಾರಿತೋಷಕಗಳಲ್ಲಿ ಕೆಂಪು, ವಜ್ರ, ಪಚ್ಚೆ, ಗೋಮೇಧಿಕ, ಪುಷ್ಯರಾಗ ಮೊದಲಾದ ನವರತ್ನಗಳೂ, ಅತ್ಯ ಮೂಲ್ಯವಾದ ಪೀತಾಂಬರಗಳೂ ಇನ್ನೂ ಇತರ ಬೆಲೆಬಾಳುವ ಪದಾರ್ಥಗಳೂ ಇದ್ದುವು.

ಸೋಮದೇವನು ತಮ್ಮ ಮುಂದೆ ತಂದಿರಿಸಿದ ಅಮೌಲ್ಯ ವಸ್ತು ಗಳನ್ನು ನೋಡಿ ಕನ್ಯೆಯ ತಾಯ್ತಂದೆಯರಿಗೆ ಏನೊಂದೂ ಅರ್ಥವಾಗ ಲಿಲ್ಲ. "ಇವೆಲ್ಲವೂ ವಿಜಯನಗರದ ಮಹಾರಾಜನು ನಿಮಗೆ ಕೊಡುವು ದಕ್ಕಾಗಿ ನನ್ನೊಡನೆ ಕಳುಹಿಸಿದ ಬಳುವಳಿ. ನಿಮ್ಮ ನೇಹಲಳನ್ನು ಅವನು ವಿವಾಹವಾಗಬೇಕೆಂದು ಇಚ್ಛಿಸಿರುವನು. ಅಷ್ಟು ಮಾತ್ರವಲ್ಲ; ಅವನ ಕೈ ಹಿಡಿಯುವ ನೇಹಲ ಕುಮಾರಿಯು ಇನ್ನು ಮುಂದೆ ವಿಜಯ ನಗರದ ಪಟ್ಟಮಹಿಷಿಯಾಗುವಳು ನೀವು ಆಸ್ಥಾನದಲ್ಲಿ ಉನ್ನತ ಗೌರವವನ್ನು ಪಡೆಯುವಿರಿ;" ಎಂದು ಬ್ರಾಹ್ಮಣನು ಹೇಳಿದಾಗಲಂತೂ ಅವರು ತಮ್ಮ ಕಿವಿಗಳಲ್ಲಿ ಬಿದ್ದ ಮಾತನ್ನು ನಂಬಲೇ ಇಲ್ಲ. ಅವರಿಬ್ಬರೂ ಕ್ಷಣಕಾಲ ಮೂಗರಂತೆ ನಿಂತುಬಿಟ್ಟರು. ಭ್ರಮಿಸಿದ ಅವರ ಬಾಯಿಂದ ಯಾವ ಪ್ರತ್ಯುತ್ತರವೂ ಹೊರಡದಾಯಿತು. ಕೊನೆಗೆ ರೈತನು ಹೇಳಿದನು :

"ಇರಲಾರದು ; ಇರಲಾರದ . ಇದೆಲ್ಲವೂ ಏನು ಅಪಹಾಸ್ಯ ! ಇವು ಗಳೆಲ್ಲ.......ರಾಜಯೋಗ್ಯವಾದ ಈ ದಿವ್ಯಾಭರಣ ಅಲಂಕಾರಗಳು ಬಡ ರೈತನ ಮಗಳಾದ ನೇಹಲಳು ಧರಿಸುವುದಕ್ಕೆ ? ಛೀ ! ನಾನು ನಂಬುವುದಿಲ್ಲ. ನನ್ನನ್ನು ಹಾಸ್ಯ ಮಾಡಬೇಡಿ."

"ಇದೇನಯ್ಯಾ ! ಸಂಪತ್ತೊದಗಿದ ಕಾಲಕ್ಕೆ ಕಾಲಿನಿಂದ ಒದೆದುಬಿಡುವ ನಿನ್ನ ಮೂರ್ಖತನಕ್ಕೇನೆಂದು ಹೇಳಲಿ ? ನಿಮ್ಮ ಕಣ್ಣುಮುಂದಿರುವ ಈ ವಸ್ತ್ರ ಗಳೇ ನನ್ನ ಮಾತಿಗೆ ತಕ್ಕ ಸಾಕ್ಷಿಗಳಲ್ಲವೆ? ಇದಕ್ಕಿಂತಲೂ ಮತ್ತಾವ ನಿದರ್ಶನ

ವನ್ನು ನಿಮಗೆ ತೋರಲಿ? ನನ್ನ ಮಾತಿನಲ್ಲಿ ನಂಬಿಕೆಯಿರಲಿ. ಬಡವರಾದ ನೀವು ಹೇಗಾದರೂ ನಿಮ್ಮ ದುಃಸ್ಥಿತಿಯಿಂದ ಪಾರಾಗಲೆಂದೇ ಅರಸನಲ್ಲಿ ನಿಮ್ಮ ವಿಚಾರವನ್ನು ಅತ್ಯಂತ ಬಿನ್ನವಿಸಿ, ನಿಮ್ಮ ನೇಹಲಳನ್ನು ಮದುವೆಯಾಗುವಂತೆ ಒಪ್ಪಿಸಿ ಈ ಅಮೌಲ್ಯ ಬಳುವಳಿಯನ್ನು ಆತನ ಮೆಚ್ಚಿಕೆಯ ಕಾಣಿಕೆಯಾಗಿ ತಂದಿರುವೆನು. ನಿಮಗೆ ಬೇಡವಾದರೆ ಬಿಡಿ. ಅರಸನ ಕೈ ಹಿಡಿಯುವುದಕ್ಕೆ- ವಿಜಯನಗರದ ಪಟ್ಟಮಹಿಷಿಯಾಗುವುದಕ್ಕೆ-ಎಷ್ಟು ಸಾವಿರ ತರುಣಿಯರು ನಾನು ತಾನು ಎಂದು ಕಾದಿದ್ದಾರೆ. ಹಾಗಿದ್ದರೂ ಬಾಲ್ಯದಿಂದಲೂ ನೇಹಲಳಲ್ಲಿ ನನಗಿದ್ದ ಪ್ರೀತಿಗಾಗಿ - ಮಹಾರಾಜನ ಉತ್ತರೋತ್ತರ ಪುರೋಭಿವೃದ್ಧಿಗಾಗಿ - ಈ ವಿವಾಹ ಪ್ರಯತ್ನಕ್ಕೆ ಕೈ ಹಾಕಿ ಈಶನ ದಯೆಯಿಂದ ನಾನೂ ಕೃತಕೃತ್ಯ ನಾದೆನು. ನೇಹಲಳು ಪೂರ್ವಜನ್ಮಗಳಲ್ಲಿ ಎಷ್ಟೋ ಸುಕೃತಗಳನ್ನು ಮಾಡಿದ್ದು ದರಿಂದಲೇ ಈಗವಳಿಗೆ - ಅವಳನ್ನು ಹೆತ್ತ ನಿಮಗೆ - ಸಂಬಲಸಾಧ್ಯವಾದ ಈ ಸುಯೋಗವು ನಿರಾಯಾಸವಾಗಿ ಹುಡುಕಿಕೊಂಡು ಬಂದಿದೆ. ಇದೆಲ್ಲವೂ ದೈವಚಿತ್ತವೆಂದು ನಿಮಗೆ ಮನವರಿಕೆಯಾಗಲಿಲ್ಲವೇ? ಅಂಗೈಯಲ್ಲಿ ಬಂದು ಬಿದ್ದ ಮಾಣಿಕ್ಯವನ್ನು ಎತ್ತಿ ಶಿರಸ್ಸಿನಲ್ಲಿ ಧರಿಸುವುದಕ್ಕೆ ಪ್ರತಿಯಾಗಿ ತಿಪ್ಪೆಯಲ್ಲಿ ಎಸೆಯುವ ನಿಮ್ಮಂತಹ ಮೂಢರ ಸಹವಾಸವೇ ಮುಖ್ಯವಾಗಿ ತಪ್ಪಾದುದು. ಅದನ್ನು ನಾನು ಮೊದಲೇ ಗ್ರಹಿಸದಿದ್ದುದು ನನ್ನ ತಪ್ಪು........"

ಎಂದು ಮುಂತಾಗಿ ಸೋಮದೇವನು ಬಹುಬಗೆ ನುಡಿದನು. ಆದರೂ ಕೈತನಿಗೂ ಅವನ ಹೆಂಡತಿಗೂ ಒಮ್ಮೆಯೇ ನಂಬಿಕೆಯುಂಟಾಗಲಿಲ್ಲ.

"ಏನು? ಹಾಗಾದರೆ ಮಹಾರಾಜನು ನಿಜವಾಗಿಯೂ ನಮ್ಮ ನೇಹಲಳನ್ನು ಮದುವೆಯಾಗಬೇಕೆಂದು ನಿಶ್ಚಯಿಸಿರುವನೆ?"

ಕೈತನು ಕೇಳಿದನು.

"ನಮ್ಮ ಮಗಳೇನೋ ಅದೃಷ್ಟಶಾಲಿಯೋ ಸರಿ. ಆದರೂ ಅರಸನು ಇಂದು ಕಾಮಾತುರನಾಗಿ ಮದುವೆಯಾಗಿ ನಾಳೆ ಅವಳಲ್ಲಿ ಬೇಸರಗೊಂಡು ಅವಳನ್ನು ಅಂತಃಪುರದಿಂದ ಅಟ್ಟಿಬಿಟ್ಟರೋ? ಆಳರಸರ ಮನಸ್ಸಿನ ಆಳವನ್ನು ಅಳೆದವರಾರು? ಇಂದು ಸನ್ಮಾನಿಸಿ ನಾಳೆ ಅವಮಾನಿಸುವ ಅವರ ಕೃತ್ಯಕ್ಕೆ ತಡೆಯಾರು? ಇದು ಯೋಚಿಸಬೇಕಾದುದೇ ಸರಿ.........."

ನೇಹಲಳ ತಾಯಿಯು ಹೇಳಿದಳು.

ಸೋಮದೇವನು ಈಗ ನಿಜವಾಗಿಯೂ ಇಕ್ಕಟ್ಟಿನಲ್ಲಿ ಸಿಲುಕಿದನು. ತಾನೆಣಿಸಿದಂತೆ-ರಾಜನಿಗೆ ನಂಬುಗೆ ಕೊಟ್ಟಂತೆ-ತನ್ನ ಕಾರ್ಯಗಳು ಅಷ್ಟೊಂದು ನಿರಾಯಾಸವಾಗಿ ನೆರವೇರಬಹುದೆಂದು ಅವನಿಗನಿಸಲಿಲ್ಲ. ಆಗವನು ಕನ್ಯಾ ಪಿತೃವನ್ನು ಕುರಿತು ಮತ್ತೆ ಹೇಳಿದನು:

"ಅಯ್ಯಾ! ಇರಲಿ; ನಿಮಗೆ ಸಂದೇಹವು ಜನಿಸಲಿಕ್ಕುದೂ ನ್ಯಾಯವೇ ಸರಿ, ಆದರೂ ನಿಮ್ಮ ಹಿತೈಷಿಯಾದ ನಾನೊಬ್ಬನಿರುವೆನಲ್ಲವೆ? ನೀವೇ ಹೇಳುವ-ಹೇಳಬೇಕೆಂದಿರುವ-ಎಲ್ಲ ವಾದವಿವಾದಗಳನ್ನೂ ನಾನು ಅರಸನ ಮುಂದಿಟ್ಟಿರುವೆನು. ನನ್ನ ಎಲ್ಲ ಮಾತುಗಳಿಗೂ ಅರಸನು ಒಪ್ಪಿಕೊಂಡನಂತರವೇ ನಿಮ್ಮನ್ನು ಒಪ್ಪಿಸುವುದಕ್ಕಾಗಿ ಈ ಬಳುವಳಿಯನ್ನು ತಂದಿರುವೆನು. ಇದೋ ನೋಡಿ. ಈ ಸ್ವರ್ಣ ಕಂಠಾಭರಣವನ್ನು ನೇಹಲಳು ತನ್ನ ಜ್ಞಾಪಕಾರ್ಥವಾಗಿ ಧರಿಸಬೇಕೆಂದೂ-ಅದೇ ವಿವಾಹದ ಕುರುಹೆಂದೂ ಅರಸನು ಕಳುಹಿಸಿರುವನು. ಕೊಡಿ; ಇದನ್ನು ನೇಹಲಳಿಗೆ ಕೊಡಿ. ಅವಳು ಧರಿಸಲಿ."

ನಡೆದ ಎಲ್ಲ ವಿದ್ಯಮಾನಗಳನ್ನು ನೇಹಲಳು ಮರೆಯಲ್ಲಿ ನಿಂತು ನೋಡುತ್ತಿದ್ದಳು. ಅವಳ ತಾಯಿಯು ಕಂಠಾಭರಣವನ್ನು ಕೈಯಲ್ಲಿ ಹಿಡಿದು ಮಗಳನ್ನು ಕುರಿತು "ನೀನೇನು ಹೇಳುವೆಯಮ್ಮ ನೇಹಲ?" ಎಂದು ಕೇಳಿದಳು.

ನೇಹಲಳು ಏನೊಂದನ್ನೂ ಹೇಳದೆ ಸ್ವಲ್ಪ ಕಾಲ ಸುಮ್ಮನಿದ್ದಳು. ಬಳಿಕ ತಾಯಿಯು ಬಲವಂತಪಡಿಸಲು ಅವಳು ಹೇಳಿದಳು:

"ಅಮ್ಮ! ಅದಾಗದು. ನಾನವನನ್ನು ಮದುವೆಯಾಗಲೊಪ್ಪುವುದಿಲ್ಲ." ನೇಹಲಳ ಧ್ವನಿಯು ನಿಧಾನವಾಗಿಯೂ, ಗಂಭೀರವಾಗಿಯೂ ಇದ್ದಿತಲ್ಲದೆ ಅವಳ ದೃಢನಿಶ್ಚಯವನ್ನು ಸೂಚಿಸುತ್ತಿದ್ದಿತು.

"ಇದೇನು ನೇಹಲ! ನಿನಗೆ ಹುಚ್ಚುಹಿಡಿಯಿತೆ?" ಬ್ರಾಹ್ಮಣನು ಗುಡುಗುಡಿಸಿದನು. ಅಷ್ಟಕ್ಕೆ ನಿಲ್ಲದೆ ಅವನು ಕೇಳಿದನು:

"ನೇಹಲ! ಇದೇನು? ನೀನು ವಿಜಯನಗರದ ಅರಸನ ಕೈ ಹಿಡಿದು ಆತನ ಪಟ್ಟಮಹಿಷಿಯಾಗುವುದಕ್ಕೆ ಒಪ್ಪುವುದಿಲ್ಲವೆ?"

"ಇಲ್ಲ, ಗುರುಗಳೆ! ಅವನ ವಿಚಾರವು ನನಗೇನೂ ಹೊಸದಲ್ಲ.

ದಿನಕ್ಕೊಂದು ಕನ್ಯೆಯಾದರೂ ಸರಿ-ಅವನೇನು ಮದುವೆಮಾಡಿಕೊಳ್ಳುವುದಕ್ಕೆ ಸಿದ್ಧನಾಗಿರುವನು. ಅವನ ಅನೇಕಾನೇಕ ಹೆಂಡಿರ ನಡುವಿನಲ್ಲಿ ನಾನೂ ಒಬ್ಬ ಹೆಂಡತಿಯಾಗಿರಲು ನನಗೆ ಸಮ್ಮತವಿಲ್ಲ. ನಾವಾದರೋ ಬಡವರು. ನಮ್ಮ ಪೈತೃಕಕುಲದಲ್ಲಿಯೇ ನನಗೆ ಮದುವೆಯಾದರೆ ಸಾಕು. ಆಗ ನಾನು ಎಷ್ಟೋ ನೆಮ್ಮದಿಯಿಂದಿರಬಲ್ಲೆ. ಇಂದು ಆಸೆಗೆ ಅರಸನೊಂದಿಗೆ ಸಿಂಹಾಸನ ವೇರಬಹುದು. ನಾಳೆ........ನಾಳೆ ಏನಿದ್ದೀತೋ ಕಂಡವರಾರು? ಹೆಚ್ಚೂ ಬೇಡ........ಕಮ್ಮಿಯೂ ಬೇಡ. ನಮ್ಮ ನಮ್ಮ ಅಂತಸ್ತಿನಲ್ಲಿ ನಾವಿದ್ದು ಬಾಳುವುದೇ ನಮಗೆ ಕ್ಷೇಮ. ಗುರುವಾದ ನಿಮಗೆ ನಾನು ಉಪದೇಶ ಮಾಡಬೇಕೆ?"

"ಹಾಗಾದರೆ?"

"ನಾನು ಈ ಮದುವೆಗೆ ಖಂಡಿತವಾಗಿ ಒಪ್ಪಲಾರೆ. ನನಗಿದು ಬೇಡ."

ಸೋಮದೇವನಿಗೆ ಆಶ್ಚರ್ಯವೂ ಕೋಪವೂ ಏಕಕಾಲದಲ್ಲಿ ಉಂಟಾಯಿತು. ಅವನು ನೇಹಲಳನ್ನು ಕುರಿತು ಮತ್ತೆ ಹೇಳಿದನು.

ಹುಚ್ಚು ಹುಡುಗಿ! ಅರಸನ ಹಸ್ತವನ್ನು ಹಿಡಿದು, ಅರಮನೆ ಯಲ್ಲಿರುವ ಎಲ್ಲ ವೈಭವಗಳನ್ನೂ ಸೂರೆಗೊಳ್ಳುವುದನ್ನು ಬಿಟ್ಟು ಒಣಬಿಟ್ಟು ಮುರುಕಲು ಜೋಪಡಿಗಳು ಸ್ಥಿರವೆಂದೆಣಿಸಿದ ನಿನ್ನ ಮೂರ್ಖತನಕ್ಕೆ ಎಲ್ಲಿ ಹೋಗಿ ತಲೆ ಚಚ್ಚಿಕೊಳ್ಳಲಿ? ಈ ಬಡತನವು ಸ್ಥಿರವೋ ಆ ಭಾಗ್ಯವು ಸ್ಥಿರವೋ ಯೋಚಿಸಿ ನೋಡು; ಮಗು! ವಿವೇಕದಿಂದ ವರ್ತಿಸು. ಇಂತಹ ಸುಯೋಗವು ಎಂಥವರಿಗೂ ಸುಲಭವಾಗಿ ದೊರೆಯದು. ಅದನ್ನು ಮರೆಯದಿರು. ನನ್ನ ಮಾತನ್ನು ಒದರಿಬಿಡಬೇಡ. ನಿನ್ನ ಹಿತವನ್ನು ಲಕ್ಷ್ಯದಲ್ಲಿಟ್ಟೇ ನಾನೀ ವಿವಾಹವನ್ನು ಏರ್ಪಡಿಸಿರುವುದು. ಬಡವರಾದ ಮಾತ್ರಕ್ಕೆ ಏನು? ಬೆಣ್ಣೆಯು ದೊರೆತರೆ ಅದನ್ನು ನುಂಗಬಾರದೇನು? ನುಂಗಿದರೆ ಅದು ಜೀರ್ಣಿಸದೇನು? ಕೈಗೆ ಬಂದ ತುತ್ತು ಬಾಯಿಗೆಟುಕದಂತೆ ಮಾಡಿಕೊಳ್ಳಬೇಡ-ನೇಹಲ!"

ನೇಹಲಳು ಸೋಮದೇವನ ಮಾತನ್ನು ಸಾವಧಾನದಿಂದ ಕೇಳಿದಳು. ಆದರೂ ಅವಳ ಮನಸ್ಸಿಗೆ ಸಮಾಧಾನವಾಗಲಿಲ್ಲ. ನೆರೆದವರನ್ನು ಕಂಡು ಅವಳು ಹೇಳಿದಳು:

"ಅರಮನೆಯಲ್ಲಿ ನಾನು ಸಂತೋಷದಿಂದಿರಲಾರೆ; ಅದನ್ನು ನಾನು ಸ್ಪಷ್ಟವಾಗಿ ಬಲ್ಲೆ ಗುರುಗಳೆ! ಅಪ್ಪ! ಅಮ್ಮ! ನೀವೂ ಕೇಳಿ. ಈ ಮದುವೆಯ ಮಾತನ್ನು ಇನ್ನು ಮುಂದುವರಿಸಬೇಡಿ. ಅದನ್ನಿಲ್ಲಿಗೇ ಬಿಟ್ಟು ಬಿಡಿ. ನಿಮ್ಮನ್ನು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಅರಮನೆಯನ್ನು ಒಮ್ಮೆ ಹೊಕ್ಕರೆ ಸಾಕು. ಆಮೇಲೆ ನಾನು ನಿಮ್ಮನ್ನು ನೋಡುವಂತಿಲ್ಲ. ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನನ್ನನ್ನು ಬೇಕಾದರೆ ಕೊಂದುಬಿಡಿ; ಬೇಡವೆನ್ನುವುದಿಲ್ಲ. ಆದರೆ ಈ ಸಾಮ್ಯರಹಿತವಾದ ವಿವಾಹಕ್ಕೆ ಮಾತ್ರ ನಾನು ಸಮ್ಮತಿಸೆನು."

ನೇಹಲಳು ಬಿಕ್ಕಿಬಿಕ್ಕಿ ಅಳುತ್ತ ತಾಯ್ತಂದೆಯರ ಪಾದಗಳಮೇಲೆ ಬಿದ್ದು ಕಣ್ಣೀರು ಕಾಲುವೆಯನ್ನು ಹರಿಸಿದಳು.

ನೇಹಲಳ ನಿಶ್ಚಯವಾದ, ನಿರ್ಮಲವಾದ ಮಾತುಗಳನ್ನು ಕೇಳಿ, ಅವಳ ಶೋಕವನ್ನು ಕಂಡು, ಅವಳ ತಾಯಿಯ ಮನಸ್ಸು ಕರಗಿತು. ಮಕ್ಕಳ ಮೇಲೆ ಮಮತೆಯುಳ್ಳ ಯಾವ ಮಾತಾಪಿತೃಗಳಿಗೆ ಇಂತಹ ಸಂದರ್ಭದಲ್ಲಿ ಮನ ಕರಗದು? ನೇಹಲಳ ತಾಯ್ತಂದೆಯರು ಬ್ರಾಹ್ಮಣನನ್ನು ಕುರಿತು ಅವನು ತಂದ ಬಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡು ಹೋಗಿ ಅರಸನಿಗೇ ಕೊಟ್ಟುಬಿಡುವಂತೆ ಹೇಳಿಬಿಟ್ಟರು.

ಸೋಮದೇವನಿಗೆ ಆಕಾಶವೇ ತಲೆಯಮೇಲೆ ಕಳಚಿಬಿದ್ದಂತಾಯಿತು. ಅವನು ಮತ್ತೆ ನೇಹಲಳಿಗೆ ಸಮಾಧಾನ ಹೇಳಿ ಅವಳ ಮನಸ್ಸನ್ನು ಅರಸನ ಅರ್ಧಾಂಗಿಯಾಗುವಂತೆ ಒಲಿಸಬೇಕೆಂದು ಯತ್ನಿಸಿದನು. ಆದರೆ ನೇಹಲಳು:

"ಗುರುಗಳೆ! ನಾನಿದುವರೆವಿಗೂ ನಿಮಗೆ ಮರ್ಯಾದೆ ಕೊಟ್ಟಿರುವೆನು. ಇನ್ನು ಮುಂದೆಯೂ ಅದೇ ತೆರನಾದ ಮರ್ಯಾದೆಯಿಂದ ನಡೆದುಕೊಳ್ಳ ಬೇಕೆಂದೆಣಿಸಿರುವೆನು."

"ಆದರೂ........ನೇಹಲ!"

"ಮನಸ್ಸೊಪ್ಪದ ಕಾರ್ಯವನ್ನು ಯಾರಿಂದಲೂ ಮಾಡಿಸಲೆತ್ನಿಸಬಾರದು ಗುರುಗಳೇ!"

"ಆದರೂ.......,"

"ನಾನು ಜೀವಿಸಬೇಕೆಂಬುದು ನಿಮಗೆ ಇಚ್ಛೆಯಿದ್ದರೆ ಇದೀಗಲೇ ಇಲ್ಲಿಂದ ಹೊರಡಿ........ನನ್ನ ಅಪರಾಧವನ್ನು ಮನ್ನಿಸಿ."

"ನಿರಾಶನಾದ ಅರಸನ ಆಗ್ರಹವು ಹಾನಿಕರವಾದುದು........"

"ಮದುವೆಯಾದರೆ ಆಗ್ರಹ........ಆಗದಿದ್ದರೆ ಆಗ್ರಹ........ಅರಸರ ಬಾಳೇ ಇಷ್ಟು........ಹೊರಡಿ ಗುರುಗಳೇ!"

ಸೋಮದೇವನು ನೀಹಲಳ ಮಾತನ್ನು ಕೇಳಿ ಬೆಚ್ಚಿದನು. ಅವನಿಗೇನೂ ತೋರದೆ ಬಟುವೆಯನ್ನು ಮೂಟೆ ಕಟ್ಟಿ ಹೆಗಲಮೇಲೇರಿಸಿ, ಅಲ್ಲಿಂದೆದ್ದು ನಿರಾಶನಾಗಿ ಹೊರಟುಹೋದನು.

೨

ತನ್ನ ಇಷ್ಟಾರ್ಥವನ್ನು ಸಲ್ಲಿಸದೆ ತನ್ನನ್ನು ನೀಹಲಳು ನಿರಾಕರಿಸಿದಳೆಂದು ಕೇಳಿ ದೇವರಾಯನು ಕುಪಿತನಾದನು. ಒಬ್ಬ ಸಾಧಾರಣ ಬಡ ಕೃಷಕನು ವಿಜಯನಗರ ಸಂಸ್ಥಾನಾಧೀಶ್ವರನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವುದಕ್ಕೆ ಒಪ್ಪಿಗೆದನಲ್ಲ ಎಂಬ ಕೋಪದಿಂದ ಅವನಿಗೆ ಮನನೋವಾಯಿತು. ಮನನೋವಿನಿಂದ ಮನೋಗಾಢವೂ ಉಂಟಾದಂತಾಯಿತು. ಯಾವಳ ಹೆಸರನ್ನು ಕೇಳಿದಮಾತ್ರದಿಂದ ಅವನು ವಿರಹಾಗ್ನಿಯಿಂದ ಬೆಂದನೋ ಅಂತಹ ನೀಹಲಳನ್ನು ಮದುವೆಯಾಗಿಯೇ ತೀರಬೇಕೆಂಬ ಅವನ ಇಚ್ಛೆಯು ಹಿಂದಿಗಿಂತ ಇಂದು ನೂರ್ಮಡಿ ದೃಢಗೊಂಡಿತು. ಅದಕ್ಕಾಗಿ ಎಂತಹ ಕಠಿಣ ಪ್ರಯತ್ನವನ್ನು ಬೇಕಾದರೂ ತಾನು ಮಾಡಲು ಸಿದ್ಧನಿರುವೆನೆಂದು ದೇವರಾಯನು ತನ್ನಲ್ಲೇ ಸಂಕಲ್ಪಿಸಿಕೊಂಡನು. "ಪ್ರೇಮದಿಂದ ನೀಹಲಳ ಹೃದಯವನ್ನು ಸೂರೆಗೊಳ್ಳಲಾರೆ ಬಲವಂತದಿಂದಲಾದರೂ ಅವಳ ಕೈಯನ್ನು ಹಿಡಿಯುವುದೇ ಸರಿ" ಎಂದು ದೇವರಾಯನು ನಿರ್ಧರಿಸಿದನು. ನೆಲವೇ ಬೀಜವನ್ನು ನುಂಗತೊಡಗಿದರೆ ಬೇಸಾಯಗಾರನೇನು ಮಾಡಿಯಾನು?

ಐದು ಸಹಸ್ರ ಅಶ್ವಾರೋಹಿಗಳನ್ನು ತನ್ನೊಡನೆ ಕರೆದುಕೊಂಡು ದೇವರಾಯನು ನೀಹಲನ ಪೇಟೆಗೆ ಹೊರಟನು. ಅವನನ್ನು ನೋಡಿದರೆ

ಅವನಾಪ್ರಾಂತ್ಯವನ್ನೆಲ್ಲ ಪರೀಕ್ಷಿಸುವುದಕ್ಕೆ ಹೊರಟವನಂತೆ ಕಂಡಿತು. ರಾಜನ ಸೈನ್ಯವು ತುಂಗಭದ್ರಾನದಿಯ ಅಂಚಿನಲ್ಲೇ ನಡೆಯಿತು. ಅಲ್ಲಿಂದ ಮುದ್ಗಲ್ ಹಳ್ಳಿಯು ಐವತ್ತು ಮೈಲಿ ದೂರವಿದ್ದಿತು. ಆ ಹಳ್ಳಿಗೆ ಮುತ್ತಿಗೆ ಹಾಕಿ ನೇಹಲಳನ್ನೂ ಅವಳ ತಾಯ್ತಂದೆಯರನ್ನೂ ಸೆರೆಹಿಡಿದು ಎತ್ತಿಕೊಂಡು ಹೋಗಬೇಕೆಂದು ದೇವರಾಯನು ತೀರ್ಮಾನಿಸಿದನು. ಆದರೆ ತಮ್ಮ ಗ್ರಾಮಾಭಿಮುಖವಾಗಿ ಹಿರಿದಾದ ಸೇನೆಯು ಬರುತ್ತಿದೆಯೆಂದು ಗ್ರಾಮವಾಸಿಗಳಿಗೆ ತಿಳಿದೊಡನೆಯೇ ಮುದ್ಗಲ್ಲಿನ ಮತ್ತು ಸುತ್ತಮುತ್ತಲಿನ ಗ್ರಾಮವಾಸಿಗಳೆಲ್ಲರೂ ಪ್ರಾಣಭಯದಿಂದ ಉತ್ತರದಿಕ್ಕಿಗೆ ದಿಕ್ಕಾಪಾಲಾಗಿ ಓಡಿಹೋದರು. ಹಾಗೆ ಓಡಿ ಹೋದವರಲ್ಲಿ ನೇಹಲಳೂ ಅವಳ ತಾಯ್ತಂದೆಯರೂ ಸೇರಿದ್ದರು.

ದೇವರಾಯನ ಸೈನಿಕರು ಬಿಜಾಪುರದ ಸುಲ್ತಾನನಿಗೆ ಸೇರಿದ ಪ್ರಾಂತ್ಯಗಳಲ್ಲಿ ಚಲಿಸುತ್ತಿದ್ದರು. ಅವರು ದಾರಿಯಲ್ಲಿ ಸಿಕ್ಕಿದ ಹಳ್ಳಿಗಳನ್ನೂ ನಗರಗಳನ್ನೂ ಕೊಳ್ಳೆಹೊಡೆದು, ಹೊಲ ಬೆಳೆಗಳನ್ನು ಧ್ವಂಸಮಾಡಿ ಕಂಡಕಂಡಂತೆ ಪುಂಡಾಟಗಳನ್ನು ಹೂಡಿದರು. ಈ ಅಕ್ರಮ ವರ್ತನೆಗಳು ಸುಲ್ತಾನನಾದ ಫಿರೋಜಷಹನ ಕಿವಿಗೆ ಬಿದ್ದೊಡನೆಯೇ ಅವನು ದೇವರಾಯನನ್ನು ಎದುರಿಸುವುದಕ್ಕಾಗಿ ದೊಡ್ಡದೊಂದು ಸೇನೆಯನ್ನು ಕಳುಹಿಸಿದನು.

ದೇವರಾಯನಿಗೂ ಫಿರೋಜಷಹನಿಗೂ ಈ ಮುನ್ನ ಹಳೆಯ ವ್ಯಾಜ್ಯವಿದ್ದಿತು. ಇದಿಷ್ಟು ನೆವವು ಸಿಕ್ಕೀತೆ ಎಂದು ಕಾದಿದ್ದ ಸುಲ್ತಾನನು ದೊಡ್ಡದೊಂದು ಸೇನೆಯೊಡನೆ ವಿಜಯನಗರದ ಮೇಲೆ ದಂಡೆತ್ತಿ ಬಂದನು. ಸುತ್ತಲೂ ಗುಡ್ಡಗಳೂ ಹಳ್ಳಕೊಳ್ಳಗಳೂ ವಿಶೇಷವಾಗಿದ್ದುದರಿಂದ ವಿಜಯನಗರದ ರಾಜಧಾನಿಯನ್ನು ಮುತ್ತಿಗೆ ಹಾಕಲು ಸುಲ್ತಾನನಿಗೆ ಸಾಧ್ಯವಾಗಲಿಲ್ಲ.

ಯುದ್ಧಮಾಡುವಾಗ ಫಿರೋಜಷಹನಿಗೆ ಬಾಣದೇಟಿನಿಂದ ಬಹಳ ಘಾಯವಾಯಿತು. ಆದುದರಿಂದ ಅವನು ರಣಕ್ಷೇತ್ರವನ್ನು ಬಿಟ್ಟು ತನ್ನ ಬಿಡಾರಕ್ಕೆ ಹಿಂತಿರುಗಿದನು. ಆದರೆ ಸ್ವಲ್ಪಕಾಲದಲ್ಲಿಯೇ ಅವನ ಸೈನಿಕರು ದೇವರಾಯನನ್ನು ಅವನ ನಗರದಲ್ಲಿಯೇ ಬಂಧಿಸಿಬಿಟ್ಟರು. ರಾಜನು ಒಳ್ಳೆ ಬಿಕ್ಕಟ್ಟಿನಲ್ಲಿ ಸಿಲುಕಿಬಿದ್ದು ಮುಂದುಗಾಣದೆ ಪರಿತಪಿಸಬೇಕಾಗಿ

ಬಂದಿತು. ಇದು ಸಾಲದೆಂದು ಸುಲ್ತಾನನ ಸೈನಿಕರು ರಾಜಧಾನಿಯ ದಕ್ಷಿಣಭಾಗದಲ್ಲಿರುವ ಹಳ್ಳಿಗಳನ್ನು ಕೊಳ್ಳೆ ಹೊಡೆದು ಊರಿಗೆ ಬೆಂಕಿ ಹತ್ತಿಸತೊಡಗಿದರು.

ಹೀಗೆ ಯುದ್ಧವು ಅನೇಕ ತಿಂಗಳುಗಳ ಕಾಲ ನಡೆಯಿತು. ಆದರೆ ಯಾವುದೊಂದು ನಿರ್ದಿಷ್ಟವಾದ ಫಲಿತಾಂಶವೂ ಕಾಣಲಿಲ್ಲ. ಯವನರು ಸೇನೆಯು ದೇವರಾಯನಿಗೆ ಸೇರಿದ ಅನೇಕ ದುರ್ಗಗಳಿಗೆ ಮುತ್ತಿಗೆ ಹಾಕಿ ವಶಪಡಿಸಿಕೊಂಡಿತು. ಕಟ್ಟಕಡೆಯಲ್ಲಿ ಪರಿಸ್ಥಿತಿಯು ತೀರ ಕೆಟ್ಟುಹೋಯಿತು. ಸುಲ್ತಾನನೊಂದಿಗೆ ಶಾಂತಿಮಾಡಿಕೊಳ್ಳದಿದ್ದರೆ ಬೇರೆ ಗತ್ಯಂತರವಿಲ್ಲವೆಂದ ರಾಜನಿಗೆ ಮನದಟ್ಟಾಯಿತು.

ದೇವರಾಯನು ಒಬ್ಬ ಮಂತ್ರಿಯನ್ನು ಸಂಧಾನಕ್ಕಾಗಿ ಫಿರೋಜಷಹನ ಬಳಿ ಕಳುಹಿಸಿದನು. ಮಂತ್ರಿಯು ಸುಲ್ತಾನನ ಮುಂದೆ ನಿಂತು:

"ಎಲೈ ಸುಲ್ತಾನರೆ! ನಮ್ಮಿಬ್ಬರ ಸೇನೆಗಳೂ ದೀರ್ಘಕಾಲದಿಂದ ಕಾದಾಡಿ ಯಾವ ಪ್ರತಿಫಲವೂ ಉಂಟಾಗಲಿಲ್ಲ. ನಮ್ಮ ಎರಡು ರಾಜ್ಯಗಳಿಗೂ ಸಂಧಿಯಾಗಿ ನಡೆದು ಶಾಂತಿಯು ನೆಲೆಸಬೇಕೆಂದು ನಮ್ಮ ಪ್ರಭುಗಳು ಆಶಿಸುತ್ತಾರೆ" ಎಂದನು.

ಸುಲ್ತಾನನು ಕೋಪದಿಂದ "ಯುದ್ಧವನ್ನು ಆರಂಭಿಸಿದವರು ನಾವೋ ನೀವೋ? ಶಾಂತಿಯು ನೆಲೆಸಬೇಕೆನೆಂದು ಆಸೆ ಮಾಡುತ್ತಿರುವವರು ನಾವೇನೂ ಅಲ್ಲವಲ್ಲ. ನಿಮ್ಮ ರಾಜನೇ ಅಲ್ಲವೆ ಮೊದಲು ಬಂದು ನಮ್ಮ ಹಳ್ಳಿಗಳನ್ನು ಲೂಟಿಮಾಡಿ ಸುಟ್ಟು ನಾಶಗೊಳಿಸಿದ್ದು? ನಮ್ಮ ರಾಜ್ಯದ ಅಂಚಿನಲ್ಲಿ ಘನಕೊಂಡಿದ ನಿಮ್ಮ ಮಹಾರಾಜನು ಏನನ್ನು ಹುಡುಕುತ್ತಿದ್ದರು ಅದನ್ನು ಹೇಳಬಾರದೆ?" ಎಂದನು.

ಅದಕ್ಕೆ ಮಂತ್ರಿಯು "ಅದನ್ನು ಕಟ್ಟಿಕೊಂಡು ಈಗೇನು ಪ್ರಯೋಜನ......ಸುಲ್ತಾನರೇ!" ಎಂದು ವ್ಯಸನದಿಂದ ಹೇಳಿದನು. ಮುದ್ಗಲ್ಲಿನಿಂದ ನಿಮ್ಮ ಸರಹದ್ದಿಗೆ ಓಡಿಬಂದ ನೇಹಲಳೆಂಬ ಓರ್ವ ಸುಂದರ ತರುಣಿಯನ್ನು ನಮ್ಮ ಮಹಾರಾಜರು ಅಟ್ಟಿಸಿಕೊಂಡು ಬಂದರಷ್ಟೆ!"

"ಹಾಗೇನು?" ಹಾಸ್ಯಚಿತ್ತನಾಗಿ ಸುಲ್ತಾನನು ಚೀರಿದನು. "ಸರಿ; ಸರಿ. ಈಗ ತಿಳಿಯಿತು ಕಾಮಿನಿ ಕಾಂಚಾಣಗಳಿಂದಲೇ ಈ ಜಗತ್ತು

ಸುಟ್ಟು ಭಸ್ಮವಾಗುತ್ತಿರುವುದು ಎಂದು ಹಿರಿಯರು ಹೇಳಿದ ಸಾಮತಿಯೇನೂ ಸುಳ್ಳಲ್ಲ ಹಾಗಾದರೆ. ಆಗಲಿ; ನಿಮ್ಮ ಮಹಾರಾಜರಿಗೆ ಸೈನ್ಯವಿದೆ; ಬಲ ವಿದೆಯೆಂದು ನನ್ನ ರಾಜ್ಯವನ್ನು ಕೊಳ್ಳೆಹೊಡೆದು ಧ್ವಂಸಮಾಡಿದರಲ್ಲವೆ? ಅವರು ಕಾಮಾತುರರಾದರೆ ನನ್ನ ಪ್ರಜೆಗಳು ಅವರ ನೆಲನಟ್ಟುಗಳನ್ನು ಕಳೆದುಕೊಂಡು ಪ್ರಾಣಬಿಡಬೇಕಾದುದೇ ನ್ಯಾಯವೆಂದು ನಿಮ್ಮ ದೊರೆಗಳಿಗೆ ಮನವರಿಕೆಯಾಯಿತೋ ಏನೋ? ಪಾಪ; ಅವರಾದರೂ ಧರ್ಮದಿಂದ ರಾಜ್ಯಪರಿಪಾಲನೆ ಮಾಡತಕ್ಕವರು. ನಾವು ಕ್ರೂರಾತ್ಮರು-ಅಧರ್ಮಿಗಳು ....ನಮ್ಮೊಡನೆ ಸಂಧಾನವೇಕೆ? ಅವರ ಕೃತ್ಯಕ್ಕೆ ತಕ್ಕ ಫಲವನ್ನು ಅವರು ಅನುಭವಿಸಲಿ. ನಾವೇನೂ ಅಡ್ಡಿ ಬರುವುದಿಲ್ಲವಲ್ಲ."

ಸುಲ್ತಾನನು ಹೆಮ್ಮೆಯಿಂದ ಗಹಗಹಿಸಿ ನಕ್ಕನು.

"ಅದೆಲ್ಲವೂ ನಿಜ ಸುಲ್ತಾನರೇ! ಹಿಂದೆ ನಡೆದುಹೋದ ಮಾತನ್ನು ಈಗ ನೆನೆಸಿಕೊಂಡು ಪ್ರಯೋಜನವೇನು? ಎರಡೂ ಕಡೆಗಳಲ್ಲಿ ಬೇಕಾದ ಕಷ್ಟನಷ್ಟಗಳು-ಸಾವುನೋವುಗಳು-ಉಂಟಾಗಿವೆ. ಇಲ್ಲವೆಂದು ಯಾರು ಅನ್ನುವುದಿಲ್ಲ. ಆದರೆ ಈಗ ನಾನು ತಮ್ಮಲ್ಲಿಗೆ ಬಂದಿರುವ ವಿಚಾರವನ್ನು ಪರಾಮರ್ಶಿಸಬೇಕೆಂದು ಪ್ರಾರ್ಥಿಸುತ್ತೇನೆ, ಎರಡು ಕಡೆಯವರೂ ಸಂಧಾನ ಮಾಡಿಕೊಳ್ಳುವ ವಿಚಾರದಲ್ಲಿ ತಮ್ಮ ಅಭಿಮತವೇನು? ಅದನ್ನು ಕೇಳಬಯಸು ತ್ತೇನೆ."

"ಓಹೋ! ಭೇಷಾಗಿ ಆಗಬಹುದು;" ಸುಲ್ತಾನನು ಹೇಳಿದನು; "ಆದರೆ ಕೆಲವು ಷರತ್ತುಗಳನ್ನು ನೀವು ನಡೆಯಿಸಿಕೊಟ್ಟರೇನೇ ಸಂಧಾನವು ಸಾಧ್ಯವಾಗಬಲ್ಲುದು. ಈ ಯುದ್ಧಕ್ಕೆ ಒಬ್ಬ ಸುಂದರಿಯು ಮೂಲಕಾರಣ ಳಾದಳಲ್ಲವೆ? ಆದುದರಿಂದ ಸುಂದರಿಯಿಂದಲೇ ಈ ಯುದ್ಧವು ಕೊನೆಗೊಳ್ಳ ಬೇಕೆಂಬುದು ನನ್ನ ಅಭಿಮತ. ನಿಮ್ಮ ಮಹಾರಾಜರಿಗೆ ಸ್ವರದ್ರೂಪಿಣಿ ಯಾದ ಒಬ್ಬ ಮಗಳಿರುವಳೆಂದು ನನಗೆ ಸಮಾಚಾರವು ಮುಟ್ಟಿದೆ. ಆ ಮೋಹನಾಂಗಿಯನ್ನು ನನಗೆ ಕೊಟ್ಟು ಮದುವೆ ಮಾಡಬೇಕು ಇದಕ್ಕೆ ನಿಮ್ಮ ರಾಜರು ಒಪ್ಪುವರೆ?"

"ಸರ್ವಥಾ ಸಾಧ್ಯವಿಲ್ಲ ಸುಲ್ತಾನರೆ! ನಿಮ್ಮ ಬೇಡಿಕೆಯು ಸಾಧು ವಾದುದಲ್ಲ ಹಿಂದುಗಳಲ್ಲಿ ಉತ್ತಮಕುಲದ ಕನ್ಯೆಯು ಮುಸಲ್ಮಾನನನ್ನು

ಮದುವೆಯಾಗಬಹುದೇ? ಛೀ! ಛೀ! ಇಂತಹ ವಿಚಾರವನ್ನು ಇದುವರೆಗೆ ಯಾರೂ ಕಂಡು ಕೇಳಿಲ್ಲ. ಇದು ನಮ್ಮ ಮತಸಂಪ್ರದಾಯಕ್ಕೆ ಅತ್ಯಂತ ವಿರೋಧವಾದುದು. ಈ ನಿರ್ಬಂಧವನ್ನು ನಿಮ್ಮ ಮನಸ್ಸಿನಿಂದ ತೊಡೆದುಹಾಕಿ, ಇದು ಅನ್ಯಾಯವಾದುದು......."

"ಹಾಗಾದರೆ ಸಂಧಾನವು ಇಷ್ಟಕ್ಕೇ ಮುಗಿಯಿತೆಂದು ತಿಳಿಯಿರಿ. ಯುದ್ಧವು ಆದರ ಬಳಿಕ ಇದೇ ನಡೆಯಲಿ. ನೀವು ನಮ್ಮ ಹಿತಕ್ಕಾಗಿ ಹಿತವನ್ನೇ ಗುಪ್ತವಾಗಿಟ್ಟಿರಿ. 'ಯುದ್ಧ' ಎಂಬ ಶಬ್ದವನ್ನು ಕೇಳಿದ ತಕ್ಷಣಕ್ಕೆ ಹಾರಿ ನಿಲ್ಲಿರಿ. ಕೂಡಲೆ ಆಳಿಯನ್ನು ಹಚ್ಚಿಕೊಂಡವರು ನೀವು. ಊರುಗಳು ಸುತ್ತು ಆದಾಗ ಪ್ರತಿಯೊಂದಕ್ಕಿಂತ ಶೀಘ್ರವಾಗಿ ಮುಂದೆ ಬಂದವರು ನೀವು. ಸಂಧಾನ ಕಾಲದಲ್ಲಿ ದಯೆಗಾಗಿ ನಾವು ಬೇಡುತ್ತೇವೆಯೇ? ನಾವೂ ಬೇಡ, ನೀವೂ ಬೇಡ. ಯುದ್ಧವು ನಡೆಯಲಿ; ಧರ್ಮಯುದ್ಧವಾಗಿ ನಡೆಯಲಿ."

"ಹಾಗೆ ಹೇಳಬಹುದೇ ಮಹಾರಾಜರೇ?"

"ಇನ್ನು ಹೇಗೆನ್ನಬೇಕು?"

"ಸಂಧಾನಕ್ಕೆಂದು ನಾನಾಗಿ ಇಲ್ಲಿ ಬಂದಿರುವಾಗ......."

"ಈಗಲೂ ಬೇಡವೆನ್ನುವುದಿಲ್ಲ. ನಿಮ್ಮ ಮಹಾರಾಜರು ನಮ್ಮ ಷರತ್ತುಗಳಿಗೆ ಒಪ್ಪುವುದಾದರೆ.......ಆಗಬಹುದು."

"ಆದರೆ ಹಿಂದೂ ರಾಜಕುಮಾರಿಯನ್ನು ಯವನರಾದ ನಿಮಗೆ ಕೊಟ್ಟು ಮದುವೆ ಮಾಡುವುದೆಂದರೆ ಅದು ಆಗದ ಮಾತು."

"ಆಗದ ಮಾತು ಹೋಗಲಿ. ಅದನ್ನು ಕಟ್ಟಿಕೊಂಡು ನಾವು ಅಳುವುದಿಲ್ಲ. ಇಂದು ತಾನಾಗಿ ಬಾರದಿದ್ದು ಈ ನಾಳೆ ಬಲವಂತದಿಂದ ಬಂದೀತು. ಬರಲಿ; ನಿಧಾನವಾಗಿಯೇ ಬರಲಿ ನಮಗೇನು ಅವಸರವಿಲ್ಲ. ನಮ್ಮ ಸೈನಿಕರಲ್ಲಿ ಇನ್ನೂ ನಾಲ್ಕು ಲಕ್ಷದಷ್ಟು ಉಳಿದಿದೆ. ನಾವು ಬೇರೆ ಹೇಳಬೇಕಾದ ಪ್ರಮೇಯವು ಒದಗಿಲ್ಲ. ಯವನರು ಹಿಂದೂಗಳನ್ನೂ ಅಲ್ಲ ಇಷ್ಟು ಮಾತ್ರದ ವಿಷಯವನ್ನಾದರೂ ನಿಮಗೆ ತಿಳಿಸಬೇಕಾಗಿದ್ದರೆ ನಾವು ನಿಮ್ಮ ಮೇಲೆ ದಂಡೆತ್ತಿಬಂದು ಫಲವೇನು? ಮೊದಲಿಗೆ ನಮ್ಮನ್ನು ಕಂಡರೆ ಏನು ಭಯವಿದ್ದೀತು? ಈಗಲೇ ನಮಗೆ ನ್ಯಾಯವಾಗಿ ಸಲ್ಲಿಸಬೇಕಾದ ಕಪ್ಪಕಾಣಿಕೆಗಳನ್ನು ಸಲ್ಲಿಸಿದರೆ ಸರಿ. ಇಲ್ಲದಿದ್ದರೆ ಕಾಲವು ತಪ್ಪುವುದಿಲ್ಲ ನಮ್ಮ ಪ್ರಯತ್ನಗಳು

ಹೆಚ್ಚಿ ನಿಮ್ಮ ಅರಸರ ಭಂಡಾರವು ಬರಿದಾದೀತು. ಈ ವಿಚಾರದಲ್ಲಿ ಎಚ್ಚರಿಕೆ ಯಿರಲಿ."

"ಆದರೆ ತಮ್ಮ ಷರತ್ತುಗಳಾದರೂ ಏನು ಸುಲ್ತಾನರೆ ?"

"ಮೊದಲನೆಯ ಷರತ್ತು: ನಿಮ್ಮ ಮಹಾರಾಜನ ಮಗಳನ್ನು ನನಗೆ ಕೊಟ್ಟು ಮದುವೆ ಮಾಡುವುದು ಇದರಲ್ಲಿ ಮತದ ಮಾತೆತ್ತಿ ಸಮ್ಮನೆ ಗಂಟಲು ಒಣಗಿಸಿಕೊಳ್ಳಬೇಡಿ. ಪ್ರೇಮಕ್ಕೆ ಜಾತಿಮತಗಳ ಭೇದವಿಲ್ಲವೆಂಬು ದನ್ನು ಮರೆತೀರೇನು? ಈ ಷರತ್ತಿಗೆ ನೀವು ಅನುಮೋದಿಸದಿದ್ದರೆ ಸಂಧಾನವು ಇಲ್ಲಿಗೇ ಪೂರೈಸಿತೆಂದು ತಿಳಿದು ನೀವು ಬಂದ ದಾರಿಯನ್ನು ಹಿಡಿದುಕೊಂಡು ನಡೆಯುತ್ತಿರಬಹುದು. ನಮ್ಮ ಅಭ್ಯಂತರವೇನೂ ಇಲ್ಲ.'

"ಸುಲ್ತಾನಮಹಾಶಯರೇ! ನ್ಯಾಯದಿಂದ ಅನುವರ್ತಿಸಿರಿ. ನಮ್ಮ ಮಹಾರಾಜರು ಹಣವನ್ನಾಗಲಿ, ನೆಲವನ್ನಾಗಲಿ ಬೇಕಾದಷ್ಟು ಕೊಡಲು ಸಿದ್ಧ ರಿರುವರು. ಆದರೆ ತಮ್ಮ ಕುವರಿಯನ್ನು ನಿಮಗೆ ಕೊಟ್ಟು ಮದುವೆಮಾಡಲು ಸಮ್ಮತಿಸಲಾರರು."

"ಹಾಗಾದಲ್ಲಿ ಮುಂದಿನ ಮಾತು ನಿರರ್ಥಕವಾದುದು;" ಫಿರೋಜ ಷಹನು ದೃಢವಾಗಿ ಹೇಳಿದನು. "ಈಗ ನಾನು ಹೇಳುವುದೇ ನನ್ನ ಕೊನೆಯ ಮಾತೆಂದು ತಿಳಿಯಿರಿ. ನನ್ನ ರಾಜ್ಯದಲ್ಲಿ ನಿಮ್ಮ ಮಹಾರಾಜರೂ ಅವರ ಸೈನಿ ಕರೂ ಉಂಟುಮಾಡಿರುವ ಎಲ್ಲ ಕಷ್ಟನಷ್ಟಗಳ ಪರಿಹಾರಾರ್ಥವಾಗಿ ನಿಮ್ಮ ಮಹಾರಾಜರು ನಮಗೆ ಐದುಲಕ್ಷ ರೂಪಾಯಿಗಳನ್ನೂ, ಐದುಸಹಸ್ರ ಕುದುರೆ ಗಳನ್ನೂ ಕೊಡುವುದು ಮಾತ್ರವಲ್ಲದೆ ತಮ್ಮ ಕುವರಿಯನ್ನೂ ನಮಗೆ ಲಗ್ನ ಮಾಡಿಕೊಡಬೇಕು. ವಿಜಯನಗರದ ರಾಜಪುತ್ರಿಯೊಂದಿಗೆ ನಮಗೆ ಮದುವೆ ಯಾದರೇನೇ ನಮ್ಮೆರಡು ರಾಜ್ಯಗಳಿಗೂ ಇರುವ ದ್ವೇಷವು ಮರೆತುಹೋಗಿ ಮೈತ್ರಿಯುಂಟಾಗಬೇಕಾದರೆ."

"ತಮ್ಮ ಸಂದೇಶವನ್ನು ನಮ್ಮ ಮಹಾರಾಜರಿಗೆ ತಿಳಿಸುತ್ತೇನೆ. ಈಗೊದಗಿರುವ ಆಪತ್ತನ್ನು ನಿವಾರಿಸಲು ನನ್ನ ಕೈಲಾದ ಸಾಹಸಗಳನ್ನು ಮಾಡುತ್ತೇನೆ."

ಹೀಗೆಂದು ಹೇಳಿ ಮಂತ್ರಿಯು ದೇವರಾಯನಲ್ಲಿಗೆ ಬಂದನು.

ಸುಲ್ತಾನನ ಷರತ್ತುಗಳನ್ನು ಕೇಳಿ ದೇವರಾಯನಿಗೆ ದುಃಖವೂ

ಕ್ರೋಧವೂ ಉಂಟಾಯಿತು. ಆದರೆ ತನ್ನ ರಾಜಧಾನಿಯಲ್ಲೇ ಸುಲ್ತಾನನಿಂದ ಬಂಧಿತನಾದ ದೇವರಾಯನು ಸಂಧಾನದ ಈ ಷರತ್ತುಗಳಿಗೆ ಒಪ್ಪಿಕೊಳ್ಳದೆ ಏನು ಮಾಡಬಲ್ಲವನಾಗಿದ್ದನು? ರಾಜನ ಅಚಾತುರ್ಯಕ್ಕಾಗಿ, ಕಾಮಾತುರತೆಯಿಂದುಂಟಾದ ಅಸಾಹುಕತ್ವಕ್ಕಾಗಿ, ತಾವಿನ್ನೆಷ್ಟು ಕಾಲಕ್ಕೂ ಕಷ್ಟವನ್ನು ಸಹಿಸಲಾರೆವೆಂದು ವಿಜಯನಗರದ ಪ್ರಜೆಗಳು ಗೊಣಗುಟ್ಟತೊಡಗಿದರು. ತನ್ನ ಬುದ್ಧಿಹೀನತೆಗೆ ತಾನೇ ಮರುಗಿ ದೇವರಾಯನು ಮನಸ್ಸಿಲ್ಲದಿದ್ದರೂ ವ್ಯಸನದಿಂದ ಷರತ್ತುಗಳಿಗೆ ತಾನು ಒಪ್ಪಿಕೊಂಡಿರುವುದಾಗಿ ಸುಲ್ತಾನನಿಗೆ ಹೇಳಿಕಳುಹಿಸಿದನು.

ಎಂದಮೇಲೆ ದೇವರಾಯನ ಕುಮಾರಿಯನ್ನು ಸುಲ್ತಾನನಿಗೆ ಒಪ್ಪಿಸಲಾಯಿತು. ಅವರಿಬ್ಬರ ವಿವಾಹವೂ ನಡೆಯಿತು. ವಿಜಯನಗರದ ಸುಪ್ರಸಿದ್ಧ ಅರಸರ ಚರಿತ್ರೆಯಲ್ಲಿ ಇಂತಹ ಬಾಂಧವ್ಯವು ಇದುವರೆಗೂ ಏರ್ಪಟ್ಟಿರಲಿಲ್ಲ. ವಿಧಿಯು ಈಗ ಈ ಕ್ರೂರವಾದ ಲೀಲೆಯನ್ನು ಹೂಡಿತು. ದೇವರಾಯನು ಬಲಿಷ್ಠನಾದ ಮಹಾರಾಜನೇನೋ ಹೌದು. ಆದರೂ ಒಬ್ಬ ರೈತನ ಮಗಳಮೇಲಿನ ಪ್ರೇಮಕ್ಕೆ ಮನಸೋತು ಕಾಮಾಂಧನಾದುದರಿಂದ ತನ್ನ ಉದರದಲ್ಲಿ ಜನಿಸಿದ ಕುಮಾರಿಯನ್ನೇ ಮತಸಂಪ್ರದಾಯಕ್ಕೆ ವಿರೋಧವಾಗಿ ಯವನ ಸುಲ್ತಾನನಿಗೆ ಕೊಟ್ಟು ಮದುವೆ ಮಾಡಬೇಕಾಯಿತು. ಈ ವಿಚಾರವನ್ನು ತಿಳಿಯಬಲ್ಲವನಾಗಿದ್ದರೆ ದೇವರಾಯನು ನೇಹಲಳ ಮೇಲೆ ದಂಡೆತ್ತಿ ತನ್ನ ಪ್ರೇಮಯಾತ್ರೆಯಲ್ಲಿ ಇಷ್ಟೊಂದು ಮುಂದುವರಿಯುತ್ತಿರಲಿಲ್ಲ.

ಸುಲ್ತಾನ ಫಿರೋಜಷಹನು ಬೇಕಾದಷ್ಟು ಧನದೊಂದಿಗೆ ಸಹಸ್ರಾರು ಕುದುರೆಗಳೊಂದಿಗೂ - ತನ್ನ ನೂತನ ವಧುವಿನೊಂದಿಗೂ - ವಿಜೃಂಭಣೆಯಿಂದ ತನ್ನ ರಾಜಧಾನಿಯನ್ನು ಸೇರಿದನು. ಆ ಬಳಿಕ ನೇಹಲಳನ್ನು ತನ್ನ ಅರಮನೆಗೆ ಕರೆತರಲು ದೂತರನ್ನು ಅಟ್ಟಿದನು. ಅವಳ ಮನೋಹರ ಸೌಂದರ್ಯವನ್ನು ಕಂಡು ಸುಲ್ತಾನನು ಬೆರಗಾದನು. ಅವಳನ್ನು ತನ್ನ ಹಿರಿಯ ಮಗನಿಗೆ ಕೊಟ್ಟು ಮದುವೆ ಮಾಡಿದನು. ಅಲ್ಲಿಗೆ ನೇಹಲಳ ಪ್ರಣಯ ಚರಿತ್ರೆಯೂ ಮುಗಿಯಿತು.

"ಪ್ರೇಮವು ಸಂತಸಭರಿತವಾದ ಸಂತಾಪ" ಎಂಬ ಕವಿವಾಕ್ಯದ ಗೂಢಾರ್ಥವನ್ನು ದೇವರಾಯನು ಈಗ ಸ್ಪಷ್ಟವಾಗಿ ಅರಿತನು.

೬. ಕುಮಾರನ ಜನನ

ಹಿಮಾಲಯ! ಮಹದುನ್ನತ ಹಿಮಾಲಯ! ಪವಿತ್ರತಮ ಹಿಮಾಲಯ! ಭಾರತದ ಪವಿತ್ರ ನದಿಗಳ ಜನ್ಮಸ್ಥಾನ! ನಮ್ಮ ದೇವಗಂಧರ್ವರ ಋಷಿತಾಪಸರ, ಸಾಧುಸನ್ಮತಿಗಳ ಆಲಯ! ಹಿಮವತ್ಪರ್ವತವು ಅತ್ಯುನ್ನತವಾಗಿರುವುದರಿಂದಲೇ ಮೇಘರಾಶಿಯು ಅದರ ಶಿಖರವನ್ನೂ ಮುಟ್ಟುವಂತಿಲ್ಲ. ವರ್ಷದಾದ್ಯಂತವೂ ಈ ಉನ್ನತ ಶಿಖರಗಳು ಹಿಮರಾಶಿಯ ಸ್ಫಟಿಕಸಮಾನವಾದ ಹೊದಿಕೆಯನ್ನು ಹೊದ್ದಿರುತ್ತವೆ. ಹಿಮವತ್ಪರ್ವತದ ಮನಮೋಹಕ ಸೌಂದರ್ಯವನ್ನು ಬಣ್ಣಿಸಬಲ್ಲವರಾರು?

ಈ ಅಖಂಡ ಪರ್ವತರಾಶಿಗೆ ಹಿಮವಾನನೇ ರಾಜನು ಮತ್ತು ಒಡೆಯನು. ಈಗ್ಗೆ ಬಹಳಕಾಲದ ಹಿಂದಿನ ಮಾತು. ಹಿಮವಂತನಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅವರಲ್ಲಿ ಕಿರಿಯಳೇ ಪಾರ್ವತಿ. ಅವಳು ಸುಂದರ ಮನೋಹರ ಸ್ವರೂಪವುಳ್ಳವಳಾಗಿದ್ದಳು. ಈ ಸರೋಜದಳನೇತ್ರಿಯು ದಿನೇ ದಿನೇ ಮತ್ತಷ್ಟು ಸುಂದರಳಾಗಿ ಬೆಳೆಯತೊಡಗಿದಳು. ಭೂಲೋಕದಲ್ಲಿಯಾಗಲಿ ದೇವಲೋಕದಲ್ಲಿಯಾಗಲಿ ಈ ಸ್ಫುರದ್ರೂಪಿಣಿಗೆ ಸರಿಸಮನೆನಿಸಿದವರು ಅನೇಕರಿರಲಿಲ್ಲ. ಮನೋಹರವೂ ಗಂಭೀರವೂ ಆದ ಇವಳ ಗುಣಗಳನ್ನು ನೋಡಿ ಹಿಮವಂತನು ಪರಮಾನಂದಭರಿತನಾದನು.

ಒಂದಾನೊಂದು ದಿನ ತ್ರಿಲೋಕಸಂಚಾರಿಯಾದ ನಾರದ ಮುನೀಶ್ವರನು ಹಿಮವಂತನ ಆಸ್ಥಾನಕ್ಕೆ ಬಿಜಯಮಾಡಿದನು ಹಿಮವಂತನು ಅರ್ಘ್ಯಪಾದ್ಯಾಚಮನಗಳಿಂದ ಋಷಿಶ್ರೇಷ್ಠನನ್ನು ಸತ್ಕರಿಸಿ, ಅವನನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ಕುಶಲಪ್ರಶ್ನೆಗಳನ್ನು ಮಾಡಿ, ಅವನಿಗೆ ಷೋಡಶೋಪಚಾರಗಳನ್ನು ಸಾಂಗವಾಗಿ ಮಾಡಿದನು. ಆ ಬಳಿಕ ಪಾರ್ವತಿಯು ನಮಸ್ಕರಿಸಲು ಅವಳನ್ನು ಆಶಿರ್ವದಿಸುತ್ತಾ ತನಗೆ ಸಹಜವಾದ ಮುಗುಳ್ನಗೆಯಿಂದ ನಾರದಮಹಾಮುನಿಯು "ಎಲೈ ಹಿಮವಂತನೇ! ನಿನ್ನ ಪುತ್ರಿಯಾದ ಪಾರ್ವತಿಯು ಈಗ ಅಚ್ಚುಮೆಚ್ಚಿನ ಕನ್ನಿಕೆಯಾಗಿರುವಳು. ಇವಳು ಸಾಕ್ಷಾತ್ ಪರಶಿವನಾದ ಈಶ್ವರನನ್ನು ಪಾಣಿಗ್ರಹಣ ಮಾಡುವಳು" ಎಂದು

ನುಡಿದನು. ಈ ಸುವಾರ್ತೆಯನ್ನು ಕೇಳಿ ಹಿಮವಂತನಿಗೂ, ಪಾರ್ವತಿಗೂ ನೆರೆದ ಸಭಿಕರಿಗೂ ಅತ್ಯಂತ ಆನಂದವಾಯಿತು.

ಶಿವದೇವನಿಗೆ ಆಗಿನ್ನೂ ನವಯೌವನ. ಶಿವನ ಹುಟ್ಟುಗುಣವು ತಪಸ್ಸಿನ ಕಡೆ ಇದ್ದುದು; ವಿಷಯಾಭಿಲಾಷೆಯುಳ್ಳಿರಲಿಲ್ಲ. ಹಿಮವಂತನು ತಪೋನಿಷ್ಠನಾಗಿದ್ದ ಪರಶಿವನ ಶುಶ್ರೂಷೆಗಾಗಿ ಪಾರ್ವತಿಯನ್ನು ಕೆಲವು ಸಖಿಯರೊಂದಿಗೆ ಕೈಲಾಸಪರ್ವತಕ್ಕೆ ಕಳುಹಿಸಿಕೊಟ್ಟನು.

ಇದು ಹೀಗಿರಲು ದೇವತೆಗಳು ತಮ್ಮ ಮುಖಂಡನಾದ ಇಂದ್ರನೊಡನೆ ಬ್ರಹ್ಮದೇವನ ಸಂದರ್ಶನಾರ್ಥವಾಗಿ ಹೊರಟರು. ಜಗತ್ತಿನ ಆದಿ ಸೃಷ್ಟಿಕರ್ತನೆಂದು ಪ್ರಸಿದ್ಧನಾದ ಬ್ರಹ್ಮದೇವನು ತನ್ನ ದರ್ಶನಾಭಿಲಾಷಿಗಳಾಗಿ ಬಂದಿದ್ದ ದೇವತೆಗಳನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಸತ್ಕರಿಸಿದನು.

"ಎಲೈ ದೇವತೆಗಳಿರಾ! ತಾವೆಲ್ಲರೂ ಏಕಕಾಲದಲ್ಲಿ ನನ್ನ ದರ್ಶನಾಕಾಂಕ್ಷಿಗಳಾಗಿ ಬಂದುದರಿಂದ ನಾನು ಬಹುವಾಗಿ ಗೌರವಿತನಾದೆನು. ನೀವೆಲ್ಲರೂ ನಿಮ್ಮ ನಿಮ್ಮ ಸ್ಥಾನಗಳಿಂದ ಏಕಕಾಲದಲ್ಲಿ ನನ್ನನ್ನು ನೋಡ ಬಂದಿರುವುದನ್ನು ಕುರಿತು ಆಲೋಚಿಸಲು ಏನೋ ಪ್ರಮಾದದ ಪ್ರಕರಣ ನಡೆದಿರುವಂತೆ ತೋರುತ್ತಿದೆ. ಅದೂ ಅಲ್ಲದೆ ನೀವೆಲ್ಲರೂ ಖಿನ್ನವದನರಾಗಿದ್ದೀರಿ. ನಿಮ್ಮ ಬರುವಿಕೆಯ ಕಾರಣವನ್ನು ಹೇಳುವಿರೆಂದು ನಿರೀಕ್ಷಿಸುತ್ತೇನೆ" ಎಂದು ಬ್ರಹ್ಮನು ಪ್ರಸನ್ನವದನನಾಗಿ ನುಡಿದನು.

"ಹೇ ಪವಿತ್ರನಾದ ದೇವಮಾನವರ ಪಿತೃವೇ!" ಎಂದು ಸಂಬೋಧಿಸಿ ಇಂದ್ರನು ಸಾಷ್ಟಾಂಗ ಪ್ರಣಾಮವನ್ನಾಡಿ ಹೇಳತೊಡಗಿದನು: "ನಾವು ಬಂದ ಕಾರಣವು ನಿನಗೆ ತಿಳಿಯದೆ ಇಲ್ಲ. ಅನೇಕ ವರ್ಷಗಳ ಹಿಂದೆ ದೀರ್ಘಕಾಲ ಕಠಿಣತರ ತಪಸ್ಸನ್ನಾಚರಿಸಿ ತಾರಕನು ನಿನ್ನಿಂದ ವರವನ್ನು ಪಡೆದು ಈಗ ಅತ್ಯಂತ ಬಲಿಷ್ಠನಾಗಿರುವನು. ರಾಕ್ಷಸನಾದ ಅವನು ತನ್ನ ಭುಜಬಲ ಪರಾಕ್ರಮವನ್ನು ಸೃಷ್ಟಿತ ಸರ್ವಪ್ರಾಣಿಗಳನ್ನೂ ಹಿಂಸಿಸುವುದರಲ್ಲಿ ಉಪಯೋಗಿಸುತ್ತಿದ್ದಾನೆ. ಅವನ ದೆಸೆಯಿಂದ ಮೂರು ಲೋಕಗಳಲ್ಲಿಯೂ ಸುಖಶಾಂತಿಗಳು ನೆಲೆಯುಳಿದು ಹೋಗಿವೆ" ನಮಗಿನ್ನು ಸಹಾಯವಿಲ್ಲ; ಬಾಳಿಗಾಲವಿಲ್ಲ. ಪರಾಕ್ರಮಿಗಳಾದ ದೇವತೆಗಳೂ ಸಹ

ಅವನ ಅಡಿಯಾಳುಗಳಂತೆ ಅವನಿಗೆ ತಗ್ಗಿನಡೆಯಬೇಕಾದ ಕಷ್ಟಕಾಲವು ಒದಗಿದೆ. ನಮಗಿಂತಹ ಅವಮಾನವು ಒದಗಬಹುದೆ? ತಾತ! ನಿನ್ನನ್ನುಳಿದು ನಮ್ಮನ್ನು ಸಲಹುವವರಾರು? ಕೃಪೆಮಾಡಿ ನಮ್ಮನ್ನು ಈ ಕಠಿಣ ಪರಿಸ್ಥಿತಿಯಿಂದ ಪಾರುಗಾಣಿಸಲಾರೆಯಾ? ಹೇ ಸೃಷ್ಟಿ ವಿಧಾತನೆ! ದಯಾ ದೃಷ್ಟಿಯಿಂದ ನೋಡಿ ನಮ್ಮನ್ನು ಸಲಹು."

ದೇವತೆಗಳ ಮೊರೆಯನ್ನು ಕೇಳಿ ಬ್ರಹ್ಮದೇವನಿಗೆ ಕನಿಕರವುಂಟಾಯಿತು. "ನನ್ನ ವರಬಲದಿಂದ ತಾರಕನು ಅಪರಿಮಿತ ಪರಾಕ್ರಮಿಯಾದುದು ನಿಜ. ಆದರೂ ತಾನು ನೆಟ್ಟ ವೃಕ್ಷವನ್ನು ತಾನೇ ನಿರ್ದಾಕ್ಷಿಣ್ಯದಿಂದ ಕಡಿದುಹಾಕವುದು ಲೋಕದಲ್ಲಿ ನ್ಯಾಯವೆನಿಸಬಲ್ಲುದೆ?" ಎಂದು ಸೃಷ್ಟಿಕರ್ತನು ಹೇಳಿದನು.

"ಈ ಕಷ್ಟದಿಂದ ಪಾರಾಗುವುದಕ್ಕೆ ಯಾವುದಾದರೊಂದು ಉಪಾಯವನ್ನು ಹುಡುಕಬೇಕಲ್ಲವೆ?" ಎಂದು ದೇವೇಂದ್ರಾದಿಗಳು ಮತ್ತೆ ಬ್ರಹ್ಮದೇವನನ್ನು ಕೇಳಿದರು. "ಇನ್ನೆಷ್ಟುಕಾಲವೂ ನಾವು ಈ ತಾರಕನ ಕೋಟಲೆಗಳನ್ನು ಸೈರಿಸಲಾರೆವು ಪ್ರಭು! ಇವನ ಲಯಕ್ಕೆ ಯಾವುದಾದರೊಂದು ಮಾರ್ಗವನ್ನು ಸೂಚಿಸಬೇಕು. ಇಲ್ಲದಿದ್ದರೆ ಗತ್ಯಂತರವಿಲ್ಲ" ಎಂದು ಅವರೆಲ್ಲರು ಕೈಜೋಡಿಸಿ ಬೇಡಿಕೊಂಡರು.

ಆಗ ಬ್ರಹ್ಮದೇವನು ಹೇಳಿದನು:

"ನಿಮ್ಮ ಕಷ್ಟನಿವಾರಣೆಗೆ ಒಂದೇ ಒಂದು ಉಪಾಯವು ಉಳಿದಿರುವುದು. ತಪೋನಿಷ್ಠನಾದ ಈಶ್ವರನು ಪಾರ್ವತಿದೇವಿಯ ಪ್ರಾಣಿಗ್ರಹಣ ಮಾಡಬೇಕೆಂದು ವಿಧಿಯ ನಿಯಮವಿದೆ. ಅವರ ವಿವಾಹದಿಂದ ಕುಮಾರನ ಜನನವಾಗುವುದು. ಆ ವೀರಕುಮಾರನು ದೇವತೆಗಳಿಗೆ ಸೇನಾನಾಯಕನಾಗಿ ನಿಂತು ತಾರಕನನ್ನು ಸಂಹಾರಮಾಡುವನು. ಶಿವನು ಪಾರ್ವತಿಯನ್ನು ವರಿಸುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಿ. ನೀವು ಈಗ ಮಾಡಬೇಕಾದುದು ಅಷ್ಟೆ."

ಬ್ರಹ್ಮನ ಮಾತನ್ನು ಕೇಳಿ ದೇವತೆಗಳು ಸಂತುಷ್ಟರಾದರು. ಅವರ ಹೃದಯದಲ್ಲಿ ಆನಂದವೂ ನೆಚ್ಚಿಕೆಯೂ ಉದ್ಭವಿಸಲು ಸಂತೋಷಚಿತ್ತರಾಗಿ ಅವರು ಸ್ವಸ್ಥಾನಗಳಿಗೆ ತೆರಳಿದರು.

೨

ಇಂದ್ರನು ಕಾಮದೇವನಿಗೆ ಬರುವಂತೆ ಹೇಳಿಕಳುಹಿಸಿದನು. ದೇವತೆಗಳ ಅಭಿಮತವನ್ನು ಅವನಿಗೆ ತಿಳಿಯಹೇಳಿದನು. "ಈಗ ನಮ್ಮ ಕ್ಷೇಮವನ್ನು ಸಾಧಿಸುವ ಮಹತ್ವಪೂರ್ಣದ ಹೊಣೆಗಾರಿಕೆಯು ನಿನ್ನ ಹೆಗಲನ್ನು ಹೊತ್ತಿರುವುದು; ಪಾರ್ವತಿ ಪರಮೇಶ್ವರರ ಸ್ವಯಂವರವನ್ನು ಸಫಲಗೊಳಿಸುವುದರಿಂದ ಎಲ್ಲ ದೇವತೆಗಳ ಕೃಪೆಗೆ ಪಾತ್ರನಾಗುವ ಸುಯೋಗವು ನಿನಗೆ ದೊರೆತಿದೆ. ಮೂರು ಲೋಕಗಳು ನಿನ್ನ ಉಪಕಾರವನ್ನು ಕೃತಜ್ಞತೆಯಿಂದ ನೆನೆಸುವುವು. ದೇವ ಮಾನವರ ಶ್ರೇಯಸ್ಸಿಗಾಗಿ, ಅವರ ಚಿರಶಾಂತಿಗಾಗಿ ದುಡಿಯುವವನು ಜಗದ್ವಂದನೇ ಸರಿ!"

ಇಂದ್ರನ ಮಾತುಗಳನ್ನು ಕೇಳಿ ದೇವತೆಗಳಿಂದ ಬೀಳ್ಕೊಂಡು ಮನ್ಮಥನು ತನ್ನ ಸಹಚಾರಿಯಾದ ವಸಂತನೊಡನೆ ಕೈಲಾಸಪರ್ವತವನ್ನು ಪ್ರವೇಶಿಸಿದನು. ಸಿದ್ಧಾಶ್ರಮದಲ್ಲಿ ಅದೊಂದು ಸಣ್ಣ ಪರ್ಣಕುಟೀರದಲ್ಲಿ ಶಂಕರನು ಧ್ಯಾನಾಸಕ್ತನಾಗಿ ಕುಳಿತಿದ್ದನು. ತಪೋನಿಷ್ಠನಾದ ಅವನ ಮುಖಮಂಡಲವು ನಿಶ್ಚಲವಾಗಿದ್ದಿತು. ಅವನ ನೀಲಕಂಠವು ದಿವ್ಯತೇಜಸ್ಸಿನಿಂದ ಬೆಳಗುತ್ತಿದ್ದಿತು. ಮುಡಿಕಟ್ಟಿದ ಅವನ ಜಡೆಯು ಚಂದ್ರನಿಂದೊಡಗೂಡಿ ವಿರಾಜಿಸುತ್ತಿದ್ದಿತು. ಅಂತರ್ಮುಖನಾಗಿ, ಪರಮಾತ್ಮನನ್ನು ಧ್ಯಾನ ಮಾಡುತ್ತ, ಶಾಂತಿ ಶಕ್ತಿ ಕಾಂತಿಗಳು ಪ್ರತ್ಯಕ್ಷವಾಗಿ ಪ್ರತಿಮೆಯ ರೂಪವನ್ನು ತಾಳಿರುವುವೋ! ಎಂಬಂತೆ ಕಂಗೊಳಿಸುತ್ತಿದ್ದನು.

ಮನ್ಮಥನು ಆ ಪವಿತ್ರಪ್ರದೇಶವನ್ನು ಪ್ರವೇಶಿಸಿದೊಡನೆಯೇ ಅಲ್ಲಿಯ ದೃಶ್ಯವೆಲ್ಲ ಬದಲಾಯಿಸಿತು. ವಸಂತರಾಜನು ಗಿಡಮರಗಳಲ್ಲಿ ಫಲಪುಷ್ಪಗಳು ಸಮೃದ್ಧವಾಗಿ ತುಂಬಿ ತುಳುಕಾಡುವಂತೆ ಮಾಡಿದನು. ವೃಕ್ಷಗಳನ್ನು ಬಲವಾಗಿ ಆಶ್ರಯಿಸಿದ್ದ ಲತಾನಿಕರವು ಮಂದಮಾರುತದಿಂದ ಎದ್ದೆದ್ದು ಕುಣಿದಾಡುವಂತಾಯಿತು. ಮೃಗಪಕ್ಷಿ ಪ್ರಾಣಿವರ್ಗಗಳ ಹೃದಯದಲ್ಲಿ ಪ್ರೇಮವು ಉದ್ಭವಿಸಿ ಅವು ಕ್ರೀಡಾಸಕ್ತಿಯನ್ನು ಹೊಂದಿದುವು.

ಉಗ್ರತಪಸ್ಸಿನಲ್ಲಿ ಲೀನವಾಗಿ ಹೋಗಿದ್ದ ಶಿವನನ್ನು ನೋಡಿದೊಡನೆಯೆ ಕಾಮದೇವನು ಭಯದಿಂದ ನಡುಗತೊಡಗಿದನು. "ಈ ತಪೋನಿರತ

ದೇವೇಶನ ಮೇಲೆ ಪ್ರಯೋಗಿಸಿದರೆ ನನ್ನ ಬಾಣಗಳು ಸಪ್ಪೆಯಾಗುವುವು. ಇವನು ತಪಸ್ಸನ್ನು ಬಿಟ್ಟು ಕಾಮಾಸಕ್ತನಾಗುವಂತೆ ಮಾಡಲು ನನಗೆ ಶಕ್ತಿಯಿರುವುದೆ? ಈ ಅಸಾಧ್ಯವಾದ ಕರ್ತವ್ಯವನ್ನು ದೇವತೆಗಳು ವೃಥಾ ನನ್ನ ತಲೆಯ ಮೇಲೆ ಹೊರಿಸಿರುವರು. ಈಗೇನುಮಾಡಲಿ?"

ಕಾಮದೇನು ಚಿಂತಿಸತೊಡಗಿದನು.

ಆಶ್ರಮದ ಬಳಿಯಿದ್ದ ಮಲ್ಲಿಗೆಯ ಪೊದರಿನಲ್ಲಿ ಕಾಮದೇವನೂ ವಸಂತನೂ ಅಡಗಿ ಕುಳಿತರು. ಮನ್ಮಥನು ತನ್ನ ಧನುಸ್ಸನ್ನೂ ಕಾಮಶರಗಳನ್ನೂ ಪ್ರಯೋಗಮಾಡುವುದಕ್ಕೆ ಸಿದ್ಧಪಡಿಸಿಕೊಂಡನು. ಸುಂದರ ಮೋಹಿನಿಯಾದ ಪಾರ್ವತಿಯೂ ಅವಳ ಸಖಿಯರೂ ತಪಸ್ವಿಯ ಪೂಜೆಗಾಗಿ ಪುಷ್ಪಗಳನ್ನು ಕೈಯಲ್ಲಿ ಹಿಡಿದು ಶಿವನಿಗೆದುರಿಗೆ ಬಂದು ನಿಂತರು.

ಉಮೆಯು ಭಕ್ತಿಯ ಭಯದಿಂದ ತಾಪಸನ ಚರಣಾರವಿಂದಗಳನ್ನು ಮುಟ್ಟಿ ನಮಸ್ಕರಿಸಿ ಅತ್ಯಂತ ವಿನಯಸಂಪನ್ನಳಾಗಿ ತನ್ನ ಕೈಲಿದ್ದ ಪುಷ್ಪಗಳನ್ನು ಅವನ ಮುಂದಿರಿಸಿದಳು. ಅದೇ ಸಮಯಕ್ಕೆ ಸರಿಯಾಗಿ ಮನೋಜ್ಞನಾದ ಮನ್ಮಥನು ತನ್ನ ಮೃದುವಾದ ಬಾಣಗಳಲ್ಲೊಂದನ್ನು ಪ್ರಯೋಗಿಸಿದನು. ಅದು ಸರಿಯಾಗಿ ಶಿವನ ಹೃದಯದಲ್ಲಿ ನಾಟಿತು. ತಕ್ಷಣವೇ ಕಣ್ಣುಬಿಟ್ಟು ನೋಡಿದನು. ಅವನೆದುರಿಗೆ ಪಾರ್ವತಿಯು ನಿಂತಿದ್ದಳು. ಶಿವನು ಅವಳನ್ನು ಪ್ರೇಮದೃಷ್ಟಿಯಿಂದ ನೋಡಿದನು. ಲಜ್ಜಾವತಿಯಾದ ಪಾರ್ವತಿಯೂ ಶಿವನನ್ನು ಮಂದಹಾಸದಿಂದ ನೋಡಿದಳು.

ಮರುಕ್ಷಣದಲ್ಲಿ ತನ್ನ ಕೋಪವನ್ನು ತಡೆದುಕೊಂಡು ತನ್ನ ತಪೋಭಂಗಕ್ಕೆ ಕಾರಣರಾರೆಂದು ಶಿವನು ಸುತ್ತುಮುತ್ತಲೂ ಕಣ್ಣುಬಿಟ್ಟು ನೋಡಿದನು. ಕಾಮದೇವನನ್ನು ನೋಡಿದೊಡನೆಯೇ ಅವನ ಕೋಪವು ಉಕ್ಕಿಹರಿಯಿತು. ತ್ರಿಶೂಲಧಾರಿಯಾದ ತ್ರಿಪುರಾಂತಕನು ತನ್ನ ತ್ರಿನೇತ್ರದಿಂದ ಕೋಪಾಗ್ನಿಯನ್ನು ಹೊರಸೂಸಿ ಅಲ್ಲಿಂದಲೇ ಕಾಮದೇವನನ್ನು ಸುಟ್ಟು ಬೂದಿಮಾಡಿದನು. ಶಿವನು ಕೋಪಾವೇಶದಿಂದ ಆ ಸ್ಥಳವನ್ನು ಬಿಟ್ಟು ಹೊರಡಲು ಸಂತಪ್ತಳಾದ ಪಾರ್ವತಿಯು ಮುಂದುಗಾಣದೆ ಸಖಿಯರೊಂದಿಗೆ ತನ್ನ ತಂದೆಯ ಮನೆಯನ್ನು ಸೇರಿದಳು.



ಶಿವನ ಮೇಲೆ ಕಾಮದೇವನ ಶರಪ್ರಯೋಗ

ಕಾಮದೇವನ ಅರ್ಧಾಂಗಿಯಾದ ರತಿಯು ಶೋಕಕ್ಕೆ ಅಳವಿಲ್ಲದಂತಾಯಿತು. ಅವಳು ನೆಲದಮೇಲೆ ಬಿದ್ದು ಹುಚ್ಚಳಂತೆ ಹೊರಳಾಡಿದಳು. ವೈಧವ್ಯವನ್ನು ಸಹಿಸಲಾರದೆ ತಲೆಯಮೇಲೆ ಮಣ್ಣೆರಚಿಕೊಂಡು, ಮನ್ಮಥನ ವಿಯೋಗವನ್ನು ನೆನೆನೆನಸಿ ಶೋಕಾಶ್ರುವನ್ನು ಧಾರೆಧಾರೆಯಾಗಿ ಸುರಿಸಿದಳು. ಕಾಮದೇವನ ನಿಧನದಿಂದ ರತೀದೇವಿಗೆ ಮಾತ್ರವಲ್ಲದೆ ಜಗತ್ತಿಗೇ ಅಪಾರ ನಷ್ಟವುಂಟಾದಂತಾಯಿತು. ಅವಳನ್ನು ಸಂತೈಸುವುದಕ್ಕೆ ವಸಂತನು ಎಷ್ಟೋ ಪ್ರಯತ್ನಿಸಿದನು. ಆದರೆ ಅವನಿಗದು ಸಾಧ್ಯವಾಗಲಿಲ್ಲ. "ವಸಂತರಾಜ! ಚಿತೆಯನ್ನು ಸಿದ್ಧಗೊಳಿಸು. ನಾನು ಅಗ್ನಿದೇವನಿಗೆ ಆಹುತಿಯಾಗಿ ಪರಲೋಕದಲ್ಲಿ ನನ್ನ ಪತಿದೇವನೊಡನೆ ಬೆರೆತು ಸುಖಿಸುವೆನು" ಎಂದು ಆ ಪುಣ್ಯವತಿಯು ಅಂಗಲಾಚಿ ಬೇಡಿಕೊಂಡಳು.

ಆಗ ಆಕಾಶಮಾರ್ಗದಲ್ಲಿ ಅಶರೀರವಾಣಿಯೊಂದು ನುಡಿಯಿತೇನೆಂದರೆ: "ಹೇ ಪುಣ್ಯಮಯಿ! ಶೋಕದಿಂದ ಮನಗುಂದದಿರು. ನಿನ್ನ ಪವಿತ್ರ ಪ್ರಾಣವನ್ನು ಅಗ್ನಿದೇವನಿಗೆ ದುಡುಕುತನದಿಂದ ಅರ್ಪಿಸದಿರು. ನಿನ್ನ ವಿಯೋಗಕ್ಕಾಗಿ ದೇವತೆಗಳೆಲ್ಲರೂ ಮರುಗುತ್ತಿರುವರು. ಅತ್ಯಂತ ವೈಭವಯುಕ್ತನಾಗಿ ನಿನ್ನ ಪ್ರಾಣೇಶ್ವರನು ನಿನ್ನನ್ನು ಕಲೆತು ಸುಖಿಸುವ ಕಾಲವು ಬಹು ಶೀಘ್ರದಲ್ಲಿಯೇ ಬಂದೀತು; ಅವಸರಪಡಬೇಡ."

ಅಶರೀರವಾಣಿಯನ್ನು ಕೇಳಿ ರತಿಯ ಸಂತಾಪವು ಕಡಿಮೆಯಾಯಿತು. ಸಹನೆಯಿಂದ ತನ್ನ ಪತಿಯಾಗಮನದ ಬರುವಿಕೆಯನ್ನು ಅವಳು ಎದಿರು ನೋಡಸಾಗಿದಳು

೩

ಶೋಕಸಂತಪ್ತಳಾದ ಪಾರ್ವತಿಯು ಕ್ರೋಧದಿಂದ ಸ್ವಗೃಹವನ್ನು ಸೇರಿದಳು. ಶಿವನ ಮನಸ್ಸಿಗೆ ಅಸಮಾಧಾನವಾಗುವ ಯಾವ ಕಾರ್ಯವನ್ನೂ ಅವಳು ಮಾಡಿರಲಿಲ್ಲ. ಆದರೂ ಕೋಪಾವೇಶನಾಗಿ ಅವನು ತನ್ನನ್ನು ವರ್ಜಿಸಿದ್ದನೆಂದು ಅವಳು ಮನಗಂಡಳು ತನ್ನಲ್ಲಿ ಶಿವಕಟಾಕ್ಷವುಂಟಾಗುವವರೆಗೂ ತಾನು ತಪಸ್ಸನ್ನು ಆಚರಿಸುವುದೇ ಸರಿಯೆಂದು ಪಾರ್ವತಿಯು ಶಪಥ ಮಾಡಿಕೊಂಡಳು.

"ಪ್ರಿಯಕುಮಾರಿ! ಇಂತಹ ಕಠಿಣ ವ್ರತವನ್ನಾಚರಿಸದಿರು; ದುಡುಕ ಬೇಡ. ಅರಮನೆಯಲ್ಲಿ ಕುಳಿತು ನೀನು ತಪಸ್ಸನ್ನಾಚರಿಸುವುದು ನಿನ್ನಂತ ವಳಿಗೆ ಸಾಧ್ಯವೆನಿಸದು. ಅಂತಃಪುರದಲ್ಲಿ ಕೋಲಾಹಲವಾಗಿ ಬೆಳೆದ ನಿನ್ನಂತಹ ಕೋಮಲಶರೀರವುಳ್ಳ ರಾಜಕುಮಾರಿಗೆ ಈ ಕಠಿಣ ವ್ರತವು ಸರಿಯೆನಿಸದು. ನಮ್ಮ ಕುಲದೈವಗಳನ್ನು ಪ್ರಾರ್ಥಿಸಿದರೆ ಸಾಕು. ಅವರೇ ನಿನ್ನ ಇಷ್ಟಾರ್ಥಗಳನ್ನು ಸಲ್ಲಿಸಬಲ್ಲರು."

ಪಾರ್ವತಿಯ ಜನನಿಯು ಅವಳಿಗೆ ಸಮಾಧಾನ ಹೇಳಿದಳು.

ಆದರೆ ಪಾರ್ವತಿಯು ತಾನು ಮಾಡಿದ ಶಪಥದಿಂದ ವಿಮುಖಳಾಗಲಿಲ್ಲ. ಅವಳ ದೃಢ ಪ್ರತಿಜ್ಞೆಯನ್ನು ಶಿಥಿಲಮಾಡಲು ಯಾರಿಂದಲೂ ಸಾಧ್ಯವಾಗಲಿಲ್ಲ. ಪಾರ್ವತಿಯು ನವಿರಾದ ರೇಷ್ಮೆಯ ವಸ್ತ್ರವನ್ನು ಕಿತ್ತೊಗೆದು ನಾರು ಮಡಿಯನ್ನುಟ್ಟಳು. ನವರತ್ನಖಚಿತ ಸ್ವರ್ಣಾಲಂಕಾರವನ್ನು ತೆಗೆದುಹಾಕಿ ಕೊರಳಿಗೂ ಕೈಗಳಿಗೂ ರುದ್ರಾಕ್ಷಿ ಮಣಿಗಳನ್ನು ಕಟ್ಟಿಕೊಂಡಳು. ಸ್ವಗೃಹವನ್ನು ತ್ಯಜಿಸಿ ಪಾರ್ವತಿಯು ಕೆಲವು ಸಖಿಯರಿಂದೊಡಗೂಡಿ ಅರಣ್ಯವನ್ನು ಸೇರಿ ಅಲ್ಲೊಂದು ಪರ್ಣಶಾಲೆಯನ್ನು ನಿರ್ಮಿಸಿ ಅದರಲ್ಲಿ ವಾಸ ಮಾಡತೊಡಗಿದಳು.

ಕೆಲವು ವೇಳೆ ಅನೇಕ ದಿನಗಳು ಅನ್ನ ನೀರುಗಳನ್ನು ಬಿಟ್ಟು ಉಪವಾಸ ವ್ರತವನ್ನಾಚರಿಸುತ್ತಿದ್ದಳು. ಒರಟಾದ ಬರಿಯ ನೆಲದಮೇಲೆ ಮಲಗಿ ನಿದ್ರಿಸುವಳು. ಮಳೆಯು ಚೆಲ್ಲಿದ ಬೀಳುವ ತುಂತುರುಗಳು ಅವಳ ಬಾಯಲ್ಲಿ ಬೀಳಲು ಅದನ್ನು ಕುಡಿದು ಸಂತೃಪ್ತಿ ಹೊಂದುತ್ತಿದ್ದಳು. ಚಕ್ಕಳಮುಕ್ಕಳ ಹಾಕಿ, ಕಣ್ಣುಮುಚ್ಚಿ ಕುಳಿತುಕೊಂಡು, ಹೃದಯದಲ್ಲಿ ಭಗವಂತನನ್ನೇ ಸ್ಮರಿಸುತ್ತ ತಪೋನಿಷ್ಠಳಾಗುತ್ತಿದ್ದಳು. ಅದೇ ತೆರನಾದ ತಪಸ್ಸನ್ನು ಆಚರಿಸುತ್ತಿದ್ದ ಋಷಿಗಳೂ ಯೋಗಿಗಳೂ ಪಾರ್ವತಿಯ ಉಗ್ರತಪಸ್ಸನ್ನು ಕಂಡು ಭ್ರಮಿಸುತ್ತಿದ್ದರು.

ಈ ರೀತಿ ವಾರಗಳೂ ಮಾಸಗಳೂ ಕಳೆದುಹೋದುವು. ಕಟ್ಟಕಡೆಯಲ್ಲಿ ಒಂದಾನೊಂದು ದಿನ ಒಬ್ಬ ಯೋಗೀಶ್ವರನು ಪಾರ್ವತಿಯ ಪರ್ಣಶಾಲೆಯ

ಬಳಿ ಬಂದು ನಿಂತನು. ಈ ನವತರುಣಿಯು ಈ ತೆರನಾದ ಘೋರ ತಪಸ್ಸನ್ನು ಆಚರಿಸುವುದನ್ನು ಕಂಡು ಯೋಗೀಶ್ವರನು ಆಶ್ಚರ್ಯಚಕಿತನಾದನು. ಪಾರ್ವತಿಯನ್ನು ಕಂಡು ಅವನು ಕೇಳಿದನು :

"ಕುಮಾರಿ! ಈ ಉಗ್ರತಪಸ್ಸನ್ನು ಆಚರಿಸುವುದೇಕೆ? ಯಾವ ಇಷ್ಟಾರ್ಥವು ಲಭಿಸುವುದಕ್ಕಾಗಿ ಈರೀತಿ ನಿನ್ನ ಕೋಮಲ ಶರೀರವನ್ನು ಕಠಿಣತೆಗೆ ಗುರಿಪಡಿಸಿರುವೆ? ಸ್ವರ್ಗವನ್ನು ಸೇರುವುದಕ್ಕೆ ನೀನಿನ್ನೂ ನವತರುಣಿ. ಇಂತಹ ಕಠಿಣವಾದ ನಿಷ್ಪ್ರಯೋಜನವಾದ ವ್ರತವನ್ನು ಬಿಟ್ಟುಬಿಡು. ನಿನಗೆ ಬೇಕಾಗಿದ್ದರೆ ಹೇಳು. ನಾನು ಗಳಿಸಿರುವ ತಪೋಬಲದಲ್ಲಿ ಅರ್ಧವನ್ನು ನಿನಗೆ ಧಾರೆಯೆರೆಯುವೆನು."

ಪಾರ್ವತಿಯು ಮೌನವಾಗಿದ್ದಳು. ಪಾರ್ವತಿಯು ಕೋರುತ್ತಿದ್ದುದು ಶಿವನ ಹಸ್ತವೇ ಹೊರತು ಸ್ವರ್ಗವಲ್ಲವೆಂದು ಅವಳ ಸಖಿಯರ ಮುಖೇಣ ಯೋಗೀಶ್ವರನು ಅರಿತನು. ಆಗವನು ಮತ್ತೆ ನಗುತ್ತ ಹೇಳಿದನು :

"ನೀನೆಂತಹ ಅಪೂರ್ವ ನಾರಿ! ಭಲೆ! ಆ ಅಡವಿಯ ಯೋಗಿ! ಜಟಾಧರ! ಅವನನ್ನೇ ನೀನು ವಿವಾಹವಾಗಬೇಕೆನ್ನುವುದು? ಸರ್ಪಗಳೇ ಅವನ ಹಾರಗಳು! ಭಸ್ಮವೇ ಅವನ ಗಂಧಲೇಪನ! ನಿನಗೆಷ್ಟು ರಮಣೀಯನಾದ ವರನವನು! ಇಂತಹವನನ್ನು ಪತಿಯಾಗಿ ಕೋರಿದರೆ ನಿನ್ನನ್ನು ನೋಡಿ ಜನರು ನಗುವುದಿಲ್ಲವೆ?"

ಈ ಕಠೋರವಾಕ್ಯಗಳನ್ನು ಯೋಗೀಶ್ವರನು ಆಡಿ ಮುಗಿಸಿರಲಿಲ್ಲ ಪಾರ್ವತಿಯು ತಕ್ಷಣ ತನ್ನ ಮೌನಮುದ್ರೆಯನ್ನು ಭೇದಿಸಿ ಮಾತನಾಡತೊಡಗಿದಳು. ಅವಳ ಅರವಿಂದಲೋಚನಗಳು ಕೆಂಡದ ಕಿಡಿಗಳನ್ನುಗುಳತೊಡಗಿದುವು. ಯೋಗೀಶ್ವರನನ್ನು ಕಂಡು "ಏನು? ಏನೆಂದೆ? ಈಶ್ವರನ ಘನತೆಯ ವಿಷಯವಾಗಿ ನೀನೇನು ಬಲ್ಲೆ? ಅವನು ಲೋಕೇಶ್ವರನು: ಅವನನ್ನು ಸಾಮಾನ್ಯ ಮಾನವನೆಂದೆಣಿಸಿದೆಯಾ? ಯೋಗಿಗಳಿಗೂ ಋಷಿಗಳಿಗೂ ಅವನು ಗುರುವೆಂದು ತಿಳಿ. ಅವನು ಶಾಂತಿಪ್ರೇಮಗಳ ಅವತಾರ ಮೂರ್ತಿಯೆಂದು ನಿನಗೆ ಮನವರಿಕೆಯಾಗಲಿ! ನಾನು ಯಾವಮಹೇಶ್ವರನ ದಿವ್ಯ ಪವಿತ್ರ, ಮಂಗಳಮೂರ್ತಿಯನ್ನು ನನ್ನ ಹೃದಯ ಮಂಟಪದಲ್ಲಿ ಪ್ರತಿಷ್ಠಿಸಿ ಅಹರ್ನಿಶಿ ಭಕ್ತಿ ಪ್ರೇಮಾನುರಾಗಗಳಿಂದ ಪೂಜಿಸುತ್ತಿರುವೆನೋ? ಅಂತಹ ಮಹಾ

ಮಹಿಮೆಯನ್ನು ಮತ್ತೊಮ್ಮೆ ಹೀಯ್ಯಾಳಿಸದಿರು ; ತಿಳಿಯಿತೇ ? ನೀನಾಯಿತು-ನಿನ್ನ ತಪಸ್ಸಾಯಿತು. ಲೋಕೇಶ್ವರನು ನನ್ನ ಹೃದಯೇಶ್ವರನು. ಅವನ ವಿರೋಧವಾಗಿ ಮತ್ತೊಂದು ಕಿರುಮಾತನ್ನು ಉಸಿರೀಯೆ ; ಎಚ್ಚರಿಕೆ ಹೆಚ್ಚುಕಾಲ ಇಲ್ಲಿ ನಿಲ್ಲದೆ ನೀನು ಬಂದ ಹಾದಿಯನ್ನು ಹಿಡಿದುಕೊಂಡು ಹೊರಟರೆ ನಿನಗೆ ಕ್ಷೇಮವಾದೀತು-ಬಲ್ಲೆಯಾ ?"

ಪರಶಿವನು ಆವರೆಗೆ ಯೋಗೀಶ್ವರನ ಮಾರುವೇಷದಲ್ಲಿ ಪಾರ್ವತಿಯಿದ್ದ ಕಡೆ ಬಂದಿದ್ದನೆಂದು ಮತ್ತೆ ಹೇಳಬೇಕೆ ? ಪಾರ್ವತಿಯು ತನ್ನ ಹೃದಯೇಶ್ವರನ ಬಲವಾಗಿ ಆಡಿದ ನಿರ್ಧಾರ ಮಾತುಗಳನ್ನೂ, ಅವಳ ದೃಢಸಂಕಲ್ಪವನ್ನೂ ಕಂಡು ಪ್ರಸನ್ನನಾದನು. ತನ್ನ ಮಾರುವೇಷವನ್ನೊದರಿ, ಪರಶಿವನಾಗಿ ಪಾರ್ವತಿಯ ಮುಂದೆ ನಿಂತು, ಪ್ರೇಮಾನುರಾಗದಿಂದ "ಓ ಪಾರ್ವತಿ ! ನಿನ್ನ ಪ್ರೇಮವನ್ನು ಪರೀಕ್ಷಿಸುವದಕ್ಕೆಂದು ನಾನಿಲ್ಲಿಗೆ ಬಂದೆನಷ್ಟೆ. ನಿನಗಿಟ್ಟ ಪರೀಕ್ಷೆಯಲ್ಲಿ ನೀನು ಗೌರವದಿಂದ ಉತ್ತೀರ್ಣಳಾಗಿರುವೆ. ಇಂದು ಮೊದಲು ನಾನು ನಿನ್ನವನು. ಈಗ ನಿನಗೆ ಸಂತೋಷವಾಯಿತೆ ?"

ಶೀಲವತಿಯಾದ ಉಮೆಗೆ ಹೃದಯವು ಕೃತಜ್ಞತೆಯಿಂದಲೂ ಆನಂದದಿಂದಲೂ ತುಂಬಿಹೋಯಿತು. ಲಜ್ಜೆಯಿಂದ ಕೆಂಪೇರಿದ ಮುಖವುಳ್ಳವಳಾಗಿ, ಆನಂದಾಶ್ರುಗಳನ್ನು ಧಾರೆಧಾರೆಯಾಗಿ ಸುರಿಸುತ್ತ, ಪಾರ್ವತಿಯು ನೆಲದ ಕಡೆ ದೃಷ್ಟಿಯಿಟ್ಟು ಮೌನದಿಂದ ನಿಂತಳು. ಅವಳ ಇಂಗಿತವನ್ನು ವ್ಯಕ್ತಪಡಿಸಲು ಮಾತಿನ ಸೂಚನೆಯೇ ಬೇಕು ? ಶಿವಪಾರ್ವತಿಯರು ಒಬ್ಬರನ್ನೊಬ್ಬರು ಅಗಲಿದರು.

ಕೈಲಾಸಕ್ಕೆ ಬಂದಮೇಲೆ ಪರಶಿವನು ಸಪ್ತರ್ಷಿಗಳ ಮುಖೇನ ಹಿಮವಾನನಿಗೆ ತನ್ನ ಸಂದೇಶವನ್ನು ಹೇಳಿ ಕಳುಹಿಸಿದನು. ಮಹೇಶ್ವರನ ಇಚ್ಛೆಯನ್ನು ಕೇಳಿ ಹಿಮವತ್ಪ್ರಭುವಿಗಾದ ಆನಂದವನ್ನು ಕೇಳಬೇಕೆ ? ತನ್ನಂತಹ ಸುಕೃತರಿಲ್ಲವೆಂದು ಅವನು ಆನಂದಪರವಶನಾದನು.

ಆ ಪರ್ವತನಗರದಲ್ಲಿ ಶಿವಪಾರ್ವತಿಯರ ವಿವಾಹಕ್ಕಾಗಿ ಮಾಡಿದ್ದ ಏರ್ಪಾಡುಗಳು ಅತ್ಯಂತ ವಿಜೃಂಭಣೆಯಿಂದ ಕೂಡಿದ್ದುವು. ಮೂರು ಲೋಕಗಳಿಂದಲೂ ಅಭ್ಯಾಗತರು ಹಿಮವತ್ಪರ್ವತದಲ್ಲಿ ಬಂದಿಳಿದರು. ಇಂತಹ

ಒಂದು ಅಪೂರ್ವ ಸನ್ನಿವೇಶಕ್ಕಾಗಿ ದೇವಮಾನವರು ಎಷ್ಟೊ ಕಾಲದಿಂದ ಕಾದು ಹಂಬಲಿಸುತ್ತಿದ್ದರು ಅದೇ ದಿವಸವೇ ಶಿವನು ತನ್ನ ದೈವಿಕ ಮಹತ್ತಿನಿಂದ ಕಾಮದೇನು ಮತ್ತೆ ಜೀವಿಸುವಂತೆ ಮಾಡಿ ಸಾಧ್ವಿಯಾದ ರತಿಗೆ ಪತಿಭಿಕ್ಷೆಯನ್ನು ನೀಡಿದನು

ವರ್ಷಗಳು ಕಳೆದುವು ಶಿವಪಾರ್ವತಿಯರಿಗೆ ಕುಮಾರನೆಂಬ ಪುತ್ರನು ಜನಿಸಿದನು ಕುಮಾರನು ಸುಂದರನೂ ಹಾಸ್ಯಪ್ರಿಯನೂ ಆಗಿದ್ದನು. ಅವನ ಆಟಪಾಟಗಳು ಮನಮೋಹಕವಾಗಿದ್ದುವು ಒಮ್ಮೆ ಅವನು ತನ್ನ ಜನಕನ ಜಟೆಯನ್ನು ಹಿಡಿದೆಳೆದು ಆಟವಾಡುವನು; ಇನ್ನೊಮ್ಮೆ ಜಟೆಯಿಂದ ಗಂಗಾದೇವಿಯ ಸೆರೆಯನ್ನು ಬಿಡಿಸುವನು; ಮತ್ತೊಮ್ಮೆ ಶಿವನ ಕಂಠಾಭರಣಗಳಾದ ಕಾಳಸರ್ಪಗಳ ಬಾಯನ್ನು ತೆರೆದು ಅವುಗಳ ವಿಷಹಲ್ಲುಗಳನ್ನು ಲೆಕ್ಕಮಾಡುವನು; ಮಗದೊಮ್ಮೆ ತನ್ನ ತಂದೆಯ ವಾಹನವಾದ ನಂದಿಯ ಕೊಂಬುಗಳನ್ನು ಹಿಡಿದು ಅಲ್ಲಾಡಿಸುವನು. ಹೀಗೆ ಎಷ್ಟೋ ಬಗೆಯ ಬಾಲಚೇಷ್ಟೆಗಳಿಂದ ಕುಮಾರನು ತನ್ನ ತಾಯ್ತಂದೆಯರನ್ನು ಆನಂದಗೊಳಿಸುತ್ತಿದ್ದನು.

ಕಾಲಾನುಗುಣವಾಗಿ ಕುಮಾರನು ಎತ್ತರವಾಗಿಯೂ ದೃಢಕಾಯನಾಗಿಯೂ ಬೆಳೆದನು. ಧನುರ್ವಿದ್ಯೆ ಗದಾವಿದ್ಯೆಗಳಲ್ಲಿ ಅಪ್ರತಿಮ ವೀರನೆನಿಸಿದನು. ಒಂದಾನೊಂದು ದಿನ ದೇವೇಂದ್ರನೂ ಇತರ ದೇವತೆಗಳೂ ಪರಶಿವನಲ್ಲಿ ಬಂದು "ಮಹೇಶ್ವರ! ನಾವು ತಾರಕವಧೆಗಾಗಿ ಹೊರಟಿದ್ದೇವೆ. ನಮ್ಮ ಸೈನ್ಯಗಳಿಗೆ ನಾಯಕನಾಗಿರಲು ನಿನ್ನ ವೀರ ಕುಮಾರನನ್ನು ಕಳುಹಿಸಿಕೊಡಬೇಕು" ಎಂದು ಬೇಡಿದರು. ದೈವಶಾಸನವನ್ನು ನೆರವೇರಿಸಲೋಸುಗ ಈಶ್ವರನು ಸಂತೋಷದಿಂದ ಕುಮಾರನನ್ನು ದೇವೇಂದ್ರಾದಿಗಳೊಂದಿಗೆ ಕಳುಹಿಸಿಕೊಟ್ಟನು.

ಅತ್ಯಂತ ಪ್ರಬಲನೂ ಮದಿಸಿದ ದಾನವನೂ ಆದ ತಾರಕನಿಗೂ, ಕುಮಾರನ ನಾಯಕತ್ವದಲ್ಲಿ ಬಂದ ದೇವಸೈನ್ಯಕ್ಕೂ ಉಗ್ರಕದನವು ನಡೆಯಿತು. ರಾಕ್ಷಸನ ಆಯುಧಗಳು ಪ್ರಬಲವಾದರೂ ಕುಮಾರನನ್ನು ಘಾತಿಸಲು ಅವಕೆ ಶಕ್ತಿಯಿಲ್ಲದಂತಾಯಿತು. ತಾರಕನು ಶೌರ್ಯ ಸಾಹಸಗಳಿಂದ ತನ್ನ ಎಲ್ಲ ಅಸ್ತ್ರಶಸ್ತ್ರಗಳನ್ನೂ ಪ್ರಯೋಗಿಸಿ ದೀರ್ಘಕಾಲ ಹೋರಾಡಿದನು. ಆದರೆ ಅವನ

ಪ್ರಯತ್ನವು ವಿಫಲವಾಯಿತು. ನವತರುಣ ಕುಮಾರನು ಧನುಸ್ಸಿನಲ್ಲಿ ಬಾಣವನ್ನು ಹೂಡಿ ರಾಕ್ಷಸನ ಎದೆಗೆ ಗುರಿಯಿಟ್ಟು ಹೊಡೆದನು. 'ಹೋ' ಎಂದು ಚೀತ್ಕಾರಮಾಡಿ ದುಷ್ಟ ದಾನವನು ಮೃತ್ಯುವಿನ ಬಾಯಲ್ಲಿ ಉರುಳಿದನು.

ಅಸಂಖ್ಯಾತ ಕಾಲದಿಂದ ಭಯಭೀತಿಗಳಿಂದ ಬಳಲಿದ್ದ ದೇವಮಾನವರು ತಾರಕಾಸುರನ ವಧೆಯಾದ ನಂತರ ಸುಖಶಾಂತಿಯಿಂದ ಮತ್ತೊಮ್ಮೆ ನೆಮ್ಮದಿಯ ಉಸಿರನ್ನು ಬಿಟ್ಟರು. ದೇವ ಶಿಶುವಾದ ಕುಮಾರನ ಧೈರ್ಯಸ್ಥೈರ್ಯಗಳನ್ನು ಮೂರು ಲೋಕವೂ ಸಂತೋಷದಿಂದ ಕೊಂಡಾಡಿ ಅವನು ಚಿರಾಯುರಾರೋಗ್ಯಸಂಪನ್ನನಾಗಲೆಂದು ಹಾರೈಸಿದುವು.

೭. ಮೀರಾಬಾಯಿ
(ಭಕ್ತಿವಿಜಯ)

ಹಿಂದೂಸ್ಥಾನದಲ್ಲಿ ಮೀರಾಬಾಯಿಯ ಹೆಸರನ್ನು ಕೇಳದವರಾರು? ಪರಮಭಾಗವತಶಿರೋಮಣಿಯಾಗಿದ್ದ ಸುಂದರ ಪತಿವ್ರತೆ ಮೀರಾಬಾಯಿ! ಈ ಪವಿತ್ರಳ ಕೃಷ್ಣಭಕ್ತಿಯನ್ನು ಇಂದು ಆಬಾಲವೃದ್ಧರೂ, ಬಡಭಾಗ್ಯವಂತರೂ ಅತ್ಯಂತ ಗೌರವದಿಂದ ಸ್ಮರಿಸುವರು. ದೇಶದಾದ್ಯಂತ ಅಸಂಖ್ಯಾತ ಸ್ತ್ರೀಪುರುಷರು ಈ ಭಕ್ತಶಿರೋಮಣಿಯ ಮಧುರ ಗೀತೆಗಳನ್ನು ಮಮತೆಯಿಂದ ಹಾಡುತ್ತಾರೆ. ಮಾನವರನ್ನು ಉದ್ಧರಿಸಲೋಸುಗ ಜನ್ಮಧಾರಣ ಮಾಡಿದ ಮಹಾಮಾತೆಯೆಂದು ಇವಳನ್ನು ಹಿಂದುಗಳು ಪ್ರೀತಿಸಿ, ಪೂಜಿಸಿ, ಭಜಿಸುತ್ತಾರೆ.

ಮೀರಳು ಜೋಧಪುರದ ರಾಜನ ಮಗಳು. ಅವಳ ತಾಯಿಯು ಶಿಶು ಜನನವಾದ ಕೆಲಕಾಲಕ್ಕೆ ಮರಣವನ್ನೈದಲು ಮೀರಳನ್ನು ಅವಳ ಪಿತಾಮಹನೇ ಪ್ರೀತ್ಯಾದರಗಳಿಂದ ಪಾಲಿಸುತ್ತ ಬಂದನು. ಈ ಅನಾಥ ಬಾಲಿಕೆಯನ್ನು ರಾಜನು ತನ್ನ ಪ್ರಾಣಸಮಾನಳಾಗಿ ಭಾವಿಸಿದ್ದನು.

ಒಂದಾನೊಂದು ದಿವಸ ಅರಮನೆಯ ಮುಂಭಾಗದಲ್ಲಿ ಮೇಳತಾಳಗಳೊಡನೆ ಇಂಪಾದ ಗೀತೆಗಳನ್ನು ಹಾಡುತ್ತ, ಹಲಜನರು ಮೆರವಣಿಗೆ ಹೋಗುತ್ತಿದ್ದರು. ತನ್ನ ತಾತನನ್ನು ಅದೇನೆಂದು ಬಾಲಿಕೆ ಮೀರಾಳು

ಕೇಳಿದಳು. "ವಧೂವರರಿಗೆ ಮದುವೆ ಮಾಡುವುದಕ್ಕಾಗಿ ಅವರನ್ನು ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಿರುವರಮ್ಮ!" ಎಂದು ರಾಣನು ಪ್ರತ್ಯುತ್ತರವಿತ್ತನು. "ನನಗೆ ಯಾವಾಗ ಮದುವೆಯಾಗುತ್ತದೆ ತಾತ? ನನ್ನನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ?" ಮೀರಳು ಕೇಳಿದಳು. ಇದಕ್ಕೂ ಹೆಚ್ಚಿನ ಪ್ರಶ್ನೆಗಳು ಹೊರಡದಂತೆ ತಡೆಗಟ್ಟಬೇಕೆಂದು ರಾಣನು "ಕುಮಾರಿ! ನಿನ್ನನ್ನು ಪರಮಾತ್ಮನಾದ ಶ್ರೀಕೃಷ್ಣನು ಮದುವೆಯಾಗುತ್ತಾನಮ್ಮ!" ಎಂದನು.

ಪಿತಾಮಹನ ಮಾತು ನಿಜವಾದುದೆಂದು ಬಾಲಕಿ ಮೀರಳು ನಂಬಿದಳು ಅಂದಿನಿಂದ ಅವಳು ಶ್ರೀಕೃಷ್ಣನನ್ನು ಪ್ರೀತಿಸತೊಡಗಿದಳು. ಅವನನ್ನು ಕುರಿತು ಯೋಚಿಸುವುದರಲ್ಲಿ, ಅವನ ದಿವ್ಯಲೀಲೆಗಳ ವೃತ್ತಾಂತಗಳನ್ನು ಸಾದ್ಯಂತ ಕೇಳುವುದರಲ್ಲಿ ಅವಳಿಗೆ ಅಪಾರವಾದ ಆಸಕ್ತಿಯುಂಟಾಯಿತು. ಕಿರಿದಾದ ಕೃಷ್ಣ ವಿಗ್ರಹವೊಂದನ್ನು ತನ್ನ ಬಳಿಯಲ್ಲಿ ಇಟ್ಟು ಮೀರಳು ಅದನ್ನು ಪೂಜಿಸತೊಡಗಿದಳು. ಅವಳನ್ನು ಯಾರಾದರೂ ಹಾಸ್ಯಕ್ಕೆ "ಮೀರ! ನೀನು ಯಾರನ್ನು ಮದುವೆ ಮಾಡಿಕೊಳ್ಳುವೆಯಮ್ಮ?" ಎಂದು ಕೇಳಿದರೆ ತಕ್ಷಣವೇ "ಇನ್ನು ಯಾರನ್ನು? ಶ್ರೀಕೃಷ್ಣ ಪರಮಾತ್ಮನನ್ನು!" ಎಂದು ಬದಲು ಹೇಳುತ್ತಿದ್ದಳು.

ಹದಿನಾರು ವರ್ಷಗಳು ತುಂಬಿದ ನಂತರ ರಾಜಕುಮಾರಿಯಾದ ಮೀರಳಿಗೆ ಉದಯಪುರದರಸನಾದ ಭೋಜರಾಜನೊಂದಿಗೆ ಮದುವೆಯಾಯಿತು. ರಾಜರಾಣಿಯರಿಬ್ಬರೂ ಕವಿತಾಚಾತುರ್ಯವುಳ್ಳವರು ಗಾಯನ ಪಾಂಡಿತ್ಯವುಳ್ಳವರೂ ಆದುದರಿಂದ ಇಬ್ಬರಿಗೂ ಗೀತೆಗಳನ್ನು ವಿರಚಿಸಿ ಮಧುರವಾಗಿಯೂ, ಲಾಲಿತ್ಯದಿಂದಲೂ ಹಾಡುವುದರಲ್ಲಿ ಅತ್ಯಂತ ಆಸಕ್ತಿಯುಂಟಾಯಿತು. ಆದರೆ ಕಾಲಕ್ರಮೇಣ ಭೋಜರಾಜನ ಕೀರ್ತನೆಗಳು ವಿಷಯಾಭಿಲಾಷೆಯನ್ನು ಹುಟ್ಟಿಸುವುದರಲ್ಲಿ ಪರಿಣಮಿಸಿದುವು. ಮಹಾರಾಣಿ ಮೀರಳ ಕೀರ್ತನೆಗಳಾದರೋ ಪವಿತ್ರವಾಗಿದ್ದು ಜನಮನದಲ್ಲಿ ಭಗವದ್ಭಕ್ತಿಯನ್ನು ಹುಟ್ಟಿಸತಕ್ಕುವಾಗಿದ್ದುವು. ಉದಯಪುರದ ಅರಸನ ಅರ್ಧಾಂಗಿಯಾದ ಮೀರಳಿಗೆ ತನ್ನಿಷ್ಟಕ್ಕೆ ಬಂದುದನ್ನು ಓದುವುದಕ್ಕೂ ಮಾಡುವುದಕ್ಕೂ

ಸ್ವಾತಂತ್ರ್ಯವೇನೋ ಇದ್ದಿತು. ಇದರ ಪರಿಣಾಮವಾಗಿ ಭಕ್ತಿಪರವಶಳಾದ ಮೀರಳು ಜಗತ್ತನ್ನು ಮರೆತು ಮನೆತನದ ಕರ್ತವ್ಯಗಳನ್ನು ನಿರಾಕರಿಸುತ್ತ ಬಂದಳು. ತನ್ನ ಕಾಲವನ್ನೆಲ್ಲ ಸಾಧು ಸಂತರ ಸಹವಾಸದಲ್ಲಿ ಕಳೆಯಬೇಕೆಂದು ಅವಳಿಗನ್ನಿಸಿತು. ನಂದಗೋಕುಲದ, ಗೋವಿಂದನ ಅದ್ಭುತ ಲೀಲಾವಿನೋದಗಳನ್ನು ಕುರಿತು ಕೀರ್ತನೆಗಳನ್ನು ರಚಿಸಿ ಹೃದಯಂಗಮವಾಗಿ ಗಾಯನ ಮಾಡುವುದರಿಂದ ಮೀರಳ ಮನಸ್ಸಿಗೆ ಮಹದಾನಂದವುಂಟಾಗುತ್ತಿದ್ದಿತು.

ಹೀಗೆ ವರ್ಷಗಳು ಕಳೆದುವು. ದಿನೇ ದಿನೇ ಅರಮನೆಯಲ್ಲಿ ತಾನಿದ್ದು ಜೀವಿಸುವುದು ಬಂಧನ ಸಮಾನವೆಂದು ಮೀರಳಿಗೆ ಭಾಸವಾಗತೊಡಗಿತು. ಸಮೀಪದಲ್ಲಿದ್ದ ದೇವಾಲಯವು ಅವಳನ್ನು ಆಕರ್ಷಿಸಿತು. ಅಲ್ಲಿ ಮುರಳೀಧರನ ಅಡಿದಾವರೆಗಳಲ್ಲಿ ಕುಳಿತು ಶ್ರೀ ಕೃಷ್ಣ ಪರಮಾತ್ಮನ ಕೃಪಾಪೂರಿತ ಮಹತ್ಕಾರ್ಯಗಳನ್ನು ಮೀರಳು ಮುಕ್ತಾಲಾಪನೆ ಮಾಡತೊಡಗಿದಳು. ಸುಮಧುರವಾದ ಅವಳ ಕಂಠದಿಂದ ಹೊರಟ ಇಂಪಾದ ಕೀರ್ತನೆಯು ಅತ್ಯಂತ ಕರ್ಣಾನಂದಕರವಾಗಿ, ಕೇಳುವವರ ಹೃದಯವನ್ನು ಝುಮ್ಮೆನ್ನಿಸಿ ಅವರಲ್ಲಿ ಅದ್ಭುತ ಭಕ್ತಿರಸವನ್ನು ತುಂಬಿತು.

ಮೀರಳು ಅಷ್ಟು ಪ್ರಶಾಂತವೂ ಪವಿತ್ರವಾದ ಮುರಳೀಧರನ ದೇವಾಲಯದ ಗರ್ಭಗೃಹದ ಬಳಿಯೇ ಹೆಚ್ಚು ಕಾಲವನ್ನು ಕಳೆಯುತ್ತ ಬಂದಳು. ತನ್ನ ಪತಿಯೆಂದೆನಿಸಿದ ಕೃಷ್ಣಪರಮಾತ್ಮನಲ್ಲಿಯೇ ಅವಳು ಅಧಿಕವಾದ ಪ್ರೇಮವನ್ನು ತೋರುತ್ತ ಬಂದಳು. ಅವಳ ಕೀರ್ತಿಯು ಹಿಂದೂಸ್ಥಾನದ ಮೂಲೆಮೂಲೆಗಳಲ್ಲಿಯೂ ಹಬ್ಬಿತು. ಅವಳ ಸುಮಧುರ ಗಾಯನವನ್ನು ಕೇಳಿ ಅವಳೊಡನೆ ಪರಮಾತ್ಮನನ್ನು ಭಜಿಸಲೋಸುಗ ಸಾವಿರ ಪ್ರಮಾಣದಲ್ಲಿ ತಂಡೋಪತಂಡವಾಗಿ ಜನರು ಅಲ್ಲಿ ಬಂದು ಕಿಕ್ಕಿರಿಯುತ್ತಿದ್ದರು.

೨

ಸಂಧ್ಯಾಕಾಲ ಏಳುಗಂಟೆಯಿರಬಹುದು. ಉದಯಪುರದ ನಿವಾಸಿಯಾದ ರಜಪೂತ ಸೈನಿಕನೊಬ್ಬನು ತನ್ನ ಮನೆಯ ಹಜಾರದಲ್ಲಿ ಕುಳಿತು 'ಹುಕ್ಕಾ'ವನ್ನು ಎಳೆಯುತ್ತಿದ್ದನು. ಅವನ ಹೆಂಡತಿಯು ಅರಮನೆಯಲ್ಲಿ

ನಡೆದ ವಿಚಿತ್ರ ಸಮಾಚಾರವು ನಿಮಗೆ ಕಿವಿಯಲ್ಲಿ ಬೀಳಲಿಲ್ಲವೆ?" ಎಂದು ಕೇಳಿದಳು.

ಸೈನಿಕ:—ಏನದು? ನನಗೆ ತಿಳಿಯದು.

ಹೆಂಡತಿ:—ಮಹಾರಾಣಿಯನ್ನು ರಾಣನು ಈರೀತಿ ತೊಂದರೆಗೆ ಗುರಿಪಡಿಸುವುದು ಎಷ್ಟೊಂದು ಕ್ರೌರ್ಯ?

ಸೈ:—ಓಹೋ! ಮಹಾರಾಣಿ ಮೀರಾಬಾಯಿಯ ಸಮಾಚಾರವೋ? ಬಲ್ಲೆ; ಬಲ್ಲೆ. ಆಕೆಯನ್ನು ಆಸ್ಥಾನದಿಂದ ಹೊರಗೆ ತಳ್ಳಿ ಮರಣ ದಂಡನೆಗೆ ಗುರಿಮಾಡಿರುವರಂತೆ. ರಾಣನ ಕೃತ್ಯವು ನ್ಯಾಯವೂ ಸಮಂಜಸವೂ ಆದ.ದು. ಅದರಲ್ಲೇನು ತಪ್ಪಿದೆ?

ಹೆಂ:—ಹಾಗೆಂದರೇನು? ನೀವು ಯಾವಾಗಲೂ ದುಡುಕಿನಿಂದಲೇ ಮಾತನಾಡುವುದು. ಮಹಾರಾಣಿಯನ್ನು ಇಂತಹ ಕಠಿಣ ದಂಡನೆಗೆ ಗುರಿ ಮಾಡುವುದಕ್ಕೆ ಆಕೆಯು ಮಾಡಿದ ಅಂತಹ ಮಹದಪರಾಧವೇನು?

ಸೈ:—ಮಹಾರಾಣಿಯ ನಡತೆಯಿಂದ ರಾಜಮನೆತನಕ್ಕೆ ಕಳಂಕವು ತಟ್ಟಿತೆಂದು ರಾಣನಿಗೆ ಮನವರಿಕೆಯಾಯಿತು ಮುಸಲ್ಮಾನನಿಂದ ಅಷ್ಟೊಂದು ಬೆಲೆಬಾಳುವ ಆಭರಣವನ್ನು ಅಂಗೀಕರಿಸಿದ ಮೀರಾಬಾಯಿಯ ಎದೆಗಾರಿಕೆಯಾದರೂ ಎಷ್ಟಿರಬಹುದು ಹೇಳು ನೋಡೋಣ.

ಹೆಂ:—ನೀವು ಹೇಳುವುದು ಬಹಳ ಚೆನ್ನಾಗಿದೆ. ಮಹಾರಾಣಿಯು ಆ ಆಭರಣಗಳನ್ನು ಕೊಡೆಂದು ಕೇಳಿದಳೇನು? ಅಕ್ಬರ್ ಬಾದಷಹನು ದೇವಸ್ಥಾನದಲ್ಲಿರುವ ಮುರಳೀಧರ ಸ್ವಾಮಿಗೆ ಅದನ್ನು ಬಳುವಳಿಯಾಗಿ ಕೊಟ್ಟನಂತೆ. ದೇವಾಲಯಕ್ಕೆ ಒಪ್ಪಿಸಿಬಿಡುವಂತೆ ಆಭರಣವನ್ನು ಮೀರಳ ವಶಕ್ಕಿತ್ತುದೆ ತಪ್ಪಾಯಿತೇನು?

ಸೈ:—ಅದೇನೂ ಅಭ್ಯಂತರದ ವಿಚಾರವಲ್ಲ ಆದರೆ ಶುದ್ಧ ರಜಪೂತಳೂ—ಅದರಲ್ಲೂ ಸಾಕ್ಷಾತ್ ಉದಯಪುರದ ಮಹಾರಾಣಿಯೂ ಆದ ಮೀರಾಬಾಯಿಯು, ಅನ್ಯ ಮತದವನಾದ ಅಕ್ಬರನ ಕಣ್ಣಿಗೆ ಬಿದ್ದುದು ಸಾಲದೆ ಅವನಿಂದ ಮುಟ್ಟಿಸಿಕೊಂಡುದು ಅಪರಾಧವಲ್ಲದೆ ಮತ್ತೇನು?

ಹೇಂ:—ಇಲ್ಲ; ಅದು ಶುದ್ಧ ಸುಳ್ಳು. ದಿನವಹಿ ಸಾವಿರಾರು ಜನರು ದೇವಾಲಯಕ್ಕೆ ಬಂದು ಆಕೆಯನ್ನು ಸಂದರ್ಶಿಸಿ ಆಕೆಯ ಮಧುರ ಗೀತೆಯನ್ನು ಕೇಳಿ ಭಕ್ತಿಪರವಶರಾಗುವುದಿಲ್ಲವೆ ? ಮೀರಾ ಬಾಯಿಯ ಪವಿತ್ರ ಕೀರ್ತನೆಗಳು ಎಲ್ಲೆಲ್ಲಿಯೂ ಹೆಸರುವಾಸಿ ಯಾದುವು. ಸಂಗೀತಕಲಾಪ್ರವೀಣನೂ, ಕವಿವರ್ಯನೂ ಆದ ಅಕ್ಬರ್ ಬಾದಷಹನು ಆಕೆಯ ಸಂದರ್ಶನಾಭಿಲಾಷಿಯಾದನು. ಪರಮಾತ್ಮನನ್ನು ಕುರಿತು ಆಕೆಯು ಗಾಯನ ಮಾಡುತ್ತಿದ್ದ ಕೀರ್ತನೆಗಳಿಂದ ಆತನು ಪರವಶನಾದನು. ಭಕ್ತಿಭರದಲ್ಲಿ ಬಾದಷಹನು ಆಕೆಯ ಪಾದಗಳಿಗೆರಗಿ "ತಾಯಿ ! ಸಕಲೇಶ್ವರನ ಸಾನ್ನಿಧ್ಯವು ದೊರೆಯಬೇಕಾದರೆ ಯಾವ ಮಾರ್ಗವನ್ನು ಅನುಸರಿಸ ಬೇಕು ? ಮುಕ್ತಿಮಾರ್ಗವನ್ನು ಸೂಚಿಸು" ಎಂದು ಬೇಡಿದನು

ಸೈ:—ಇರಬಹುದು. ಆದರೆ ರಾಣನು ತನ್ನ ಪತ್ನಿಯ ವಿಚಾರದಲ್ಲಿ ಏನೆಂದು ತಿಳಿಯಬೇಕು ? ನೀನೇ ಹೇಳು ; ನೋಡೋಣ. ಮೀರಳು ಪತಿಯನ್ನೂ, ಅರಮನೆಯಲ್ಲಿ ತನ್ನ ಗೃಹಕಾರ್ಯಗಳನ್ನೂ ಈಗಾಗಲೇ ಉದಾಸೀನ ಮಾಡಿರುವಳು ಇದು ಸಾಲದೆಂದು ಪರಕೀಯನಿಂದ (ಅನ್ಯನೂ ಅಪರಿಚಿತನೂ ಆದ ಬಾದಷಹನಿಂದ) ಅಮೂಲ್ಯವಾದ ಕಂಠಾಭರಣವನ್ನು ಅವಳು ಸ್ವೀಕರಿಸಿದ ಸಮಾಚಾರವೂ ರಾಣನ ಕಿವಿಗೆ ಬಿದ್ದಿದೆ. ಆತನು ಕುಪಿತನಾದುದರಲ್ಲಿ ಏನು ಅತಿಶಯ ?

ಹೇಂ:—ಪುರಷರಿಗೇನು ? ನೀವೆಲ್ಲರೂ ಒಂದೇ ಹೆಂಗಸೆಂದರೆ ನಿಮ ಗಷ್ಟೊಂದು ಅಲಕ್ಷ್ಯ. ಅವರು ನಿಮ್ಮ ದಾಸಿಯರು ನಿಮ್ಮ ತಪ್ಪುಗಳು ನಿಮಗೆ ಗೋಚರವಾಗುತ್ತವೇನು ? ನಾರೀ ಹೃದಯವನ್ನು ನೀವೇನು ಬಲ್ಲಿರಿ ? ರತ್ನಮಯವಾದ ಆ ಕಂಠಾಭರಣವನ್ನು ಕೊಟ್ಟುದು ಅಕ್ಬರ್ ಬಾದಷಹನೇ ಎಂದು ನಿಮಗೆ ಹೇಗೆ ಗೊತ್ತು ?

ಸೈ:—ಬಹಳ ಸುಲಭವಾಗಿ ! ಅಯ್ಯೋ ಹುಚ್ಚಿ! ಇಷ್ಟೂ ಅರ್ಥವಾಗುವು ದಿಲ್ಲವೆ ನಿನಗೆ ? ಅಂತಹ ಅಮೂಲ್ಯಾಭರಣವನ್ನು ಮುಚ್ಚಿಡಲು ಸಾಧ್ಯವೆ? ಅದನ್ನು ವರ್ತಕನೊಬ್ಬನು ಐದು ಲಕ್ಷ ರೂಪಾಯಿಗಳಿಗೆ

ಬಾದಷಹನಿಗೆ ಮಾರಿದನಂತೆ. ಆದರೆ ವೇಷಧಾರಿಯಾದ ಬಾದಷಹನು............

ಹೇಂ:—ಏನು ? ಬಾದಷಹರು ಮಾರುವೇಷದಿಂದ ಮೀರಾಮಾತೆಯ ಸಂದರ್ಶಕ್ಕೆ ಬಂದಿದ್ದರೆ ?

ಸೈ:—ಅಹುದಹುದು. ಅಕ್ಬರ್ ಬಾದಷಹನು ಹಿಂದೂ ಸಂತನಂತೆ ವೇಷ ತಾಳಿ, ತನ್ನ ಆಸ್ಥಾನ ಗಾಯಕನೊಡನೆ ದೇವಾಲಯದಲ್ಲಿ ಮೀರಳನ್ನು ಕಂಡು ಅವಳನ್ನು ಮುಟ್ಟಿ ನಮಸ್ಕರಿಸಿದನಂತೆ. ಆದಿರಲ್ಲಿ ತಾನು ಯಮುನಾ ನದಿಯಲ್ಲಿ ಸ್ನಾನಮಾಡುತ್ತಿರುವಲ್ಲಿ ತನಗೆ ಆ ಆಭರಣವು ಸಿಕ್ಕಿತೆಂದೂ, ಅದನ್ನವಳು ಮುರಳೀಧರನಿಗೆ ಅರ್ಪಿಸಬೇಕೆಂದೂ ಹೇಳಿದನಂತೆ. ಯಮುನಾನದಿಯೆಂದರೇನು? ಐದುಲಕ್ಷ ರೂಪಾಯಿ ಬೆಲೆಬಾಳುವ ಈ ಅಮೂಲ್ಯಾಭರಣವು ಪ್ರವಾಹದಲ್ಲಿ ಸಿಕ್ಕುವುದೆಂದರೇನು ? ಅದೂ ಭಸ್ಮ ಬಳಿದ ವೇಷಧಾರಿಗೆ!

ಹೇಂ:—ಬಾದಷಹನೇಕೆ ಮಾರುವೇಷದಿಂದ ಬರಬೇಕಾಗಿದ್ದಿತು ?

ಸೈ:—ಅಕ್ಬರನು ವಿವೇಕಿಯಾದ ಅಳರಸನೆಂದು ಬಲ್ಲೆಯಷ್ಟೆ. ಹಿಂದುಗಳನ್ನು ಅದರಲ್ಲಿಯೂ ರಾಜಪುತ್ರರನ್ನು ಅವನು ಪ್ರಾಣಕ್ಕಿಂತಲೂ ಅತಿಶಯವಾಗಿ ಪ್ರೀತಿಸುವನು. ಹಿಂದೂ ಮುಸಲ್ಮಾನ ಪ್ರಜೆಗಳಲ್ಲಿ ನಿಷ್ಪಕ್ಷಪಾತವಾದ ದೃಷ್ಟಿಯಿಂದ ರಾಜ್ಯಭಾರ ಮಾಡುವ ಅಕ್ಬರನ ಸದ್ಗುಣವನ್ನು ದೇಶವೇ ಕೊಂಡಾಡುವುದು. ಹಿಂದುಗಳ ಮತವನ್ನೂ ಅವರ ಮನೋಗತವನ್ನೂ, ಹಿಂದೂ ರಮಣೀಯರ ಗೌರವವನ್ನೂ ಅಕ್ಬರನು ಅತಿಶಯವಾಗಿ ಪುರಸ್ಕರಿಸುವನು. ಬುದ್ಧಿಹೀನನೂ ಕಾಮಾತುರನೂ ಆದ ಅಲ್ಲಾವುದ್ದೀನನು ಕನ್ನಡಿಯಲ್ಲಿಯಾದರೂ ಪದ್ಮಿನಿಯ ಪ್ರತಿಬಿಂಬವನ್ನು ನೋಡಬೇಕೆಂದು ಹಠಹಿಡಿದುದರಿಂದ ಹಿಂದೂ ಮುಸಲ್ಮಾನರಿಗೆ ಸಂಪ್ರಾಪ್ತವಾದ ಘೋರ ಕದನದ ಮಹದನರ್ಥಗಳನ್ನು ಅಕ್ಬರ್ ಬಾದಷಹನು ಚೆನ್ನಾಗಿ ಬಲ್ಲನು. ಅಂತಹ ಮತಕಲಹಗಳನ್ನು ಅಕ್ಬರನೆಂದಿಗೂ ಸಮ್ಮತಿಸನು. ಆದುದರಿಂದಲೇ ಅವನು ಮೀರಳ ದರ್ಶನಕ್ಕಾಗಿ ಮಾರುವೇಷದಲ್ಲಿ ಬಂದುದು. ಅಕ್ಬರನೇನೋ ಘನಾಢ್ಯನೇ ಅಹುದು. ಆದರೂ ಸಮಯಾನುಸಾರವಾದ

ಶಾಸ್ತ್ರಗಳಿಂದ ಪರಿಗಣಿಸಿದರೆ-ರಾಣಾನೂ ತನ್ನ ಪತ್ನಿಯ ಸಲುವಾಗಿ ಲೋಕನಿಂದೆಗೆ ಗುರಿಯಾದೆನಲ್ಲಾ ಎಂದು ಕುಪಿತನಾಗಿರಬೇಕು ಆದುದರಿಂದಲೇ ನಾವು ರಾಣಾನನ್ನು ನಿಂದಿಸುವುದು ಅನುಚಿತ. ರಾಣಾನ ಸ್ಥಿತಿಯಲ್ಲಿ ಒಬ್ಬ ಸಾಧಾರಣ ಪ್ರಜೆಯೂ ಹಾಗೆಯೇ ಮಾಡುತ್ತಿದ್ದನು.

ಹೆಂ:—ಮೀರಾಬಾಯಿಯ ಗೀತೆಗಳನ್ನು ಕೇಳುವುದಕ್ಕೆಂದು ಬಾದಶಹನು ಯಾವ ವೇಷದಲ್ಲಿ ಬಂದಿದ್ದರೂ ಅದೇನೂ ತಪ್ಪೆನಿಸಲಾರದು. ದಿನಂಪ್ರತಿ ಸಹಸ್ರಾರು ಅಪರಿಚಿತರು ದೇವಾಲಯಕ್ಕೆ ಬಂದು ಆಕೆಯ ಭಕ್ತಿಪ್ರದವಾದ ಕೀರ್ತನೆಗಳನ್ನು ಕೇಳುತ್ತಲಿಲ್ಲವೆ? ತನ್ನ ಭಕ್ತಿಯ ಕುರುಹಿಗಾಗಿ ಬಾದಶಹನು ಕೃಷ್ಣಪರಮಾತ್ಮನಿಗೆ ಕಾಣಿಕೆಯನ್ನು ಸಲ್ಲಿಸಿದರೆ ಇವನಿಗೆ ಎಲ್ಲ ಮತಗಳಲ್ಲಿಯೂ ಸಹಿಷ್ಣುತೆಯಿದೆಯೆಂದೂ ಸಕಲ ಮತಗಳನ್ನೂ ಸಮದೃಷ್ಟಿಯಿಂದ ಕಾಣುವ ಅಭಿಲಾಷೆ ಯಿದೆಯೆಂದೂ ಸ್ಪಷ್ಟವಾಗಿ ವ್ಯಕ್ತವಾಗುವುದಿಲ್ಲವೆ? ಇದಕ್ಕಾಗಿ ನಾವು ಬಾದಶಹನನ್ನು ವಂದಿಸಬೇಕೇ ಹೊರತು ಹಾಸ್ಯಸ್ವಭಾವದಿಂದ ನಿಂದಿಸ ಬಾರದು ರಾಣಾನಾದರೂ ತಾಳ್ಮೆಯಿಂದ ವಿಷಯವನ್ನು ವಿಚಾರಿಸ ಬೇಕಿದ್ದಿತು. ಹಾಗೂ ತನ್ನ ಪತ್ನಿಯ ದೈವಭಕ್ತಿಯು ತನಗೆ ಸರಿಬೀಳ ದಿದ್ದರೆ ಆಕೆಯನ್ನು ಬೇಡವೆಂದು ಬಿಟ್ಟುಬಿಟ್ಟರಾಯಿತು. ಅದನ್ನುಳಿದು ಆಕೆಗೆ ಕ್ರೂರವಾದ ಮರಣದಂಡನೆಯನ್ನು ವಿಧಿಸುವುದೆಂದರೆ ಇದೆಂತಹ ರಾಜನೀತಿ? ತನ್ನ ಕೈಯಲ್ಲಿ ಪ್ರಭುತ್ವಸೂತ್ರವಿರುವುದೆಂದು ಒಬ್ಬ ನಿರಪರಾಧಿಯು-ಪರಮಪಾವನೆಯಾದ - ಲೋಕವಂದಿತ- ಮೀರಾಮಾತೆ ಯನ್ನು-ಕೊಲೆಗಾರರ ಕೈಗೊಪ್ಪಿಸಿಬಿಡುವ-ಈ ರಾಣಾನ ಪೌರುಷವನ್ನು ಸುಡಬೇಕು ಬಿಡಿ, ಬಿಡಿ ಈ ಪ್ರತಾಪಕ್ಕೆ ಬೆಂಕಿ ಬೀಳಬೇಕು.

ರಜಪೂತ ಸೈನಿಕನಿಗೆ ತನ್ನ ಹೆಂಡತಿಯ ಮಾತನ್ನು ಕೇಳಿ ಬಾಯಿ ಬಿಗಿ ದಂತಾಯಿತು ಅವನೇನನ್ನೂ ಹೇಳದೆ ಸುಮ್ಮನಾದನು.

ಹಲವು ಅಮೌಲ್ಯಾಭರಣಗಳು ದೊರಕಿದರೆ ಅವುಗಳಿಂದ ಕೇಡುಂಟಾಗು ತ್ತದೆಂಬ ಪ್ರತೀತಿಯುಂಟು ಅದು ನಿಜವಾದರೆ ವಜ್ರಖಚಿತವಾದ ಈ ಕಂಠಾ ಭರಣವು ಮೀರಳಿಗೆ ಮಹದಾಪದವನ್ನು ತಂದಿತೆಂದು ಹೇಳಬಹುದಾಗಿದೆ;

ಏಕೆಂದರೆ ಅದು ಅವಳ ಗೃಹಜೀವನದ ಸುಖಶಾಂತಿಗಳನ್ನು ಅಲ್ಲಗಳೆಯಿತು. ಮ್ಲೇಚ್ಛನಿಂದ ಮುಟ್ಟಲ್ಪಟ್ಟಳೆಂಬ ಕಾರಣದಿಂದ ಅವಳ ಕೊರಳನ್ನು ತುಂಡರಿಸಬೇಕೆಂದು ರಾಣನು ಕಟ್ಟಾಜ್ಞೆಯನ್ನು ಮಾಡಿದನು.

ಆದರೆ ರಾಣನ ಈ ಕಠೋರಾಜ್ಞೆಯನ್ನು ನೆರವೇರಿಸಲು ರಾಜ್ಯದಲ್ಲಿ ಯಾರಿಗೂ ಮನಸಾಗಲಿಲ್ಲ; ಏಕೆಂದರೆ, ಮೀರಳನ್ನು ಕಂಡರೆ ದೇಶದಾದ್ಯಂತ ಮಾತೃಭಾವನೆಯಿದ್ದಿತು. ಅವಳ ಪರಿಶುದ್ಧತೆಯನ್ನು ಕಂಡು ಹಿಗ್ಗದವರಾರು? ಅವಳ ಅನನ್ಯಸಾಧ್ಯವಾದ ಭಕ್ತಿಯನ್ನು ಮೆಚ್ಚಿಕೊಂಡಾಡದವರಾರು? ಮೀರಳನ್ನು ಕೈಯೆತ್ತಿ ಕೊಲ್ಲಲು ಯಾರೂ ಮುಂದುಬಾರದಿದ್ದುದನ್ನು ಕಂಡು ರಾಣನು ತಾನೇ ಆ ಕೆಲಸವನ್ನು ಮಾಡಬೇಕೆಂದು ಮೀರಳಿದ್ದೆಡೆಗೆ ಹೋದನು. ಆದರೆ ಅವಳ ಶಿರಸ್ಸನ್ನು ಭೇದಿಸಲು ರಾಣನು ತನ್ನ ಖಡ್ಗವನ್ನು ಮೇಲೆತ್ತಿದಾಗ ಅವನ ಚೇತನವು ಅಡ್ಡಬಂದು ಚಿತ್ತವೃತ್ತಿಯು ಮಾರಿತು. ಅವನ ಹೃದಯವು ಅಧೀರತೆಯಿಂದ ದುರ್ಬಲವಾಯಿತು. ಕೋಪವು ನಾಶವಾಯಿತು. ಮೀರಳ ಭಕ್ತ್ಯತಿಶಯದ ಮಾಯೆಯು ಅಷ್ಟು ಪ್ರಬಲವಾಗಿದ್ದಿತು. ರಾಣನು ಅವಮಾನದಿಂದ ಅರಮನೆಗೆ ಹಿಂತಿರುಗಿದನು.

ಕ್ರೂರವಾದ ಖಡ್ಗದಿಂದ ವಧಿಸುವುದಕ್ಕೆ ಹಿಂಜರಿದ ರಾಣನು ಒಂದು ಬಟ್ಟಲಿನಲ್ಲಿ ಪಾಷಾಣವನ್ನು ತುಂಬಿ ಅದನ್ನು ಮೀರಳು ಕುಡಿಯಬೇಕೆಂದು ಅಜ್ಞಾಪಿಸಿ ಕಳುಹಿಸಿದನು. ಪಾಷಾಣವನ್ನು ಪತಿಯ ಪರಮಾನುಗ್ರಹವೆಂದೆಣಿಸಿ ಪತಿವ್ರತಾಶಿರೋಮಣಿಯಾದ ಮೀರಳು "ಶ್ರೀಕೃಷ್ಣಪರಮಾತ್ಮ! ಇದು ನಿನಗೇ ಅರ್ಪಿತವಾಗಲಿ" ಎಂದು ಸಂತೋಷಚಿತ್ತದಿಂದ ಗಡಗಡನೆ ಕುಡಿದುಬಿಟ್ಟಳು. ದೈವಾನುಗ್ರಹದಿಂದ ಮೀರಳ ಭಾಗಕ್ಕೆ ಪಾಷಾಣವು ಅಮೃತಸಮಾನವಾಯಿತು. ಅವಳ ದೈವಭಕ್ತಿಯ ಮಹತ್ತು ಅಷ್ಟೊಂದು ಅದ್ಭುತವಾಗಿದ್ದಿತು

ವಿಷಪ್ರಯೋಗವೂ ನಿಷ್ಫಲವಾಗಲು ಮುಂದೇನು ಮಾಡುವುದೆಂದು ತೋರದೆ ರಾಣನು ಚಿಂತಾಕ್ರಾಂತನಾದನು. ಮೀರಳು ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದು ಸೂಚಿಸಿ ಒಬ್ಬ ದೂತನ್ನು ಅವಳ ಬಳಿ ಕಳುಹಿಸಿದನು.

ಹಾಗೆಯೇ ಆಗಲೆಂದು ಒಪ್ಪಿ ಪತಿಪರಾಯಣೆಯಾದ ಮೀರಳು "ಪ್ರಾಣವಾಯುವು ಹಾರಿಹೋಗುವುದಕ್ಕೆ ಮುನ್ನ ಒಮ್ಮೆ ನನ್ನ ಹೃದಯೇಶ್ವರನನ್ನು ಕಂಡು ಆತನಿಂದ ಅನುಜ್ಞೆಯನ್ನು ಪಡೆಯಬೇಕು; ಪತಿಯ ಆಶೀರ್ವಾದವನ್ನು ಪಡೆದನಂತರ ಈ ನಿಕೃಷ್ಟ ಪ್ರಾಣವು ಹೇಗೆ ಅಳಿದರೂ ನಾನು ಚಿಂತಿಸುವುದಿಲ್ಲ" ಎಂಬ ತನ್ನ ಬಯಕೆಯನ್ನು ದೂತನ ಮುಖಾಂತರ ಹೇಳಿಕಳುಹಿಸಿದಳು. ಆದರೆ ರಾಣಾನು ಮೀರಳ ಇಷ್ಟಾರ್ಥವನ್ನು ಸಲ್ಲಿಸಲು ಸಮ್ಮತಿಸಲಿಲ್ಲ. "ಪತಿಯ ಆಜ್ಞೆಯನ್ನು ಪರಿಪಾಲಿಸುವುದೇ ಹಿಂದೂ ಸತಿಯ ಪರಮಧರ್ಮ; ಆಗಲಿ; ಪತಿಯ ಚಿತ್ತಕ್ಕೆ ಬಂದಂತೆ ಆಗಲಿ," ಎಂದು ಮೀರಳು ಮತ್ತೆ ಹೇಳಿಕಳುಹಿಸಿಬಿಟ್ಟಳು.

ತನ್ನ ಭರ್ತೃರು ತನ್ನ ಕೃತ್ಯಕ್ಕಾಗಿ ಮರುಗಿ ಕೃಶರಾಗುವರೆಂದರಿತು ಮೀರಾಬಾಯಿಯು ರಹಸ್ಯದಿಂದ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ನಿರ್ಧರಿಸಿದಳು. ಕವಿದ ಕತ್ತಲಿನಲ್ಲಿ ಯಾರಿಗೂ ಸುಳಿವು ಕೊಡದೆ, ರಾಜಯೋಗ್ಯವಾದ ತನ್ನ ಉಡುಗೆಗಳನ್ನು ಕಿತ್ತೊಗೆದು, ಸಾಧುಸಹಜವಾದ ಅರಿಶಿನ ಬಟ್ಟೆಗಳನ್ನು ತೊಟ್ಟಳು. ಯಮುನಾ ನದಿಯ ತೀರವನ್ನು ಸೇರಿ, ಪರಮಾತ್ಮನಿಗೆ ತನ್ನ ಅನಂತ ಧನ್ಯವಾದಗಳನ್ನು ಅರ್ಪಿಸಿ ಚಿತ್ತೈಕಾಗ್ರತೆಯಿಂದ ಮೀರಳು ಪುಣ್ಯನದಿಯ ಪ್ರವಾಹದಲ್ಲಿ ಧುಮುಕಿದಳು.

ತಕ್ಷಣವೇ ದೇದೀಪ್ಯಮಾನವಾದ ದೇವತೆಯು ಅವಳ ಕಣ್ಣೆದುರಿಗೆ ನಿಂತು ನುಡಿದುದೇನೆಂದರೆ;

"ಮೀರ! ನೀನು ಧೀರತೆಯಿಂದ ಪತಿಯಾಜ್ಞೆಯನ್ನು ಪರಿಪಾಲಿಸಲೋಸುಗ ಈ ಪ್ರವಾಹದಲ್ಲಿ ಬಂದು ಪ್ರಾಣಾರ್ಪಣೆಗೆ ಸಿದ್ಧಳಾದೆ. ಧನ್ಯೆ ಧನ್ಯೆ! ಸಾಧ್ವಿಶಿರೋಮಣಿ! ಆದರೆ ನಿನ್ನ ಆತ್ಮಹತ್ಯೆಗೇನೂ ಅವಕಾಶವಿಲ್ಲ. ಇದಕ್ಕಿಂತಲೂ ಅತಿಗುರುವಾದ ಕರ್ತವ್ಯವೊಂದು ನಿನಗೆ ಪರಮಾತ್ಮನಿಂದ ಉದ್ದಿಷ್ಟವಾಗಿರುವುದು. ಇಂದು ಮೊದಲು ನೀನು ನವಚೇತನದಿಂದ ಕೂಡಿ, ಪೂರ್ಣ ತೇಜಸ್ಸಿನಿಂದ, ನಿರ್ಮಲ ಜ್ಞಾನದಿಂದ, ಪ್ರೇಮಸೂತ್ರಗಳಿಂದ-ಪರಮಾತ್ಮನನ್ನು ಕಾಣುವ ವಿಧಾನವನ್ನು ಲೋಕಕ್ಕೆ ಬೋಧಿಸು ಇದೀಗ ನಿನ್ನ ಕರ್ತವ್ಯ."

ಪೂರ್ವದಿಕ್ಕಿನಲ್ಲಿ ಸೂರ್ಯಭಗವಾನನ ಪ್ರಶಾಂತ ಕಿರಣಗಳು ಮೆಲ್ಲ ಮೆಲ್ಲನೆ ಪ್ರಕಾಶಿಸತೊಡಗಿದುವು. ಕ್ರಮಕ್ರಮವಾಗಿ ಹೊತ್ತೇರುತ್ತ ಬಂದಿತು. ಆಗ ಮೀರಳು ಕಣ್ಣುಬಿಟ್ಟು ನೋಡುತ್ತಾಳೆ. ಅವಳು ಯಮುನಾನದಿಯ ದಡದಲ್ಲಿ ಮರಳುದಿಣ್ಣೆಯ ಮೇಲೆ ಬಿದ್ದಿದ್ದಾಳೆ. ಬಳಿಕ ಮೇಲೆದ್ದು ಮೆಲ್ಲ ಮೆಲ್ಲನೆ ಮೈದಾನಗಳಲ್ಲಿಯೂ, ಗದ್ದೆಗಳಲ್ಲಿಯೂ ಭಗವನ್ನಾಮ ಸಂಕೀರ್ತನೆ ಯನ್ನು ಮಾಡುತ್ತಾ ಮುಂದೆ ನಡೆದಳು. ದಾರಿಯುದ್ದಕ್ಕೂ ಕೃಷ್ಣಭಕ್ತರಾದ ಗೋಪಾಲಕರು ಅವಳ ಗಾಯನದಿಂದ ಪರವಶರಾಗಿ ಅವಳಿಗೆ ಸ್ವಚ್ಛವಾದ ಹಾಲನ್ನೂ, ಆಹಾರವನ್ನೂ ನೀಡುತ್ತ ಬಂದರು. ಬೃಂದಾವನಕ್ಕೆ ದಾರಿ ಯಾವುದು ಎಂದು ಮೀರಳು ವಿಚಾರಿಸುತ್ತ ನಡೆದಳು. ಅವಳಹೋದೆಡೆ ಗಳಲ್ಲೆಲ್ಲ ಸುತ್ತಮುತ್ತಲಿನ ಹಳ್ಳಿಗರು ತಮ್ಮ ಕೆಲಸಗಳನ್ನು ಮರೆತು ತಾವೂ ಪರಮಾತ್ಮನ ಗುಣಗಾನವನ್ನುಮಾಡುತ್ತ ಮೀರಳನ್ನು ಹಿಂಬಾಲಿಸಿದರು. ದಾರಿಯುದ್ದಕ್ಕೂ ಪವಿತ್ರಕ್ಷೇತ್ರಗಳನ್ನು ಸಂದರ್ಶಿಸುತ್ತ ಕಟ್ಟಕಡೆಗೆ ಭಕ್ತಾ ಗ್ರಣಿ ಮೀರಳು ತನ್ನನ್ನು ಹಿಂಬಾಲಿಸಿದ ಹಿರಿದಾದ ಪರಿವಾರದೊಂದಿಗೆ ಕೃಷ್ಣಪರಮಾತ್ಮನ ಲೀಲಾವಿನೋದಗಳಿಗೆ ಪ್ರಖ್ಯಾತವೆನಿಸಿದ ಬೃಂದಾವನವನ್ನು ಸೇರಿದಳು.

ಆಕೆಯು ಬೃಂದಾವನಕ್ಕೆ ಆಗಮಿಸಿದ ಸುದ್ದಿಯು ಆ ಪ್ರಾಂತವೆಲ್ಲ ಹರಡಿತು ಆಕೆಯ ವಿವೇಕಭರಿತ ಉಪದೇಶಗಳನ್ನೂ - ಮೃದುಮಧುರವಾದ ಕೃಷ್ಣಗೀತೆಯನ್ನೂ ಕೇಳಲೆಂದು ತಂಡೋಪತಂಡವಾಗಿ ಜನರು ಬೃಂದಾವನದಲ್ಲಿ ಬಂದು ಕಿಕ್ಕಿರಿದರು. ಈಗವಳು ರತ್ನಾಭರಣಭೂಷಿತಳೂ, ದಿವ್ಯಾಲಂಕಾರ ಭರಿತಳೂ ಆದ ಉದಯಪುರದ ಮಹಾರಾಣಿ ಮೀರಾಬಾಯಿಯಲ್ಲ. ಹಳದಿಯ ವಸ್ತ್ರಗಳನ್ನು ತೊಟ್ಟು, ಭಿಕ್ಷುಕರ ಕಮಂಡಲುವನ್ನು ಧರಿಸಿದ ಸನ್ಯಾ ಸಿನಿಯು ಮಾತ್ರ! ಆದರೆ ಈಗ ಸಕಲರಿಗೂ ಮುಕ್ತಿಮಾರ್ಗವನ್ನು ತೋರುವ, ಶಾಂತಿಪ್ರೇಮಗಳಿಂದ ನಿಬಿಡವಾದ ಹೃದಯ ಸಾಮ್ರಾಜ್ಯಕ್ಕೆ ಆಕೆಯು ಅಧಿ ನಾಯಕಿಯಲ್ಲವೆ? ಹಲವು ವರ್ಷಗಳು ಕಳೆದನಂತರ ಮೀರಳು, ಕೃಷ್ಣಪರ ಮಾತ್ಮನ ನಗರವಾದ ದ್ವಾರಕೆಯನ್ನು ಪ್ರವೇಶಿಸಿ ಅದನ್ನು ತನ್ನ ವಾಸಸ್ಥಳವಾಗಿ ಮಾಡಿಕೊಂಡಳು. ದ್ವಾರಕೆಯಲ್ಲಿ ವೈಕುಂಠ ಸದೃಶವಾದ ವೈಭವಭರಿತ ದೇವ

ಮಂದಿರವನ್ನು ವಿರಚಿಸಿ ಅಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಪ್ರತಿಷ್ಠಿಸಿದಳು.

ಮೀರಾಬಾಯಿಯು ವಿರಚಿಸಿದ ಮಧುರ ಗೀತೆಗಳನ್ನು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಸಕಲ ಸ್ತ್ರೀಪುರುಷರೂ ಅತ್ಯಂತ ಭಕ್ತ್ಯಾದರಗಳಿಂದ ಗಾಯನಮಾಡತೊಡಗಿದರು. ರಾಣನ ರಾಜಧಾನಿಯಾದ ಉದಯಪುರದಲ್ಲಿಯೂ ಸಹ, ಪ್ರಜೆಗಳು ಮೀರಳ ಪವಿತ್ರತೆಯನ್ನೂ, ಭಗವದ್ಭಕ್ತಿಯನ್ನೂ, ಪಾಪಪರಿಹಾರಕವಾದ ಮಧುರ ಗೀತೆಗಳನ್ನೂ ಕುರಿತು ಎಡೆಬಿಡದೆ ಪ್ರಶಂಸಿಸಿ ಪುಲಕಿತರಾಗುತ್ತಿದ್ದರು. ಈ ಸಮಾಚಾರವು ಭೋಜರಾಜನಿಗೂ ತಿಳಿಯಿತು.

ಕಟ್ಟಕಡೆಯಲ್ಲಿ ರಾಣನಿಗೆ ಜ್ಞಾನೋದಯವಾಯಿತು. ಅವನು ತನ್ನ ಅವಿವೇಕವನ್ನರಿತು ಚಿಂತಿಸಿದನು. ತನ್ನ ರಾಜ್ಯದಿಂದ ಮೀರಳನ್ನು ಬಹಿಷ್ಕರಿಸಿದ್ದರೂ, ಲೋಕದ ಸ್ತ್ರೀಪುರುಷರ ಮನೋರಾಜ್ಯದಲ್ಲಿ ಆಕೆಗೆ ಪೂಜಾರ್ಹವಾದ ಉನ್ನತ ಪದವಿಯು ದೊರೆತಿರುವುದನ್ನು ಕಂಡು ಆತನು ಹರ್ಷಭರಿತನಾದನು. ತಾನೆಣಿಸಿದಂತೆ, ಭಯಗೊಂಡಂತೆ, ಉದಯಪುರದ ಅರಸು ಮನೆತನಕ್ಕೆ ಕಳಂಕವನ್ನು ತರುವುದಕ್ಕೆ ಪ್ರತಿಯಾಗಿ ಮೀರಳು ನಿರಾಕ್ಷೇಪವಾದ - ಗೌರವವನ್ನೂ ಕೀರ್ತಿಯನ್ನೂ ತಂದಳೆಂದು ರಾಣನು ಸಂತೋಷಸಾಗರದಲ್ಲಿ ನಿಮಗ್ನನಾದನು. ತನ್ನ ಹೃದಯಾಂತರಾಳದಲ್ಲಿ ಅಡಗಿ ಕುಳಿತಿದ್ದ ಪತ್ನಿಪ್ರೇಮವು ಈಗ ಇದ್ದಕ್ಕಿದ್ದಂತೆ ಮೇಲೆದ್ದು ವಿಕಾಸಗೊಂಡಿತು.

ತನ್ನ ವೇಷವನ್ನು ಮಾರ್ಪಡಿಸಿಕೊಂಡು ಯಾತ್ರಾರ್ಥಿಯಂತೆ ರಾಣನು ಕಾಲುನಡಿಗೆಯಲ್ಲಿಯೇ ದ್ವಾರಕೆಯನ್ನು ಸೇರಿದನು. ಅಲ್ಲಿ ದೇವಮಂದಿರದ ಸೋಪಾನವೊಂದರ ಮೇಲೆ ಅಪರಿಮಿತ ಶಾಂತತೆಯಿಂದ ಮಂಡಿಸಿ ದೇವಕನ್ಯೆಯಂತೆ ವಿರಾಜಿಸುತ್ತಿದ್ದ - ಅಚಲ ಭಕ್ತಿಯಿಂದ ಮುಕ್ತಿಸಾಮ್ರಾಜ್ಯವನ್ನು ಸೂರೆಗೊಂಡ ಲೋಕವಂದಿತೆ-ಮಹಾಮಾತೆ - ಅಗ್ರಗಣ್ಯಯೋಗಿನಿ-ಅರವಿಂದಲೋಚನೆ ಮೀರಾದೇವಿಯನ್ನು ಕಂಡು ಅವಳ ಮಂದಹಾಸದಿಂದ 'ಇವಳೇ ನನ್ನ ಧರ್ಮಪತ್ನಿ' ಎಂದು ರಾಣನು ಪ್ರೇಮಪರವಶನಾದನು.

ಯೋಗಿನಿಯನ್ನು ಕಂಡು ಭೋಜರಾಜನು "ನಿನ್ನಲ್ಲಿ ಭಿಕ್ಷೆಗಾಗಿ ಬಂದಿರುವೆನು" ಎಂದನು.

"ಏನು? ನನ್ನಲ್ಲಿ ಭಿಕ್ಷೆಯನ್ನು ಬೇಡುವುದೆಂದರೇನು ನಾನೊಬ್ಬ ಭಿಕ್ಷುಕ ಳೆಂದು ಕಾಣುವುದಿಲ್ಲವೆ? ಭಿಕ್ಷೆಯು ಬೇಕಾಗಿದ್ದಲ್ಲಿ ಧನವಂತರಲ್ಲಿ ಹೋಗ ಬಹುದು."

ಮೀರಾದೇವಿಯು ಮೃದುಮಧುರವಾಗಿ ನುಡಿದಳು:

"ಹಾಗಲ್ಲ; ಸತ್ಯಸಂಧನಾದ ಭಿಕ್ಷುಕನು ಭಿಕ್ಷುಕಿಯ ಆಶ್ರಯವನ್ನು ಕೋರಿ ಬಂದಿರುವನು." ರಾಣನು ಹೇಳಿದನು.

"ಆದರೆ ನಾನಾವುದನ್ನು ಕೊಡಬಲ್ಲೆ?" ಮೀರಳು ಕೇಳಿದಳು.

"ಕ್ಷಮೆ! ಕ್ಷಮೆಯನ್ನು ಬೇಡಲು ಬಂದಿರುವೆನು. ನಾನು ಪಶ್ಚಾತ್ತಾಪಿ ಯಾಗಿರುವೆನು. ಪಶ್ಚಾತ್ತಾಪದಿಂದ ಪಾಪವು ನಶಿಸಿ ನಾನು ನಿರ್ಮಲಚಿತ್ತ ದಿಂದ ಕ್ಷಮೆ ಬೇಡುತ್ತಿರುವೆನು. ನಾರೀರತ್ನವೆ! ನಾನಾರೆಂದು ಗ್ರಹಿಸ ಲಾರೆಯಾ?"

ಉದಯಪುರದ ರಾಜನು ಮಗುವಿನಂತೆ ಬಿಕ್ಕಿಬಿಕ್ಕಿ ಅತ್ತನು.

ಮೀರಳು ಪತಿಯ ಪಾದಾರವಿಂದಗಳಲ್ಲಿ ಪವಡಿಸಿ ಸ್ತ್ರೀಮಾತ್ರಳಾದ ಅವಳು "ನಾಥ; ನಾನು ಅಂದಿಗೂ ತಮ್ಮ ಪತ್ನಿ; ಇಂದಿಗೂ ತಮ್ಮ ಪತ್ನಿ! ತಮ್ಮ ಮೇಲಣ ನನ್ನ ಪ್ರೇಮವು ಎಂದಿನಂತೆ ಒಂದೇ ರೀತಿಯಾಗಿರುವುದು. ತಾವಾವ ತಪ್ಪನ್ನೂ ಮಾಡಿದವರಲ್ಲ. ಇದೆಲ್ಲವೂ ಭಗವದಾಜ್ಞೆ. ನಾವು ಆತನ ಆಜ್ಞಾಧಾರಕರಷ್ಟೆ. ನಿರತಿಶಯ ಕೃಷ್ಣಭಕ್ತಿಯಿಂದ ಪತಿವರ್ಯರಾದ ತಮ್ಮನ್ನು ನಾನು ಉದಾಸೀನ ಮಾಡಿದಂತೆ ಕಂಡುದು ಉಚಿತವೆ. ನನ್ನ ಸಲು ವಾಗಿ ತಮಗುಂಟಾದ ಮನೋಯಾತನೆಗೆ ನಾನೇ ಅಲ್ಲವೆ ಕಾರಣಳು? ತಾವಲ್ಲವೆ ನನ್ನನ್ನು ಮನ್ನಿಸಿ ಆಶೀರ್ವದಿಸಬೇಕಾದುದು?"

ಮೀರಳು ಪತಿಯ ಪಾದಗಳನ್ನು ಬಿಗಿಯಾಗಿ ಹಿಡಿದು ತನ್ನ ಅಶ್ರುಧಾರೆ ಯಿಂದ ತೊಳೆದಳು.

ಮೀರಳನ್ನು ತನ್ನ ಇರುಕೈಗಳಿಂದಲೂ ಮೇಲಕ್ಕೆ ಹಿಡಿದೆತ್ತಿ ತನ್ನದೆಗೆ ಅಪ್ಪಿಕೊಂಡು ರಾಣನು ಹೇಳಿದನು:

"ಲೋಕವಂದಿತೆ! ಪರಮಾತ್ಮನ ಅಗ್ರಗಣ್ಯ ಭಕ್ತೆ! ಪರಮ ಸಾಧ್ವಿ! ನಿನ್ನಲ್ಲಿ ನಾನು ಅಪರಿಮಿತ ಕ್ರೌರ್ಯವನ್ನು ಆಚರಿಸಿದೆನು. ಅದಕ್ಕಾಗಿ ನಾನು ಶೋಕಸಂತಪ್ತನಾಗಿರುವೆನು. ಆಗ ನಾನು ನಿನ್ನ ಪವಿತ್ರತೆಯನ್ನು ಗ್ರಹಿಸು ವಷ್ಟು ವಿವೇಕವನ್ನು ಹೊಂದಿರಲಿಲ್ಲ ಆದರೆ ನೀನು! ಪತಿಪರಾಯಣೆ! ನನ್ನ

ಎಲ್ಲ ನಿಷ್ಠೂರಗಳನ್ನೂ, ಕಠಿಣತೆಯನ್ನೂ ಅತ್ಯಂತ ಆನಂದದಿಂದ-ಶಾಂತತೆ ಯಿಂದ ಸಹಿಸಿರುವೆ. ನನ್ನ ದುರ್ನೀತಿಗಾಗಿ ಭಗವಂತನು ನನ್ನನ್ನು ಯಥೇಚ್ಛ ವಾಗಿ ಶಿಕ್ಷಿಸಿರುವನು ನನ್ನ ಅನ್ಯಾಯವನ್ನೂ ಕಠಿಣತೆಯನ್ನು ಮನದಣಿಯ ಮನ್ನಿಸುವೆಯಾ ಮೀರಾ? ನನ್ನ ಹೃದಯೇಶ್ವರಿ!"

ಪತಿವರ್ಯನ ಅನುರಾಗಭರಿತ ಸವಿನುಡಿಗಳನ್ನು ಕೇಳಿ ಆತನ ನಿಷ್ಕಲ್ಮಷ ಪಶ್ಚಾತ್ತಾಪವನ್ನು ಕಂಡು ಸರಳಸ್ವಭಾವಿಯಾದ ಮೀರಳ ಮನವು ಕರಗಿತು. 'ಭಗವದಿಚ್ಛೆಯಿದ್ದಂತಾಗಲಿ" ಎನ್ನುತ್ತ ಆವಳು ಪತಿಯನ್ನು ಗಾಢವಾಗಿ ಆಲಿಂಗಿಸಿದಳು.

"ಮೀರಾ! ನನ್ನ ಜೀವಿತಸರ್ವಸ್ವವೆ! ಲೋಕಕ್ಕೆ ಮುಕ್ತಿಯನ್ನು ಕರುಣಿಸ ಬಲ್ಲ ನೀನು ನನ್ನನ್ನು ನಿರಾಕರಿಸುವೆಯಾ?"

"ನಾಥ! ನಾನೇನುಮಾಡಬೇಕೆನ್ನುವಿರಿ?"

"ನನ್ನೊಡನೆ ನಗರಕ್ಕೆ ಬರಬೇಕು. ಅರಮನೆಯಲ್ಲಿ ನನ್ನೊಡನೆ ಇರ ಬೇಕು ನಿನ್ನ ಭಕ್ತಿಮಾರ್ಗಕ್ಕೆ ನಾನು ತೊಡಕಾಗುವುದಿಲ್ಲ."

"ಹೃದಯೇಶ್ವರ! ನನ್ನದೊಂದು ಬಿನ್ನಹ. ಅದನ್ನು ನಡೆಸಿಕೊಡು ವಿರಾ?"

"ಏನದು? ಮರೆಮಾಚದೆ ಹೇಳು."

"ತಮ್ಮೊಡನೆ ನಾನು ನಗರಕ್ಕೆ ಬರುವೆನು. ಆದರೆ ವರ್ಷದಲ್ಲಿ ಆರು ತಿಂಗಳು ಕಾಲ ದ್ವಾರಕೆಯಲ್ಲಿ ಶ್ರೀ ಕೃಷ್ಣಪರಮಾತ್ಮನ ಸಾನ್ನಿಧ್ಯದಲ್ಲಿ ಆನಂದ ದಿಂದ ನನ್ನ ಭಕ್ತಿಯನ್ನು ಸಲ್ಲಿಸಲು ತಾವು ಅನುಮತಿಸುವಿರಾ?"

"ಸಂಪೂರ್ಣಚಿತ್ತದಿಂದ ಅನುಮತಿಸುವೆನು ನಿನ್ನೊಡನೆ ನಾನೂ ಕೃಷ್ಣ ಪರಮಾತ್ಮನ ಸನ್ನಿಧಿಯಲ್ಲಿರುವುದಕ್ಕೆ ಅಕ್ಷೇಪಣೆಯಿರದಷ್ಟೆ!"

ಭಾರತದ ಸಾಧ್ವಿ ಶಿರೋಮಣಿಗಳಲ್ಲಿ ಮೀರಾಬಾಯಿಯು ಅತ್ಯುನ್ನತಳು; ಕೀರ್ತಿವಂತೆ; ಮುಕ್ತಿಸಾಧನೆಯಲ್ಲಿ ಅಸಮ ಸಾಹಸವನ್ನು ತೋರಿದವಳು; ಆಕೆಯ ಭಗವದ್ಭಕ್ತಿ, ಉನ್ನತ ಭಾವನೆಗಳು, ಪವಿತ್ರ ಕೀರ್ತನೆಗಳು, ಇವೆ ಲ್ಲವೂ ಆಚಂದ್ರಾರ್ಕವಾಗಿ ತಾರಾಸಮಾನವಾಗಿ. ನಭೋಮಂಡಲದಲ್ಲಿ ಬೆಳಗಿ ಪರಮಾತ್ಮನಲ್ಲಿ ಸಖ್ಯಭಕ್ತಿಯನ್ನು ಹುಟ್ಟಿಸಿ ಮಾನವರನ್ನು ಅನಂತಕಾಲದ ವರೆಗೂ ಉದ್ಧಾರಗೊಳಿಸತಕ್ಕುವು.

೮. ಗಂಗೆಯ ಉದ್ಭವ (ಭಗೀರಥ ಪ್ರಯತ್ನ)

ಸಗರನೆಂಬ ಬಲಿಷ್ಠನಾದ ಚಕ್ರವರ್ತಿಯು ಒಮ್ಮೆ ಅಯೋಧ್ಯಾ ನಗರವನ್ನು ಆಳುತ್ತಿದ್ದನು. ಅವನು ಸಹೃದಯನೂ ದೈವಭಕ್ತನೂ ಆಗಿದ್ದನು. ಬಹುಕಾಲದವರೆಗೆ ಅವನಿಗೆ ಸಂತತಿಯೇ ಇರಲಿಲ್ಲ. ಅನೇಕ ವರ್ಷಗಳು ಭಗವಂತನಲ್ಲಿ ಮೊರೆಯಿಟ್ಟು, ತಪಸ್ಸನ್ನು ಆಚರಿಸಿದ ನಂತರ ದೇವಾದಿಗಳು ಅವನಲ್ಲಿ ಕೃಪೆಗೊಂಡು ಅವನನ್ನು ಅನುಗ್ರಹಿಸಿದರು. ಆಗ ಅವನಿಗೆ ಶ್ರೀಮಂತ ಪತ್ನಿಯಲ್ಲಿ ಒಂದು ಗಂಡು ಮಗುವೂ ದ್ವಿತೀಯ ಪತ್ನಿಯಲ್ಲಿ ಅನೇಕ ಮಕ್ಕಳೂ ಹುಟ್ಟಿದರು.

ಕಾಲಕ್ರಮೇಣ ಸಗರಪುತ್ರರೂ ಯೌವನವನ್ನು ಮುಟ್ಟಿದುದು ಮಾತ್ರವಲ್ಲದೆ ಗಣಸಂಪನ್ನರೂ ಆದರು. ತನ್ನ ಕುಮಾರರು ಪ್ರಜೆಗಳಿಗೆ ಅನೇಕ ತೆರನಾದ ಉಪಕಾರವನ್ನು ಮಾಡುವುದನ್ನು ಕಂಡು ಸಗರಚಕ್ರವರ್ತಿಯು ಸಂತೋಷಗೊಂಡನು. ಆದರೆ ಅವನ ಶ್ರೀಮಂತ ಪುತ್ರನು ಮಟ್ಟಿಗೆ ದುರಾತ್ಮನಾಗಿದ್ದನು. ಅವನು ತನ್ನ ಸಹೋದರರನ್ನು ಕಾಡಿ ಕುಣಿಸುವುದರಲ್ಲಿ ಆಸಕ್ತನಾದನು. ಅವರನ್ನು ನದಿಯಲ್ಲಿ ತಳ್ಳಿ ಈಜಲಾರದೆ ಅವರು ಕಣ್ಣು ಕಣ್ಣು ಬಿಟ್ಟು ಪರಿತಪಿಸುತ್ತಿದ್ದುದನ್ನು ನೋಡಿ ಈ ದುಷ್ಟನು ಹಿಗ್ಗುತ್ತಿದ್ದನು. ಸಗರಚಕ್ರವರ್ತಿಯು ಈ ದುಷ್ಟಪುತ್ರನ ಪುಂಡುತನವನ್ನು ಸಹಿಸಲಾರದೆ ಅವನನ್ನು ದೇಶಭ್ರಷ್ಟನನ್ನಾಗಿ ಮಾಡಿದನು.

ಸಗರ ಚಕ್ರವರ್ತಿಯು ತನ್ನ ಪ್ರಜೆಗಳನ್ನು ವಿಶ್ವಾಸದಿಂದ ಬಹುಕಾಲ ಆಳಿದನು ಪ್ರಜೆಗಳು ಸಂತುಷ್ಟರಾಗಿದ್ದರು; ಧನಸಂಪನ್ನರಾದರು; ರಾಜ್ಯವೆಲ್ಲವೂ ಫಲಪುಷ್ಪ, ಧನಧಾನ್ಯಗಳಲ್ಲಿ ಸಮೃದ್ಧಿಹೊಂದಿ ಸುಭಿಕ್ಷವಾಗಿದ್ದಿತು. ಕಟ್ಟಕಡೆಯಲ್ಲಿ ತನ್ನ ಪೂರ್ವಜರ ಸಂಪ್ರದಾಯಕ್ಕನುಗುಣವಾಗಿ ಸಗರ ಚಕ್ರವರ್ತಿಯು ಅಶ್ವಮೇಧ ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿದನು.

ಸ್ಫಟಿಕ ಸಮಾನವಾದ, ಸರ್ವಲಕ್ಷಣಸಹಿತವಾದ, ಸುಂದರ ಸುಮನೋಹರವಾದ ಅಶ್ವವನ್ನು ಯಾಗಕ್ಕಾಗಿ ಸಗರನು ಹುಡುಕಿಸಿದನು. ಸ್ವರ್ಣರೇಖೆಯಲ್ಲಿ ಲಿಖಿತವಾದ ಶಾಸನವನ್ನು ಅದರ ನೆತ್ತಿಗೆ ಕಟ್ಟಿ ಯಾಗಾಶ್ವವನು

ರಾಜಧಾನಿಯಿಂದ ಹೊರಗೆ ಬಿಟ್ಟರು. ಚಕ್ರವರ್ತಿಯು ಮೊಮ್ಮಗನ ಸೇನಾಸಮೇತನಾಗಿ ಕುದುರೆಯನ್ನು ಅದರ ರಕ್ಷಣೆಗಾಗಿ ಹಿಂಬಾಲಿಸಿದನು. ಕುದುರೆಯು ನಾನಾದೇಶಗಳಲ್ಲಿ ಸಂಚರಿಸಿತು. ಅದು ದೈವಭಕ್ತನೂ, ಪ್ರಜಾವತ್ಸಲನೂ ನ್ಯಾಯತತ್ಪರನೂ ಆದ ಸಗರ ಚಕ್ರವರ್ತಿಯದೆಂದು ತಿಳಿದೊಡನೆಯೇ ಅದನ್ನು ಯಾರೂ ತಡೆಯಲಿಲ್ಲ. ಅದಕ್ಕೆ ಪ್ರತಿಯಾಗಿ ತಮ್ಮ ಕಪ್ಪಕಾಣಿಕೆಗಳನ್ನು ಕೊಟ್ಟು ಕಳುಹಿಸಿದರು ಕಟ್ಟಕಡೆಯಲ್ಲಿ ದೇವೇಂದ್ರನು ರಹಸ್ಯದಿಂದ ಯಜ್ಞಾಶ್ವವನ್ನು ಕದ್ದೊಯ್ದು ಪಾತಾಳದಲ್ಲಿ ಬಚ್ಚಿಟ್ಟನು.

ಈ ಸಮಾಚಾರವು ತಿಳಿದೊಡನೆಯೇ ಸಗರ ಚಕ್ರವರ್ತಿಯು ಯಜ್ಞಾಶ್ವವನ್ನು ಹುಡುಕಿ ತರುವಂತೆ ತನ್ನ ಪುತ್ರರಿಗೆ ಆಜ್ಞಾಪಿಸಿದನು ಅವರು ಪೂರ್ವಪಶ್ಚಿಮ ದಕ್ಷಿಣೋತ್ತರ ಪ್ರದೇಶಗಳ ಎಲ್ಲ ರಾಜ್ಯಗಳಲ್ಲಿಯೂ ಹುಡುಕಿದರು; ಆದರೆ ಅವರ ಪರಿಶೋಧನೆಯು ವ್ಯರ್ಥವಾಯಿತು. ಎಷ್ಟು ಹುಡುಕಿದರೂ ಯಜ್ಞಾಶ್ವವು ಅವರ ಕಣ್ಣಿಗೆ ಬೀಳಲಿಲ್ಲ. ಅವರು ಅಯೋಧ್ಯೆಗೆ ಹಿಂತಿರುಗಿ ತಮ್ಮ ಕೆಲಸವು ಕೈಗೂಡಲಿಲ್ಲವೆಂದು ತಂದೆಯಲ್ಲಿ ಬಿನ್ನವಿಸಿಕೊಂಡರು

ಯಜ್ಞಾಶ್ವವನ್ನು ತರದೆ ಬರಿಯ ಕೈಯಲ್ಲಿ ಹಿಂತಿರುಗಿದ ತನ್ನ ಪುತ್ರರನ್ನು ಕಂಡು ಸಗರ ಚಕ್ರವರ್ತಿಯು ಕೋಪಾವೇಶದಿಂದ " ನಿಮ್ಮಂತಹ ಕೈಲಾಗದ ಹೇಡಿ ಪುತ್ರರನ್ನು ಪಡೆದು ಪ್ರಯೋಜನವೇನು ? ಯಜ್ಞಾಶ್ವವನ್ನು ಹುಡುಕಿ ತರಲು ನಿಮ್ಮಿಂದ ಸಾಧ್ಯವಾಗಲಿಲ್ಲವೆಂದು ನನ್ನಲ್ಲಿ ಹೇಳಿಕೊಳ್ಳಲು ನಿಮಗೆ ನಾಚಿಕೆಯಾದರೂ ಆಗುವುದಿಲ್ಲವೇನು ? ಹೋಗಿ ; ಭೂಮಂಡಲದಲ್ಲಿಯ, ಎಲ್ಲ ಹಳ್ಳಕೊಳ್ಳಗಳನ್ನು ಪಾತಾಳ ಪರ್ಯಂತ ಅಗೆದು ಎಲ್ಲಿದ್ದರೂ ಸರಿಯೆ-ಕುದುರೆಯನ್ನು ಹಿಡಿದುಕೊಂಡು ಬನ್ನಿ. ನೀವು ನಿಮ್ಮ ಪ್ರಯತ್ನದಲ್ಲಿ ವಿಫಲರಾದರೆ ನನ್ನ ಮುಖವನ್ನು ಅವಲೋಕಿಸದಿರಿ."

ತಂದೆಯ ಸಿಟ್ಟಿನ ಮಾತನ್ನು ಕೇಳಿ ಸಗರ ಪುತ್ರರು ಭಯಭರಿತ ಭಕ್ತಿಯಿಂದ " ಮಹದಾಜ್ಞೆ ; ನಾವು ಇದೀಗಲೆ ಹೊರಟು ಪಾತಾಳದ ಅಂತರಾಳದಲ್ಲಿದ್ದರೂ ಬಿಡದೆ ಯಜ್ಞಾಶ್ವವನ್ನು ಹುಡುಕಿ ಹಿಡಿದು ತಂದು ಯಾಗವನ್ನು ಪೂರ್ತಿಗೊಳಿಸುವುದಕ್ಕೆ ಬೇಕಾದ ಸಾಹಸವನ್ನು ಮಾಡುವೆವು.

ಜನಕನೆ ! ನಮ್ಮನ್ನು ಆಶೀರ್ವದಿಸು " ಎಂದು ಸಗರ ಚಕ್ರವರ್ತಿಯ ಪಾದ ಗಳಿಗೆ ನಮಸ್ಕರಿಸಿದರು.

ತಂದೆಯಿಂದ ಬೀಳ್ಕೊಂಡು ಸಗರ ಪುತ್ರರು ಅಯೋಧ್ಯಾನಗರವನ್ನು ಬಿಟ್ಟು ಪೃಥ್ವಿಯ ಚತುರ್ದಶೆಗಳಲ್ಲಿಯೂ ಯಜ್ಞಾಶ್ವವನ್ನು ಮತ್ತೆ ಹುಡು ಕಿದರು. ಆದರೆ ಕಣ್ಮರೆಯಾದ ಕುದುರೆಯ ವೃತ್ತಾಂತವು ಎಲ್ಲಿಯೂ ದೊರೆಯ ಲಿಲ್ಲ. ಕೊನೆಗವರು ಹಾರೆ, ಕಠಾರಿ, ಗುದ್ದಲಿ, ನೇಗಿಲು ಮುಂತಾದುವನ್ನು ಹಿಡಿದು ಭೂಗರ್ಭವನ್ನು ಭರಭರನೆ ಭೇದಿಸತೊಡಗಿದರು. ಹಗಲಿರುಳೆನ್ನದೆ ಅಗೆದಗೆದು ಪರ್ವತದಂತೆ ಕಲ್ಲುಮಣ್ಣುಗಳನ್ನು ರಾಶಿರಾಶಿಯಾಗಿ ಹೊರಗೆಡವಿ ದರು. ಭೂಗರ್ಭದಲ್ಲಿ ಪೂರ್ವಪಶ್ಚಿಮ ದಕ್ಷಿಣೋತ್ತರ ದಿಕ್ಕುಗಳಲ್ಲಿ ಸಗ ಸರಸೆ ಸಂಚರಿಸಿದರು. ಆದರೂ ಕುದುರೆಯು ಅವರಿಗೆ ಗೋಚರಿಸಲಿಲ್ಲ. ಅವರ ಆ ರಭಸದ ಅಗತೆಯಲ್ಲಿ ಎಷ್ಟೋ ಮಾನವರನ್ನೂ, ಮೃಗಗಳನ್ನೂ ಕೊಲೆಮಾಡಿದರು. ಆದರೂ ಅವರ ಉದ್ದೇಶವು ಸಿದ್ಧಿಸಲಿಲ್ಲ.

ಕಟ್ಟಕಡೆಯಲ್ಲಿ ಭೂಮಿಯ ಅಂತರಾಳದಲ್ಲಿ ಅವರೊಂದು ಗುಹೆಯನ್ನು ಕಂಡರು. ಕಪಿಲನೆಂಬ ಪರಿಶುದ್ಧನಾದ ಮಹರ್ಷಿಯು ಆ ಗುಹೆಯಲ್ಲಿ ತಪಸ್ಸನ್ನು ಆಚರಿಸುತ್ತಿದ್ದನು. ಅಲ್ಲೊಂದು ಕುದುರೆಯು ಗರಿಕೆಹುಲ್ಲನ್ನು ಮೇಯುತ್ತಿದ್ದಿತು. ಅದೇ ದೋಷವಿವರ್ಜಿತವಾದ ಅವರ ಯಜ್ಞಾಶ್ವವು ! ಸಗರ ಪುತ್ರರ ಆನಂದವನ್ನು ಕೇಳಬೇಕೆ ?

ಆದರೆ ಇಷ್ಟೊಂದು ಶ್ರಮದಿಂದ ಹುಡುಕಿದ ಕುದುರೆಯನ್ನು ಹಿಡಿದು ಕೊಂಡುಹೋಗಿ ತಂದೆಗೆ ಒಪ್ಪಿಸಬಹುದಾಗಿದ್ದಿತು; ಆಗ ಯಜ್ಞವೂ ಸಾಂಗವಾಗಿ ನೆರವೇರುತ್ತಿದ್ದಿತು. ಆದರೆ ವಿವೇಕಶೂನ್ಯರಾದ ಸಗರಪುತ್ರರು ಮಾಡಿದುದೇನು ? ಕಠಾರಿ ಗುದ್ದಲಿಗಳನ್ನು ಹಿಡಿದು ಕೊಲ್ಲುವುದಕ್ಕೆಂದು ಅವರು ಒಂದೇ ರಭಸದಿಂದ ಮಹರ್ಷಿಯ ಕಡೆಗೆ ನುಗ್ಗಿದರು. ಕಪಿಲನಾದರೋ ನಿಷ್ಕಳಂಕನಾಗಿದ್ದನು. ಕುದುರೆಯ ವಿಷಯವಾಗಿ ಅವನು ಏನೊಂದನೂ ಅರಿತವನಾಗಿರಲಿಲ್ಲ. ಅವನು ಕೆಂಡಗಳಂತೆ ಕೆಂಪೇರಿದ ಕೋಪೋದ್ರೇಕದಿಂದ ಕೂಡಿದ ತನ್ನ ಕಣ್ಣುಗಳನ್ನು ಬಿಟ್ಟು ನೋಡಿದನು. ಅವನ ತಪೋಬಲದಿಂದ

ಸಗರ ಪುತ್ರರೆಲ್ಲರೂ ಅಲ್ಲಿಂದಲ್ಲೇ ಸುಟ್ಟು ಭಸ್ಮರಾದರು. ಕಳುವಾದ ಕುದುರೆಯನ್ನು ಹುಡುಕುವುದಕ್ಕೆಂದು ಹೊರಟು ಭೂಮಿಯನ್ನು ಭೇದಿಸಿ ಪಾತಾಳವನ್ನು ಪ್ರವೇಶಿಸಿದ ಸಗರ ಪುತ್ರರ ಪರ್ಯಾವಸಾನವು ಈ ರೀತಿಯಾಯಿತು

ಕೆಲಕಾಲನಂತರ ಭಗೀರಥನು ಅಯೋಧ್ಯಾನಗರದ ಸಿಂಹಾಸನವನ್ನೇರಿದನು. ಅವನು ಯೋಗ್ಯನೂ, ಗುಣಸಂಪನ್ನನೂ ಆಗಿ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುತ್ತಿದ್ದನಲ್ಲದೆ, ತನ್ನ ಬಾಳುವಿಕೆಯನ್ನು ಋಷಿಸಹಜವಾದ ಮಾರ್ಗಗಳಲ್ಲಿ ನಡೆಸುತ್ತಿದ್ದನು. ಸತ್ಯಸಂಧನೂ, ದೈವಭಕ್ತನೂ, ಆದ ಭಗೀರಥ ಮಹಾರಾಜನು ತನ್ನ ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸುತ್ತಿದ್ದನು.

ಬಾಲ್ಯದಿಂದಲೂ ಭಗೀರಥನನ್ನು ಬಾಧಿಸುತ್ತಿದ್ದ ಬಯಕೆಯೊಂದಿದ್ದಿತ್ತು. ಆ ಬಯಕೆಯನ್ನು ಈಡೇರಿಸಿಕೊಳ್ಳಲು ಅವನು ಹಗಲಿರುಳೂ ಪ್ರಯತ್ನಿಸುತ್ತಿದ್ದನು

"ಕಪಿಲ ಮಹಾಮುನಿಯ ಕೋಪಾಗ್ನಿಯಿಂದ ದಗ್ಧರಾದ ಸಗರ ಪುತ್ರರ ಆತ್ಮಗಳಿಗೆ ಸ್ವರ್ಗಪ್ರವೇಶವನ್ನುಂಟುಮಾಡದಿದ್ದರೆ ನಾನು ಜೀವಿಸಿ ಫಲವೇನು? ನನ್ನ ವಂಶಜರಾದ ಅವರ ಆತ್ಮಗಳಿಗೆ ಸದ್ಗತಿಯನ್ನು ಕಾಣಿಸುವುದೀಗ ನನ್ನ ಜನ್ಮೋದ್ದೇಶವಾಗಿರುವುದು. ಈ ಕಾರ್ಯವನ್ನು ಸಾಹಸದಿಂದ ಸಾಧಿಸಿದ ಹೊರತು ನನ್ನ ಜನ್ಮವು ಸಫಲವೆನಿಸದು" ಹೀಗೆಂದು ಭಗೀರಥನು ಸಂಕಲ್ಪಿಸಿಕೊಂಡನು.

ರಾಜ್ಯಸೂತ್ರಗಳನ್ನು ತನ್ನ ಕುಮಾರನಿಗೆ ವಹಿಸಿ ಭಗೀರಥನು ಹಿಮಾಲಯದಲ್ಲಿ ತಪಸ್ಸನ್ನು ಆಚರಿಸಿದನು ಜ್ವಲಿಸುವ ಅಗ್ನಿಯನ್ನು ತನ್ನ ಸುತ್ತಲೂ ಹರಡಿ, ಅನ್ನನೀರುಗಳನ್ನು ಮುಟ್ಟದೆ, ನಿಶ್ಚಲ ಭಕ್ತಿಯಿಂದ ದೇವತೆಗಳನ್ನು ಆರಾಧಿಸಿದನು. ಅವನ ನಿರ್ಮಲ ತಪಸ್ಸಿಗೆ ಮನಮೆಚ್ಚಿ ಸೃಷ್ಟಿನಾಯಕನಾದ ಬ್ರಹ್ಮದೇವನು ಭಗೀರಥನಿಗೆ ಪ್ರತ್ಯಕ್ಷನಾಗಿ "ಎಲೈ ಭಕ್ತಾಗ್ರಣಿ! ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾದೆನು. ಯಾವ ವರವನ್ನು ಬೇಕಾದರೂ ನಿಸ್ಸಂಕೋಚವಾಗಿ ಕೇಳು; ಅನುಗ್ರಹಿಸುವೆನು" ಎಂದನು.

ಬ್ರಹ್ಮದೇವನ ಪಾದಗಳಿಗೆ ಪ್ರಕ್ಷಾಳನಾದಿ ಷೋಡಶೋಪಚಾರಗಳನ್ನು ಮಾಡಿ, ಕಮಲಾಸನನ ಪಾದೋದಕವನ್ನು ಶಿರದಲ್ಲಿ ಪ್ರೋಕ್ಷಿಸಿಕೊಂಡನು,

ತರುವಾಯ ಕೈಜೋಡಿಸಿ "ಎಲೈ ಸೃಷ್ಟಿಕರ್ತನೆ! ನಿನ್ನ ದಿವ್ಯದರ್ಶನದಿಂದ ನನ್ನ ಜನ್ಮವು ಪವಿತ್ರವಾಯಿತು. ನಾನು ಕೃತಾರ್ಥನಾದೆನು ಹೇ! ಪುಣ್ಯ ಚರಿತನೆ! ನನ್ನ ವಂಶೀಕರಾದ ಸಗರ ಪುತ್ರರಿಗಾದ ಗತಿಯನ್ನು ನೀನು ಬಲ್ಲೆಯಷ್ಟೆ. ನೂರಾರು ವರ್ಷಗಳಿಂದ ಸುಟ್ಟುಹೋದ ಅವರ ಶರೀರಗಳು ಭಸ್ಮರೂಪವಾಗಿ ಬಿದ್ದಿವೆಯಲ್ಲವೆ? ಅವರಿಗೆ ನಾನು ಪಿತೃ ಋಣ ವನ್ನು ಸಲ್ಲಿಸಬೇಕಲ್ಲವೆ? ಅವರ ಆತ್ಮಗಳಿಗೆ ಸದ್ಗತಿ ಕಾಣಿಸಬೇಕಾದುದು ಅವರ ವಂಶಜನಾದ ನನ್ನ ಪವಿತ್ರ ಕರ್ತವ್ಯವಲ್ಲವೆ? ಈ ಕಷ್ಟತಮವಾದ ಧ್ಯೇಯವನ್ನು ಸಾಧಿಸಲು ನಾನಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬು ದನ್ನು ಸೂಚಿಸಿ ಸಲಹು" ಎಂದು ಬೇಡಿದನು.

ಪಿತೃವಾತ್ಸಲ್ಯಭರಿತನಾದ ಭಗೀರಥನ ಮನೋಗತವನ್ನರಿತು ಬ್ರಹ್ಮ ದೇವನು ಹೀಗೆಂದು ಹೇಳಿದನು:

"ಎಲೈ ಸಚ್ಚರಿತ್ರನಾದ ಭಗೀರಥ ಮಹಾರಾಜನೆ! ನಿನ್ನ ಧ್ಯೇಯವು ಪವಿತ್ರವಾದುದು; ಲೋಕಸಮ್ಮತವಾದುದು; ದೇವಮಾನ್ಯವಾದುದು. ಸ್ತುತ್ಯಾರ್ಹವಾದ ನಿನ್ನ ಇಷ್ಟಾರ್ಥವು ಫಲಿಸಲೆಂದು ನಾನು ಆಶೀರ್ವದಿ ಸುತ್ತೇನೆ. ನಿನ್ನ ಪೂರ್ವಜರ ಆತ್ಮಗಳನ್ನು ಉದ್ಧಾರಮಾಡಲು ಪವಿತ್ರಳಾದ ಗಂಗಾಭವಾನಿಯನ್ನುಳಿದು ಮತ್ತಾರಿಗೂ ಶಕ್ತಿಯಿರುವುದಿಲ್ಲ. ಪುಣ್ಯವನಿತೆ ಯಾದ ಗಂಗಾದೇವಿಯು ಈಗ ವೈಕುಂಠದಲ್ಲಿ ಶ್ರೀಮನ್ಮಹಾವಿಷ್ಣುವಿನ ಪಾದಾರವಿಂದಗಳಲ್ಲಿ ವಾಸಿಸುತ್ತಿರುವಳು. ನಿನ್ನ ದೈನ್ಯವಾದ ಪ್ರಾರ್ಥನೆಯನ್ನು ಲಾಲಿಸಿ ಆಕೆಯು ಭೂಲೋಕಕ್ಕೆ ಅವರೋಹಣ ಮಾಡುವಳು. ಆಗ ನಿನ್ನ ಅಭೀಷ್ಟವು ಸಿದ್ಧಿಸುವುದು."

ಭಗೀರಥನನ್ನು ಆಶೀರ್ವದಿಸಿ ಬ್ರಹ್ಮದೇವನು ಅದೃಶ್ಯನಾದನು.

ರಥಾರೋಹಣಮಾಡಿ ಭಗೀರಥ ಮಹಾರಾಜನು ಮಹಾಮೇರುವನ್ನು ಮುಟ್ಟಿದನು. ಪವಿತ್ರತಮವಾದ ಮೇರುಶಿಖರದಲ್ಲಿ ನಿಂತು ಪುಣ್ಯಮಾತೆ ಗಂಗಾದೇವಿಯನ್ನು ಸ್ಮರಿಸಿ ದಿಕ್ಕುಗಳು ಭೇದಿಸುವಂತೆ ಶಂಖವನ್ನು ಊದಿ ದನು. ಅದರ ಆ ಮಹಾಧ್ವನಿಯು ಆಕಾಶವನ್ನು ಭೇದಿಸಿಕೊಂಡು ಹೋಗಿ ವೈಕುಂಠದಲ್ಲಿ ಪ್ರತಿಧ್ವನಿಸೈದಿತು. ವಿಷ್ಣುವಿನ ಅರಸಿಂದ ಪಾದಗಳಲ್ಲಿ ಮಂಡಿತ

ಳಾಗಿದ್ದ ಗಂಗಾಮಾತೆಯು ಆ ಮಹಾಧ್ವನಿಯನ್ನು ಕೇಳಿ ಎಚ್ಚೆತ್ತು ಭಗೀರಥನ ಇಷ್ಟಾರ್ಥಸಿದ್ಧಿಗಾಗಿ ಭೂಲೋಕಕ್ಕೆ ಇಳಿಯತೊಡಗಿದಳು.

ಅಷ್ಟೊಂದು ಎತ್ತರದಿಂದ ಗಂಗೆಯು ಭೂಲೋಕಕ್ಕೆ ಬೀಳುವ ರಭಸದಲ್ಲಿ ಪೃಥ್ವಿಯು ನಡುಗಿ ನಾಶವಾದೀತೆಂದು ಜನಗಣವು ಭಯಾಕ್ರಾಂತವಾಯಿತು. ಆದುದರಿಂದ ಭಗೀರಥನ ಪ್ರಾರ್ಥನೆಯನ್ನು ಲಾಲಿಸಿ ಮಹೇಶ್ವರನು ಗಂಗೆಯನ್ನು ತನ್ನ ಜಟೆಯಲ್ಲಿ ಧರಿಸಲು ಸಮ್ಮತಿಸಿದನು.

ಆ ಪವಿತ್ರಕಾಲದಲ್ಲಿ ಗಂಗಾವಾಹಿನಿಯು ಪ್ರಚಂಡವಾಗಿ ಭೋರ್ಗರೆಯುತ್ತ ದೇವಲೋಕದಿಂದ ಮಹಾಮೇರುವಿನ ಶಿಖರಕ್ಕೆ ಇಳಿಯಿತು. ಮೃಗಚರ್ಮಾಂಬರಧಾರಿಯಾದ ಜಟಾಧರನು ಗಂಗಾಪತನದ ಪ್ರಚಂಡವೇಗವನ್ನು ತಡೆಗಟ್ಟುವುದಕ್ಕಾಗಿ ಸಿದ್ಧನಾಗಿ ನಿಂತನು.

ದೇವಸಂಭೂತಳಾದರೂ ಗಂಗೆಗೆ ಗರ್ವವಿಲ್ಲದಿರಲಿಲ್ಲ. ತನ್ನ ಪತನವೇಗದ ಭರದಲ್ಲಿ ಶಿವನು ತನ್ನ ಉಚ್ಚಸ್ಥಾನದಿಂದ ಕದಲಿ ಕೆಳಗುರುಳಿಯಾನು ಎಂದು ಅವಳು ಯೋಚಿಸಿದಳು. ಆದರೆ ಗಂಗೆಯ ಮಮಕಾರವನ್ನು ಜ್ಞಾನದೃಷ್ಟಿಯಿಂದರಿತ ಪರಶಿವನು ಮಹಾರಭಸದಿಂದ ಆಕಾಶದಿಂದ ಅವರೋಹಣ ಮಾಡುತ್ತಿರುವ ಗಂಗೆಯ ಅಖಂಡ ಜಲವನ್ನು ತನ್ನ ಪವಿತ್ರ ಶಿರದಲ್ಲಿ ಧರಿಸಿದುದು ಮಾತ್ರವಲ್ಲದೆ ತನ್ನ ವಿಶಾಲವಾದ ಜಟೆಯಲ್ಲಿ ಆ ಜಲರಾಶಿಯೆಲ್ಲವನ್ನೂ ಬಂಧಿಸಿಬಿಟ್ಟನು. ಗಂಗೆಗೆ ಗರ್ವಖಂಡನವಾಯಿತು. ಅವಳು ಪೃಥ್ವಿಯನ್ನು ಸ್ಪರ್ಶಮಾಡಲು ಸಾಧ್ಯವಾಗಲಿಲ್ಲ. ತನ್ನಲ್ಲಿ ಕೃಪೆಯನ್ನು ತೋರಬೇಕೆಂದು ಭಗೀರಥನು ಪರಿಪರಿಯಾಗಿ ಪ್ರಾರ್ಥಿಸಿದ ನಂತರವೇ ತನ್ನ ಶಿರಸ್ಸಿನ ಒಂದು ಭಾಗದಿಂದ ಶಿವನು ಗಂಗಾಜಲವನ್ನು ಕೆಳಗಿಳಿಯಬಿಟ್ಟನು.

ಶಿವಶಿರಸ್ಸಿನಿಂದ ಬಂಧವಿಮೋಚನೆ ಹೊಂದಿದ ಗಂಗಾಜಲವು ಮಾನಸ ಸರೋವರದಲ್ಲಿ ಬಿದ್ದು ಏಳು ನದಿಗಳಾಗಿ ಹರಿಯಿತು ಅವುಗಳಲ್ಲಿ ಮೂರು ಪಶ್ಚಿಮಾಭಿಮುಖವಾಗಿಯೂ ಮೂರು ಪೂರ್ವಾಭಿಮುಖವಾಗಿಯೂ ಪ್ರವಹಿಸಲು ಸಪ್ತಮ ಶಾಖೆಯು ಭಗೀರಥನನ್ನು ಹಿಂಬಾಲಿಸಿತು.

ಭಾಗವತೋತ್ತಮನಾದ ಭಗೀರಥನು ತನ್ನ ರಥದಲ್ಲಿ ಕುಳಿತು, ಮುಂದೆ ಮುಂದೆ ದಾರಿ ತೋರಿಸಿದನು. ಗಂಗೆಯು ಅವನನ್ನೇ ಹಿಂಬಾಲಿಸಿ ಹೊರಟಳು. ಈ ಮನೋಹರ ಜಲರಾಶಿಯು ಎತ್ತರವಾದ ಪರ್ವತಗಳಲ್ಲಿ



ಶಿವನು ಗಂಗೆಯನ್ನು ಜಟೆಯಲ್ಲಿ ಧರಿಸಿದುದು

ಭೋರ್ಗರೆಯುತ್ತ, ಸಿಡಿಲಿನಂತೆ ಗುಡುಗುಡಿಸುತ್ತ, ವಿಶಾಲವಾದ ಕಣಿವೆಗಳಲ್ಲಿ ರೋಷಾವೇಶದಿಂದ ಹರಿದು ತನ್ನ ಗಮನ ವೇಗದಲ್ಲಿ ತನ್ನೆದುರಿನಲ್ಲಿ ತಡೆಯಾದುದನ್ನೆಲ್ಲ ತತಬಡಿಸಿ ಮುಂದು ಮುಂದಕ್ಕೆ ಸಂಚರಿಸಿತು.

ಹರಿದ್ವಾರದಲ್ಲಿ ಪರ್ವತದಿಂದಿಳಿದು ಗಂಗಾಮಾತೆಯು ಫಲವತ್ತಾದ ಮೈದಾನವನ್ನು ಸೇರಿದಳು. ಸಪ್ತರ್ಷಿಗಳೂ, ಮಹಾಮಹಾ ಯೋಗೀಶ್ವರರೂ ಆ ಪ್ರದೇಶದಲ್ಲಿ ಪುಣ್ಯಮಾತೆಯನ್ನು ಅತ್ಯಂತ ಭಕ್ತಿಪುರಸ್ಸರವಾಗಿ ಆರಾಧಿಸಿದರು. ಜಗತ್ತಿನ ಜೀವಕೋಟಿಯು ತನ್ನನ್ನು ಸಂರಕ್ಷಿಸಲೆಂದು ಭೂಲೋಕಕ್ಕೆ ಬಿಜಯಗೈದ ದೇವಮಾತೆಯನ್ನು ಸಂತೋಷಚಿತ್ತದಿಂದ ಆಹ್ವಾನಿಸಿತು.

ವಿಶಾಲವಾದ ದೇವನದಿಯು ತನ್ನನ್ನು ವೇಗದಿಂದ ಹಿಂಬಾಲಿಸುತ್ತಿರಲು ಭಗೀರಥನು ಮನೋಹರ ಪ್ರದೇಶಗಳನ್ನು ದಾಟು ಮುಂದು ಮುಂದಕ್ಕೆ ಸಾಗಿದನು. ಸುರನದಿಯು ಪ್ರಯಾಗವನ್ನು ಪ್ರವೇಶಿಸುವ ವೇಳೆಗೆ ಆಕೆಯ ಪವಿತ್ರ ಸಹೋದರಿಯರಾದ ಯಮುನಾ ಸರಸ್ವತಿಯರು ಆಕೆಯನ್ನು ಸಂಧಿಸಿದರು. ಆದುದರಿಂದ ಈ ಮೂರು ಮಹಾನದಿಗಳು ಮಾನವನ ಸೇವೆಗಾಗಿ ಐಕ್ಯವಾದೆಡೆಗೆ ಸಂಗಮವೆಂದೂ, ಹಿಂದೂಗಳಿಗೆ ಇದು ಅತ್ಯಂತ ಪುಣ್ಯಪ್ರದವಾದ ಕ್ಷೇತ್ರವೆಂದೂ ಅಂದಿನಿಂದ ಪ್ರತೀತಿಯು ಬಂದಿದೆ. ಬಳಿಕ ಗಂಗೆಯು ಶ್ರೀ ವಿಶ್ವನಾಥನ ಕ್ಷೇತ್ರವಾದ ಕಾಶಿಯ ಪಕ್ಕದಲ್ಲಿ ಹರಿದಳು.

ಅಲ್ಲಿಂದ ಮುಂದೆ ಜಾಹ್ನು ಎಂಬ ಒಬ್ಬ ಪ್ರಖ್ಯಾತ ಋಷಿಯ ಯಾಗಸ್ಥಾನಕ್ಕೆ ಭಗೀರಥನನ್ನು ಗಂಗಾದೇವಿಯು ಹಿಂಬಾಲಿಸಿದಳು ಯಾಗವು ನಡೆಯುತ್ತಿರುವುದನ್ನು ತಿಳಿಯದೆ ಗಂಗೆಯು ವಿಶಾಲವಾದ ಪವಿತ್ರ ಯಾಗಭೂಮಿಯನ್ನು ಕೊಚ್ಚಿಕೊಂಡು ಪ್ರವಹಿಸಿದಳು. ಇದನ್ನು ಕಂಡು ಕೋಪಾವಿಷ್ಟನಾದ ಋಷಿಯು ಗಂಗೆಯ ಜಲವೆಲ್ಲವನ್ನೂ ಒಂದೇ ಸಲಕ್ಕೆ ಆಪೋಶನ ಮಾಡಿಬಿಟ್ಟನು. ಇದನ್ನು ಕಂಡು ದೇವಮಾನವರು ಬೆರಗಾದರು. ಮುಂದೇನು ಗತಿಯೆಂದು ಭಗೀರಥನು ತಲ್ಲಣಿಸಿದನು. ಆಗವನು ಜಾಹ್ನು ಋಷಿಯನ್ನು ಪ್ರಾರ್ಥಿಸಿದನು. ಋಷಿಯು ತನ್ನ ಕಿವಿಗಳ ಮುಖೇಣ ಗಂಗೆಯನ್ನು ಹೊರಗೆಡವಿದನು. ಅಂದಿನಿಂದ ಗಂಗಾ

ದೇವಿಗೆ ಜಾಹ್ನವಿ ಅಥವ ಜಾಹ್ನು ಋಷಿಯ ಪುತ್ರಿ ಎಂದು ನಾಮಕರಣ ವಾಯಿತು.

ವಂಗ ದೇಶದ ವಿಶಾಲವಾದ ಮರಳಿನಿಂದ ಕೂಡಿದ ಮೈದಾನಕ್ಕೆ ಬಂದಾಗ ಗಂಗಾನದಿಯು ಅನೇಕ ಉಪನದಿಗಳಾಗಿಯೂ, ಶಾಖೆಗಳಾಗಿಯೂ ಬಿರಿದು ಆ ಪ್ರದೇಶವೆಲ್ಲವನ್ನೂ ಸಂಭಿಕ್ತಗೊಳಿಸಿತು. ವಂಗದೇಶದಲ್ಲಿರುವ ಹಿರಿಯ ನದಿಗೆ ಇಂದಿಗೂ ಭಾಗೀರಥಿಯೆಂದು ಹೆಸರುಂಟು. ಪವಿತ್ರ ಗಂಗೆಯನ್ನು ಭೂಲೋಕಕ್ಕೆ ತಂದು ಲೋಕೋಪಕಾರವಾಡಿದ ಭಗೀರಥ ಮಹಾರಾಜನ ಚಿರಸ್ಮರಣೆಗಾಗಿ ಜನರು ಆ ಪ್ರಾಂತ್ಯದಲ್ಲಿ ಗಂಗೆಯನ್ನು ಆ ರೀತಿ ಕರೆಯುತ್ತಾರೆ.

ತನ್ನ ಸುದೀರ್ಘಪ್ರಯಾಣದ ಅಂತ್ಯದಲ್ಲಿ ಗಂಗೆಯು ಸಾಗರಾಭಿಮುಖವಾಗಿ ನಡೆದು ಪಾತಾಳಕ್ಕಿಳಿದು ಸಗರ ಪುತ್ರರ ಅಸ್ತಿರಾಶಿಯ ಭಸ್ಮವನ್ನು ತೊಳೆದು ಪವಿತ್ರಗೊಳಿಸಿದಳು. ಆದುದರಿಂದ ಭಾಗೀರಥಿಯ ಮುಖಭಾಗದಲ್ಲಿರುವ ದ್ವೀಪಕ್ಕೆ ಸಗರ ದ್ವೀಪವೆಂದು ಹೆಸರಾಯಿತು.

ಸಗರ ಪುತ್ರರ ಭಸ್ಮರಾಶಿಯ ಮೇಲೆ ಗಂಗೆಯು ಪ್ರವಹಿಸಿದೊಡನೆಯೇ ಮೃತರು ತಮ್ಮ ಪಾಪದಿಂದ ವಿಮೋಚನೆ ಹೊಂದಿದರು. ಗಂಗೆಯ ನಿರ್ಮಲ ಸ್ಪರ್ಶದಿಂದ ಅವರೆಲ್ಲರೂ ಒಮ್ಮತದಿಂದ ಮೇಲೆದ್ದರು. ಅವರು ಗಂಗಾ ಮಾತೆಯನ್ನು ಪೂಜಿಸಿ ತಮ್ಮ ಆತ್ಮೋದ್ಧಾರಕ್ಕಾಗಿ ಆಕೆಯನ್ನು ಭೂಲೋಕಕ್ಕೆ ಕರೆತಂದ ತಮ್ಮ ಮೊಮ್ಮಗನಾದ ಭಗೀರಥನ ವಿಶ್ವಪ್ರಯತ್ನವನ್ನು ಅಖಂಡವಾಗಿ ಹೊಗಳಿದರು.

ಇದೀಗ ಭಗೀರಥನ ಅಚಲವಾದ - ನಿರ್ಮಲವಾದ ಪ್ರಯತ್ನ! ಇದಕ್ಕಾಗಿ ಹಿಂದುಗಳು ಈ ಸಚ್ಚರಿತ್ರನನ್ನು ಇಂದಿಗೂ ಮುಕ್ತಕಂಠದಿಂದ ಹೊಗಳುತ್ತಾರೆ. ಭಗೀರಥನ ಕೀರ್ತಿಯು ಎಂದೆಂದಿಗೂ ಲೋಕದಲ್ಲಿ - ಜನರ ಸ್ಮೃತಿಪಥದಲ್ಲಿ - ಅಚ್ಚಳಿಯದೆ ನಿಲ್ಲುವುದರಲ್ಲಿ ಸಂದೇಹವಿರದು. ಮಾನವ ಮಾತ್ರನಾದವನಿಗೆ ಅಸಾಧ್ಯವೆನಿಸಿದ ಈ ಅದ್ಭುತ ಕಾರ್ಯವನ್ನು ಕರ್ತವ್ಯನಿಷ್ಠೆಯಿಂದಲೂ, ದೈವಭಕ್ತಿಯಿಂದಲೂ, ಕಠಿಣವ್ರತದ ಪ್ರತಿಫಲವಾಗಿ ಸಾಧಿಸಿದ ಈ ಪುಣ್ಯಪುರುಷನ ದಿವ್ಯ ಕೀರ್ತಿಯು ಸೂರ್ಯ ಚಂದ್ರಾದಿ ನಕ್ಷತ್ರಗಳಂತೆ ಅನಂತಕಾಲದವರೆಗೂ ಜಾಜ್ವಲ್ಯಮಾನವಾಗಿ ವಿರಾಜಿಸಬಲ್ಲುದು.

ದೃಢಪ್ರಯತ್ನ, ನಿರ್ಮಲಚಿತ್ತ, ಅಗಾಧ ದೈವಭಕ್ತಿ ಇವುಗಳ
ವೈಕುಂಠದಿಂದ ಗಂಗಾಮಾತೆಯನ್ನು ಭೂಲೋಕಕ್ಕೆ ಕರೆತಂದು ಲೋಕೋ
ಪಕಾರವನ್ನಾದಿ ಚಿರಖ್ಯಾತಿಯುಳ್ಳವನಾದ ಭಗೀರಥನು ಆದರ್ಶಪುರುಷನೇ ಸರಿ.

೯. ರಾಣಾನೂ—ಅಕ್ಬರ್ ಬಾದಷಹನೂ

ಮಾತೃಭೂಮಿಯ ಸ್ವಾತಂತ್ರ್ಯರಕ್ಷಣೆಗಾಗಿ ಎಷ್ಟೋ ಸಹಸ್ರ ವಿ
ರಜಪೂತ ಯೋಧರು ಮೊಗಲಾಯಿ ಸೈನ್ಯಗಳನ್ನು ಎದುರಿಸಿದರು. ಶ
ದಿನ ಸೈನ್ಯವು ಅಧಿಕರಿಸಿದಾಗ ಅವರು ಮನೆ ಮಠಗಳನ್ನು ಬಿಟ್ಟು
ಹೆಂಡತಿ ಮಕ್ಕಳನ್ನು ತೊರೆದು - ಅಡವಿಗಳಲ್ಲಿ ಅಡಗಿ - ಅಲ್ಲಿಂದ ಆದ
ಬಗೆಯಲ್ಲಿ ಮೊಗಲಾಯಿ ಸೈನ್ಯಗಳಿಗೆ ಅಡ್ಡಿ ಆತಂಕಗಳನ್ನು ತಂದೊ
ಡ್ಡಿದ್ದರು. ಏನೇ ಆಗಲಿ ಮೊಗಲಾಯರ ಕೈಸೆರೆಯಾಗಬಾರದು- ಬಡತನ
ಬಂದರೂ ಅಡ್ಡಿಯಿಲ್ಲ- ಸ್ವಾತಂತ್ರ್ಯ ಕಳೆದುಕೊಳ್ಳಬಾರದು ಎಂದು ಅವರು ದೃ
ಸಂಕಲ್ಪ ಮಾಡಿದರು

"ಮೊಗಲಾಯಿ ಸೈನ್ಯಕ್ಕೆ ವಿಶ್ರಾಂತಿ ಕೊಡದಂತೆ ಮೂಲೆ ಮೂಲೆಗಳ
ಅವರನ್ನು ಕಾಡಬೇಕು. ಅವಕಾಶ ದೊರೆತಂತೆಲ್ಲ ನಾವವರನ್ನು ಗುಂ
ಗುಂಪಾಗಿ ಚದರಿಸಿ ಕೊಳ್ಳೆಹೊಡೆಯಬೇಕು. ತನ್ನ ಪರಮ ವೈರಿಯೆಂ
ಭಾವಿಸಿ ರಾಣಾ ರಘುವೀರಸಿಂಹನನ್ನು ಹೇಗಾದರೂ ಕೈಸೆರೆ ಹಿಡಿಯಬೇಕೆಂ
ಅಕ್ಬರ್ ಬಾದಷಹನು ವಿಶ್ವಪ್ರಯತ್ನ ಮಾಡುತ್ತಿರುವನು. ಆದರೆ ಅ
ಪ್ರಯತ್ನವೆಲ್ಲವೂ ನಿಷ್ಪ್ರಯೋಜನಗಳಾದುವು"

ಅರಾವಳಿಬೆಟ್ಟದಲ್ಲಡಗಿ ಕುಳಿತಿದ್ದ ರಾಣಾರ ವೀರ ರಜಪೂತ ಯೋಧ
ಒಬ್ಬರನೊಬ್ಬರು ಯುದ್ಧಭೂಮಿಯ ವೃತ್ತಾಂತಗಳನ್ನು ಈರೀತಿ ಮಾತನಾ
ಕೊಳ್ಳುತ್ತಿದ್ದರು.

ಕೆಲವು ತಿಂಗಳುಗಳು ಉರುಳಿದುವು. ರಾಣಾ ರಘುವೀರಸಿಂಹನನ್ನು
ಸಲ ಹೇಗಾದರೂ ಕೈಸೆರೆ ಹಿಡಿಯಬೇಕೆಂದು ನಿಯಮಿಸಿ ಹಿರಿಯ ಸೇನೆಯ
ವನ್ನು ಬಾದಷಹನು ಕಳುಹಿಸಿ ಕೊಟ್ಟನು. ಸೈನ್ಯವು ರಾಣಾನ ಅರಮನೆ
ಮುತ್ತಿಗೆಹಾಕಿತು.

ಆದರೆ ರಾಣಾನು ಅರಾವಳಿ ಬೆಟ್ಟದ ಕಾಡುಗಳಲ್ಲಿ ಕುಳಿತು ತನ್ನವರೊಡನೆ ಆಲೋಚಿಸುತ್ತಿದ್ದನು - ಮೊಗಲಾಯರನ್ನು ಹೇಗೆ ಸದೆಬಡಿದು ಹಿಮ್ಮೆಟ್ಟಿಸುವುದೆಂದು.

ಒಂದು ದಿನ ರಾಣಾನ ಕಡೆಯ ದೂತನೊಬ್ಬನು ಅರಮನೆಯಿಂದ ಕಾಡಿಗೆ ಬಂದನು. ರಾಣಾನನ್ನು ಕಂಡು 'ಪ್ರಭು! ತಮ್ಮ ಏಕಮಾತ್ರ ಪುತ್ರನು ಉಗ್ರ ವ್ಯಾಧಿಯಿಂದ ನರಳಿ ಮರಣೋನ್ಮುಖನಾಗಿರುವನು' ಎಂದು ಕಣ್ಣೀರಿಟ್ಟನು. ರಾಣಾವೇನು ಮಾಡಿಯಾನು? ಅರಮನೆಗೆ ಹೋದರೆ ಮೊಗಲ ಸೈನಿಕರ ಕೈಸೆರೆಯಾಗಬೇಕಾಗುತ್ತದೆ. ತನ್ನ ಒಬ್ಬನೇ ಪುತ್ರನನ್ನು ಕೊನೆಯ ಸಲ ನೋಡುವುದು ಬೇಡವೆ? ಅವನಿಗೆ ಧರ್ಮಸಂಕಟ ಒದಗಿತು - ದೇಶಪ್ರೇಮವು ಹಿರಿದೆ? ದೇಹ ಸಂಬಂಧವು ದೊಡ್ಡದೆ? ರಾಣಾನು ತನ್ನ ಅನುಚರರನ್ನೆಲ್ಲಾ ಒಟ್ಟಿಗೆ ಸೇರಿಸಿ ಅವರಿಗೆ ಹೇಳಿದನು: "ನನ್ನ ತಲೆಗಾಗಿ ಬಾದಶಹನು ವಿಶೇಷ ಬಹುಮಾನವನ್ನಿಟ್ಟಿರುವನು- ಅದನ್ನು ನೀವು ಬಲ್ಲಿ. ನಾನು ಅರಮನೆಗೆ ಹೋಗುವುದು ಅಪಾಯಕರ; ಅದು ಖಂಡಿತ. ಆದರೆ ನನ್ನ ಮುದ್ದು ಮಗುವು ಮರಣಶಯ್ಯೆಯಲ್ಲಿರಬೇಕಾದರೆ ಅವನನ್ನೊಮ್ಮೆ ಕಂಡು ಬಾರದಿರುವುದು ನ್ಯಾಯವೆ? ಆದರೂ ಜನ್ಮಭೂಮಿಯ ಸ್ವಾತಂತ್ರ್ಯವನ್ನು ಚೆಲ್ಲಿಕೊಡಲೆ? ಈಗೇನು ಮಾಡಲಿ?"

ರಜಪೂತ ವೀರರು ಯೋಚಿಸಿದರು; ಕೊನೆಗವರು ಹೇಳಿದರು:

"ಪ್ರಭು! ತಾವು ಇದುವರೆಗೆ ತೋರಿಸಿರುವ ಅಪ್ರತಿಮ ಸಾಹಸ! ಮಾಡಿದ ಅದ್ಭುತ ತ್ಯಾಗ! ಪ್ರದರ್ಶಿಸಿದ ದೇಶಭಕ್ತಿ! ಇವುಗಳನ್ನು ಕಂಡರಿಯದ ಮೂಢರೇ ನಾವು? ಪ್ರಸಂಗವು ಕಠಿಣವಾದುದು. ಯಾರಿಗಾದರೂ ಥಟ್ಟನೆ ನಿರ್ಧಾರಕ್ಕೆ ಬರಲು ಅಸಾಧ್ಯ. ತಾವು ತೆರಳಿ; ಒಮ್ಮೆ ಅರಮನೆಯನ್ನು ಹೊಕ್ಕು ಆ ನಮ್ಮ ಯುವರಾಜಕುಮಾರನ ಕಡೆಯ ಸಂದರ್ಶನ ಮಾಡಿ ಬನ್ನಿ. ದೇವರು ಕಾಪಾಡಲಿ."

ರಾಣಾನು ಒಬ್ಬ ನಂಬಿಕಸ್ಥ ಸೇವಕನೊಂದಿಗೆ ಅರಮನೆಯ ಕಡೆ ಹೊರಟನು; ಕತ್ತಲು ಕವಿಯುತ್ತಿತ್ತು. ಅರಮನೆಯ ಹೆಬ್ಬಾಗಿಲಿಗೆ ಬರುವಾಗ ಸರಿ ರಾತ್ರಿಯಾಗಿತ್ತು. ಎಲ್ಲೆಲ್ಲೂ ನಿಶ್ಶಬ್ದ.

"ನಿಲ್ಲು; ಯಾರಲ್ಲಿ ಬರುತ್ತಿರುವುದು ?" ಕೋಟೆ ಬಾಗಿಲಲ್ಲಿದ್ದ ಮೊಗಲಾಯಿ ಅಧಿಕಾರಿ ರಾಣನನ್ನು ತಡೆದನು

"ನಾನು; ರಾಣಾ ರಘುವೀರಸಿಂಹ! ಈ ರಾಜ್ಯದ ಅರಸ !" ರಾಣನು ಮೆಲ್ಲುದನಿಯಲ್ಲಿ ಹೇಳಿದನು.

"ಹಾಗಾದರೆ ನೀನು ನನ್ನ ಬಂಧಿಯಾದೆ." ಸುಭಾನಖಾನನು ಹೇಳಿದನು. "ಅಕ್ಬರ್ ಬಾದಷಹನ ಅಪ್ಪಣೆಯಂತೆ ನಿನ್ನನ್ನು ಕೈಸೆರೆ ಹಿಡಿದಿದ್ದೇನೆ" ಹೀಗೆಂದು ಹೇಳಿ ಸುಭಾನನು ಕಬ್ಬಿಣದ ಬೇಡಿಗಳನ್ನು ಹಿಡಿದು ರಾಣನೆದುರಿಗೆ ಬಂದು ನಿಂತನು.

ರಘುವೀರಸಿಂಹನು ಕ್ಷಣಕಾಲ ಯೋಚಿಸಿದನು. ತರುವಾಯ ಮೊಗಲಾಯಿ ಅಧಿಕಾರಿಯನ್ನು ಕುರಿತು ಹೇಳಿದನು:

"ಮೊಗಲ ಅಧಿಕಾರಿ! ನಿನ್ನ ಕರ್ತವ್ಯವನ್ನು ನೀನು ಮಾಡುವುದು ಸರಿ; ಆದರೆ ನಾನು ನಿನ್ನಲ್ಲಿ ಒಂದು ಬಿನ್ನಹವನ್ನು ಮಾಡಬಹುದೆ ?"

"ಏನದು ?" ಅಧಿಕಾರಿ ಕೇಳಿದನು.

"ನನ್ನ ಪ್ರೀತಿಯ ಕಂದನು ಕಾಯಿಲೆಯಿಂದ ನರಳಿ ಸಾವನ್ನು ಅಪ್ಪಿಕೊಳ್ಳುವುದರಲ್ಲಿದ್ದಾನೆ. ನಾನವನನ್ನು ಹೋಗಿ ನೋಡಿಬರಬಹುದೆ? ಅವನನ್ನೊಮ್ಮೆ - ಒಂದೇ ಒಂದು ಸಲ – ಕಡೆಯಸಲ - ನೋಡಿ ಹಿಂತಿರುಗಿ ಬರುತ್ತೇನೆ. ಆಗ ನೀನು ನನ್ನನ್ನು ಬಂಧಿಸಬಹುದು. ಇದು ನಿನಗೊಪ್ಪಿಗೆಯೋ? ವೀರ ರಜಪೂತನು ತನ್ನ ಮಾತನ್ನು ಮುರಿಯಲಾರನೆಂದು ನಾನು ನಿನಗೆ ಹೇಳಬೇಕಾದ ಅವಶ್ಯಕತೆಯಿದೆಯೆ !"

ಸುಭಾನಖಾನನ ಹೃದಯವು ಕರಗಿತು. ರಾಣನ ದೀನ ನುಡಿಗಳಿಂದ ಅವನಿಗೆ ದುಃಖವುಂಟಾಯಿತು. ಅವನು ಹೇಳಿದನು:

"ಆಗಲಿ ರಾಣಾ! ನಿನ್ನ ಮಾತಿನಲ್ಲಿ ನನಗೆ ನಂಬುಗೆಯುಂಟು; ಅರಮನೆಗೆ ಹೋಗಿ ಬಾ."

ರಾಣನು ಅವಸರದಿಂದ ಹೊರಟು ಅರಮನೆಗೆ ನಡೆದನು. ನೆಟ್ಟಗೆ ತನ್ನ ಕಂದನು ಮಲಗಿದ್ದ ಕೊಠಡಿಯನ್ನು ಪ್ರವೇಶಿಸಿದನು. ತನ್ನ ಪತ್ನಿಯನ್ನು ಕಂಡು ಮಗುವಿನ ದೇಹಸ್ಥಿತಿಯ ವಿಚಾರವನ್ನು ಕೂಲಂಕಷವಾಗಿ ವಿಚಾರಿಸಿಕೊಂಡನು. ಕುಮಾರನನ್ನು ಮನದಣಿಯ ತಬ್ಬಿಕೊಂಡು

ಮುದ್ದಾಡಿದನು ; ಅವನ ಗಲ್ಲಗಳ ಮೇಲೆ ಮುತ್ತಿಟ್ಟನು ಆಗನನ ಕಣ್ಣಿನಿಂದ ಶೋಕ ಬಿಂದುಗಳು ಉರುಳಿದುವು. ಆದರೂ ರಾಣನು ಆದಷ್ಟು ಬಗೆಯಲ್ಲಿ ತನ್ನ ಸಂತಾಪವನ್ನು ಅಡಗಿಸಿಕೊಂಡನು. ಪರಮಾತ್ಮ ನಲ್ಲಿ ಮೊರೆಯಿಟ್ಟನು; "ಹೇ ದೇವ ! ನನ್ನ ಈ ಏಕಮಾತ್ರ ಪುತ್ರನನ್ನು ಉಳಿಸಿಕೊಡಲಾರೆಯಾ ? ದೀನಬಂಧು ! ದಯೆತೋರಿ ಕಾಪಾಡು."

ಬಳಿಕ ರಾಣನು ಕೊಠಡಿಯನ್ನು ಬಿಟ್ಟು ಹೊರಗೆ ಹೊರಟನು.

"ಎಲ್ಲಿಗೆ ಹೊರಟಿರಿ ?" ರಾಣಿಯು ಕೇಳಿದಳು - ರಾಣನ ವರ್ತನೆ ಯನ್ನು ಅರಿಯಲಾರದೆ.

"ನಾನು ಮೊಗಲಾಯಿ ಅಧಿಕಾರಿಯ ಬಳಿ ಹೋಗುತ್ತಿದ್ದೇನೆ ಇಲ್ಲಿಗೆ ಬರುವಾಗ ನಾನವನ ಕೈ ಸೆರೆಯಾದೆ ಒಂದೇ ಒಂದರಕ್ಷಣ ಬಂದು ಕಂದನನ್ನು ಕಂಡು ಮುದ್ದಿಟ್ಟು ಬರುವೆನೆಂದು ಆತನನ್ನು ಒಡಂಬಡಿಸಿ ಬಂದಿರುವೆನು. ಮಾತಿನಂತೆ ನಡೆಯಬೇಕು. ಅಧಿಕಾರಿಯು ನನಗಾಗಿ ಕಾಯುತ್ತಿರುವನು. ಬಾದಷಹನು ಅವನಿಗಿಟ್ಟ ಕಟ್ಟಳೆಯನ್ನು ಅಧಿಕಾರಿಯು ನಡೆಸಬೇಕಲ್ಲವೆ ?

"ಆದರೆ........ಪ್ರಾಣೇಶ್ವರ ! ಈ ಮಗು........ಇದೋ ಅದೋ ಎನ್ನುವ ಹಾಗಿದೆ ಕಂದನ ಪರಿಸ್ಥಿತಿ ! ಈ ಸಮಯದಲ್ಲಿ ಅವನನ್ನೂ ನನ್ನನ್ನೂ ಅನಾಥರನ್ನಾಗಿ ಬಿಟ್ಟು ಹೊರಡುವಿರೆಲ್ಲಿಗೆ ?"

ಸಂತಾಪದಿಂದಲೂ - ಆಶ್ಚರ್ಯದಿಂದಲೂ ಕೇಳಿದಳು ರಾಣಿ.

"ಕಂದನನ್ನು ಕಾಯುವುದಕ್ಕೆ ಕರುಣಾಳು ಪರಮಾತ್ಮನಿಲ್ಲವೆ ?" ಒಡಕಿಲ್ಲದ ನಿರ್ಧಾರದಿಂದ ರಾಣನು ಕೇಳಿದನು ; ಆ ಅಧಿಕಾರಿಗೆ ನಾನು ವಚನ ಕೊಟ್ಟಿರುವೆನು; ಅದನ್ನು ಪರಿಪಾಲಿಸಲೇ ಬೇಕು."

ಧೀರ ರಮಣಿಯಾದರೂ ರಾಣನ ಪತ್ನಿ ಕೋಪಾವೇಶದಿಂದ ಕೂಡಿ ದಳು ಈ ರೀತಿ ತಮ್ಮ ಪ್ರಾಣವನ್ನು ಶತ್ರುವಿನ ವಶದಲ್ಲಿ ಒಪ್ಪಿಸುವಿ ರೇನು ? ಈಗ ಹೇಗೂ ಇಲ್ಲಿಗೆ ಬಂದಿರುವಿರಿ. ಈಗಲೇ ಹೊರಟು ಹೋಗಬೇಕೆಂದು ತಮ್ಮ ಸಂಕಲ್ಪವಿದ್ದರೆ ಅರಮನೆಯ ಹಿಂದೆ ಇರುವ ರಹಸ್ಯ ದ್ವಾರದಿಂದ ಹೊರಗೆ ಹೋಗಿ ಬಿಡಬಾರದೇತಕ್ಕೆ ?" ರಾಣಿಯು ಸೂಚಿಸಿದಳು.

"ಏನು ?" ರಾಣನು ಕೇಳಿದನು, "ನನ್ನ ಅರಮನೆಯಿಂದಲೇ ನಾನು ಓರ್ವ ಅಧಮ ಕಳ್ಳನಂತೆ ತಲೆ ತಪ್ಪಿಸಿಕೊಂಡು ಓಡಿಹೋಗಲೇ ? ರಜಪೂತ ವೀರ ಪತ್ನಿಯಾದ ನಿನ್ನ ಬಾಯಿಂದ ಇಂತಹ ಮಾತುಗಳು ಹೊರಡುವುದು ನ್ಯಾಯವೆ ? ಗೌರವವೆ ? ಏನು ಹೇಳಿದೆ ರಾಣಿ ? 'ಓಡಿ ಹೋಗು' ಛೆ ! ಸತ್ಯಕ್ಕೂ—ನ್ಯಾಯಕ್ಕೂ ಹೆದರಿ ನಡೆಯದ ಬಾಳು ಅದೊಂದು ಬಾಳೆನಿಸೀತೆ ? ಪ್ರಪಂಚವೇ ತಲೆಕೆಳಗಾಗಲಿ ; ಕೊಟ್ಟ ವಚನವನ್ನು ಪರಿಪಾಲಿಸುವುದಕ್ಕಿಂತ ಶುದ್ಧ ರಜಪೂತ ವೀರನಿಗೆ ಮತ್ತೊಂದು ಹಿರಿಯ ಕರ್ತವ್ಯವಿಲ್ಲ."

ಇದರ ಮೇಲೆ ರಾಣಿಯು ಏನೊಂದು ಮಾತನ್ನು ಹೇಳಲೂ ಅಸಮರ್ಥಳಾದಳು. ರಾಣನು ಅಲ್ಲಿಂದ ಹೊರಟು ನೇರವಾಗಿ ಕೋಟೆಯ ಬಾಗಿಲಿಗೆ ಬಂದು ಸೇರಿದನು. ಅಧಿಕಾರಿಯನ್ನು ಕಂಡು ಹೇಳಿದನು;

"ಖಾನಸಾಹೇಬರೇ ! ಮರಣದ ಬಾಯಿಗೆ ತುತ್ತಾಗುತ್ತಿರುವ ನನ್ನ ಕುಮಾರನನ್ನು ಕಟ್ಟಕಡೆಯ ಬಾರಿ ನೋಡಿ ಬರುವುದಕ್ಕೆ ಅಪ್ಪಣೆಯನ್ನು ನೀಡಿದ ನಿಮಗೆ ನನ್ನ ಅನಂತ ವಂದನೆಗಳು. ಇನ್ನು ನಾನು ನಿಮ್ಮವನಾಗಿದ್ದೇನೆ. ನನ್ನನ್ನು ನೀವು ನಿಮ್ಮಿಷ್ಟದಂತೆ ಬಂಧಿಸಬಹುದು. ರಜಪೂತ ವೀರನ ನಡೆ ನುಡಿ ಎರಡೂ ಒಂದೇ ಎಂಬುದಕ್ಕೆ ಇದೇ ಸಾಕ್ಷಿ."

ಸುಭಾನಖಾನನಿಗೆ ಪರಮಾನಂದವುಂಟಾಯಿತು. ಆಶ್ಚರ್ಯಪರವಶನಾದ ಅವನು ಮಾತು ಬಿಗಿದು ಮುಗ್ಧನಾದನು ಹಲವು ಕ್ಷಣಗಳ ಪರ್ಯಂತ ಮೌನವಾಗಿದ್ದು ತದನಂತರ ರಾಣನನ್ನು ಕುರಿತು ಹೇಳಿದನು: "ಧನ್ಯಾತ್ಮ ರಾಣಾ ! ರಜಪೂತರ ಧೈರ್ಯ—ಗೌರವಗಳ ವಿಚಾರ ನಾನು ಕಿವಿಯಲ್ಲಿ ಕೇಳಿದ್ದೆನು ಮಾತ್ರ. ಆದರೆ ಇಲ್ಲಿ—ನನ್ನಲ್ಲಿ—ಆ ಧೈರ್ಯ, ವೀರ್ಯ, ಶೌರ್ಯ—ಪರಾಕ್ರಮ— ಸತ್ಯಸಂಕಲ್ಪ—ಇವೆಲ್ಲ ಸದ್ಗುಣಗಳ ಪ್ರತ್ಯಕ್ಷ ಸಜೀವ ದೃಷ್ಟಾಂತವನ್ನು ನೋಡುತ್ತಿರುವೆನಲ್ಲವೆ ? ನಿನ್ನಂತಹ ಗುಣವಂತನನ್ನು ಬಂಧಿಸಲು ನನ್ನ ಮನಸೊಪ್ಪದು."

"ಆದರೆ............ಅಧಿಕಾರಿ ! ನಿಮ್ಮ ಬಾದಷಹರ ಅಪ್ಪಣೆಯನ್ನು ನೀವು ನೆರವೇರಿಸಬೇಕಲ್ಲವೆ ? ಅದು ನಿಮ್ಮ ಆದ್ಯ ಕರ್ತವ್ಯವಲ್ಲವೆ ?"

"ಕರ್ತವ್ಯ ! ನಿಜ;" ಅಧಿಕಾರಿ ಹೇಳಿದನು; "ಇಂತಹ ಶೋಕಮಯ ಸಮಯದಲ್ಲೂ ನೀನು ಆಚರಿಸಿದ ಸತ್ಯಸಂಧತೆ...............ಹೇ ಘನವಂತ ರಾಣ ! ಇದು ಕಲ್ಲಿನ ಎದೆಯನ್ನೂ ಕರಗಿಸಬಲ್ಲುದು. ಬಾದಷಹನ ಕಟ್ಟಳೆಯನ್ನು ನಾನು ನೆರವೇರಿಸಬೇಕು; ನಿಜ ಆದರೆ, ಅದಕ್ಕೂ ಹೆಚ್ಚಿನ ಕಟ್ಟಳೆಯೊಂದಿರುವುದು; ಅದು ಜಗದೀಶನ ಕಟ್ಟಳೆ. ಅದನ್ನು ನಾನು ಮರೆಯಲೆ? ನಿನ್ನನ್ನು ಬಂಧಿಸುವಷ್ಟು ಅಧಮನು ನಾನಲ್ಲ; ರಾಣ ! ಹೋಗು; ನಿನ್ನಿಷ್ಟದಂತೆ ಹೋಗು; ನಿನ್ನ ಮನಬಂದಲ್ಲಿಗೆ ಹೋಗು; ನಿನ್ನ ಮಿತ್ರರೊಡನೆ ಕಲೆತು ಸಂತೋಷವಾಗಿರು."

ಅಧಿಕಾರಿಯು ಈ ಮಾತುಗಳನ್ನು ಕೇಳಿ ಈಗ ರಾಣನು ಕೌತುಕದಲ್ಲಿ ಮುಳುಗಿಹೊದನು. ಸುಭಾನಖಾನನ ಮಾತುಗಳು ರಾಣನ ಹೃದಯದಲ್ಲಿ ಪ್ರೇಮ ಸುಧಾರಸವನ್ನು ತುಂಬಿತು. ಆತನನ್ನು ಕುರಿತು ರಾಣನು ಹೇಳಿದನು :

"ಖಾನಸಾಹೇಬರೆ ! ಇಂದು ನೀವು ನನ್ನ ಪ್ರಾಣವನ್ನು ರಕ್ಷಿಸಿದಿರಿ ಭಗವಂತನ ಕೃಪೆಯಿಂದ ಇದಕ್ಕೆ ಪ್ರತ್ಯುಪಕಾರ ಮಾಡುವ ಪುಣ್ಯವು ನನಗೆ ಶೀಘ್ರದಲ್ಲಿಯೇ ಒದಗಲಿ ಎಂಬುದೀಗ ನನ್ನಪ್ರಾರ್ಥನೆ."

ರಾಣನು ಅಲ್ಲಿಂದ ಹೊರಬಿದ್ದು ಆರಾವಳಿಯ ಕಡೆ ಹೊರಟು ತವಕದಿಂದ ಕಾಯುತ್ತಿದ್ದ ತನ್ನ ಅನು ಚರರನ್ನು ಮತ್ತೆ ಸೇರಿಕೊಂಡನು.

ಅತಿ ಶೀಘ್ರದಲ್ಲಿಯೇ ಮೊಗಲಾಯಿ ಗುಪ್ತಚಾರರಿಂದ ರಾಣನು ಅರಮನೆಯನ್ನು ಹೊಕ್ಕು ಮತ್ತೆ ತಪ್ಪಿಸಿಕೊಂಡು ಹೋದ ವಿಚಾರವು ಮೊಗಲ ಸೇನಾನಾಯಕನಿಗೆ ತಿಳಿಯಿತು. ಅವನು ಸುಭಾನಖಾನನನ್ನು ಬರಮಾಡಿಕೊಂಡು :

"ನಿನ್ನ ವರ್ತನೆಯ ಬಗ್ಗೆ ನೀನೇನು ಹೇಳುತ್ತೀಯೆ ?" ಎಂದು ಕೇಳಿದನು.

ಯಾವುದನ್ನೂ ಮುಚ್ಚುಮರೆ ಮಾಡದೆ ಆ ವೀರ ಸುಭಾನಖಾನನು ನಡೆದದ್ದನ್ನು ನಡೆದಂತೆಯೇ ಹೇಳಿದನು. ಅಷ್ಟುಮಾತ್ರವಲ್ಲ; ತಾನು ಆಚರಿಸಿದ ನೀತಿಯು ಅತ್ಯುತ್ತಮವೂ, ದೈವಸಮ್ಮತವೂ ಆದುದೆಂದು ಅವನು ಹೆಮ್ಮೆಯಿಂದ ನುಡಿದನು.

"ಹಾಗೆಂದು ಹೇಳಲು ನಿನ್ನ ಎದೆಗಾರಿಕೆಯಾದರೂ ಎಷ್ಟರಮಟ್ಟಿನದು ಖಾನ ?" ಸೇನಾನಾಯಕನು ಘರ್ಜಿಸಿದನು; "ಬಾದಷಹರ ಉಪ್ಪು ತಿಂದು

ನೀನವರಿಗೆರಡು ಬಗೆದೆಯಲ್ಲವೆ? ಚಕ್ರವರ್ತಿಯ ಪರಮ ವೈರಿಯಾದ ರಘುವೀರಸಿಂಹನನ್ನು ಕೈಸೆರೆ ಹಿಡಿಯಲು ನಮ್ಮವರು ಹಗಲಿರುಳೂ ಬಾಯಿ ಬಾಯಿ ಬಿಡುತ್ತಿದ್ದಾರೆ. ಹೀಗಿರುವಾಗ ನೀನು-ರಾಜದ್ರೋಹಿ! ರಾಣನು ಕೈಗೆ ಸಿಕ್ಕಾಗ ಅವನನ್ನು ಸೆರೆಹಿಡಿಯದೆ ಹೋಗಗೊಟ್ಟೆಯಲ್ಲವೆ? ಈ ಮಹಾ ಪರಾಧಕ್ಕಾಗಿ ನಿನಗೆ ಮರಣದಂಡನೆಗಿಂತ ಬೇರಾವ ಶಿಕ್ಷೆಯು ಸರಿಯೆನಿಸ ಬಲ್ಲುದು?"

"ಆ ದಂಡನೆಯನ್ನು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ. ನನ್ನನ್ನು ಸೃಷ್ಟಿಸಿದ ಒಡೆಯನು ನನ್ನ ಕೃತ್ಯವನ್ನು ಒಪ್ಪದಿರನು" ಸುಭಾ. ಖಾನನು ನಮ್ರತೆಯಿಂದ ತಲೆತಗ್ಗಿಸಿ ನುಡಿದನು.

ತನ್ನ ಮೇಲೆ ವಿಶ್ವಾಸವಿಟ್ಟು - ತನ್ನಲ್ಲಿ ಸ್ನೇಹವನ್ನು ಬಯಸಿ, ತನ್ನನ್ನು ಬಂಧನ ವಿಮುಕ್ತನನ್ನಾಗಿ ಮಾಡಿದ ಸುಪ್ರಮಾನಸನಾದ ಸುಭಾನಖಾನನಿಗೆ ಮೊಗಲ ಸೇನಾನಾಯಕನು ಮರಣದಂಡನೆಯನ್ನು ವಿಧಿಸಿದ ಸಮಾಚಾರವು ರಾಣಾ ರಘುವೀರಸಿಂಹನಿಗೆ ಮುಟ್ಟಿತು.

ಆಕ್ಷಣವೇ ರಾಣನು ಮೊಗಲರಾಯ ಬಿಡಾರಕ್ಕೆ ನಡೆದು ಸೇನಾ ನಾಯಕನ ಮುಂದೆ ನಿಂತು ಹೇಳಿದನು:

"ಸೇನಾಧಿಪತಿ! ಇದೋ ರಾಣಾ ರಘುವೀರಸಿಂಗನು ತಮ್ಮ ಮುಂದೆ ಬಂದು ನಿಂತಿರುವನು ನನ್ನನ್ನು ತಾವು ಬಂಧಿಸಿ ಬಾದಷಹನ ಬಳಿ ಕೊಂಡೊಯ್ಯಬಹುದು. ಆದರೆ ಈ ಅಧಿಕಾರಿ ನಿಸ್ಪೃಹನು ಎಂದು ಹೇಳದೆ ವಿಧಿಯಿಲ್ಲ. ಅವರನ್ನು ಬಂಧನದಿಂದ ಬಿಡಿ. ಅವರನ್ನು ಮರಣದಂಡನೆಗೆ ಗುರಿಮಾಡ ವುದು ಧರ್ಮವಲ್ಲ."

"ಹಾಗೋ? ಧರ್ಮಾಧರ್ಮಗಳನ್ನು ನಿನ್ನಿಂದ ತಿಳಿಯತಕ್ಕ ಆಗತ್ಯವಿಲ್ಲ ರಾಣಾ! ಹೇಗೂ ಸಮಯಕ್ಕೆ ಸರಿಯಾಗಿ ನೀನೇ ಬಂದೆ: ಒಳಿತಾಯಿತು; ಈ ಖಾನನೊಂದಿಗೆ ನೀನೂ ಮರಣದಂಡನೆಗೆ ಸಿದ್ಧನಾಗು. ನಿನ್ನನ್ನೇಕೆ? ನಿನಗೆ ಪ್ರತಿಯಾಗಿ ನಿನ್ನ ರುಂಡವನ್ನೇ ಬಾದಷಹನ ಬಳಿ ಕಳುಹಿಸಿಕೊಡುತ್ತೇನೆ"

ಸೇನಾನಾಯಕನ ಈ ಕ್ರೌರ್ಯದ ಮಾತನ್ನು ಕೇಳಿ ರಾಣನು ಆಗ್ರಹದಿಂದ ಹೇಳಿದನು:

"ಸೇನಾಧಿಪತಿ! ಅಧಿಕಾರ ಸೂತ್ರವು ಕೈಲಿದ್ದರೆ ತಲೆ ಹೋಗುವುದು - ಬರುವುದು ತಿಳಿಯದಿರುವುದು ಸಹಜ. ಮರಣಕ್ಕೆ ಅಂಜುವ ಹೇಡಿಯು ಈ ರಾಣನೆಂದು ತಿಳಿಯುವ ನಿಮ್ಮ ಮೂಢತನಕ್ಕೇನೆಂದು ಹೇಳಲಿ? ಸಾವಿನ ದವಡೆಯಲ್ಲಿ ಸಿಲುಕಿ ಬಿದ್ದಾಗಲೂ ಶುದ್ಧ ರಜಪೂತ ವೀರರು ಹೆದರಿ ಕೆಳಗುರುಳತಕ್ಕವರಲ್ಲ. ಬಾದಹಹನಿಗೆ ಬೇಕಾದುದು ನಾನೋ - ನನ್ನ ತಲೆಯೋ ಅದನ್ನು ಸ್ಪಷ್ಟವಾಗಿ ವಿಚಾರಿಸಿ ತಿಳಿದುಕೊಳ್ಳಿ."

ಮರುದಿನ ಅರುಣೋದಯಕ್ಕೆ ಸರಿಯಾಗಿ ಶೂಲವು ಸಿದ್ಧವಾಯಿತು. ಬಂಧಿತರಾದ ಸುಭಾನಖಾನನನ್ನೂ ರಾಣ ರಘುವೀರಸಿಂಹನನ್ನೂ ಮೊಗಲ ಶಿಪಾಯಿಗಳು ಅಲ್ಲಿಗೆ ಕರೆತಂದರು. ಈ ಇಬ್ಬರು ವೀರಶ್ರೇಷ್ಠರು -(ಅಲ್ಲ; ಅಲ್ಲ; ಸೈನಿಕರ ದೃಷ್ಟಿಯಲ್ಲಿ ರಾಜದ್ರೋಹಿಗಳು) ಶೂಲಕ್ಕೇರುವುದನ್ನು ನೋಡುವ ಸಲುವಾಗಿ ಸಾವಿರಾರು ಮೊಗಲ ಸೈನಿಕರು ಕಿಕ್ಕಿರಿದು ನೆರೆದಿದ್ದರು. ಸಂಕೇತವನ್ನು ಕಾಯುತ್ತ ಶಿರಚ್ಛೇದನ ಮಾಡಲು ಕತ್ತಿಗಳನ್ನು ಹಿರಿದು ಇಬ್ಬರು ಕೊಲೆ ಪಾತಕರು ಕಾದಿದ್ದರು.

ಅದೇ ಸಮಯಕ್ಕೆ ಸರಿಯಾಗಿ ಅನತಿ ದೂರದಲ್ಲಿ ಧೂಳಿಯ ರಾಶಿಯು ಮೇಲೇಳುತ್ತಿದ್ದುದು ಕಂಡುಬಂದಿತು. ಸೈನಿಕ ತಂಡವೊಂದು ಶೂಲದ ಕಡೆ ಓಡೋಡಿ ಬರುತ್ತಿತ್ತು. ಆ ತಂಡದ ನಾಯಕನು 'ಅಕ್ಬರ್ ಬಾದಷಹ'ನೇ ಎಂದು ಬೇರೆ ಹೇಳಬೇಕೆ?

ನೆರೆದವರೆಲ್ಲ ಆಶ್ಚರ್ಯದಿಂದ ಸ್ತಂಭೀಭೂತರಾದರು. ಸೇನಾಧಿಪತಿಯು ಬಾದಷಹನನ್ನು ನಮ್ರತೆಯಿಂದ ಎದಿರ್ಗೊಂಡನು. ಬಾದಷಹನು ಅವನನ್ನು ನಿರ್ಲಕ್ಷಿಸಿ ಸುಭಾಖಾನನಿದ್ದೆಡೆಗೆ ಬಂದು ಸೇರಿದನು. ಆತನನ್ನು ನೋಡಿ ಬಾದಷಹನು ಪ್ರಸನ್ನವದನನಾಗಿ ಹೇಳಿದನು:

"ಖಾನಸಾಹೇಬ! ನೀನು ತಪ್ಪಿತಸ್ಥನಲ್ಲ: ಶುದ್ಧ ವೀರ ಯೋಧನಿಗೆ ಅವನು ಶೋಕಕ್ಕೀಡಾದ ಸಮಯದಲ್ಲಿ ಸಂತಾಪವನ್ನು ತೋರಿಸುವುದು ಪಾಪವಲ್ಲ; ರಾಜದ್ರೋಹವಲ್ಲ; ನಿನ್ನ ಕೃತ್ಯವು ಹೇಯವಾದುದಲ್ಲ; ನಿನಗಿಟ್ಟ ಕಟ್ಟಳೆಯನ್ನು ಸಮಯೋಚಿತವಾಗಿ ನೀನು ನಿರ್ಲಕ್ಷಿಸಿದೆ. ನಿಜ; ಆದರೂ ಘನವಾದ ಉದ್ದೇಶದಿಂದ ನೀನು ಮಾಡಿದ ಅಲ್ಪವಾದ ತಪ್ಪನ್ನು ನಾನು



ಶಿರಚ್ಛೇದನ ಮಾಡಲು........ಕಾದಿದ್ದರು

ಮನಸಾರೆ ಮನ್ನಿಸಿರುತ್ತೇನೆ."

ಸುಭಾನಖಾನನು ಕೂಡಿಂದ ಕೆಳಗಿಳಿದನು. ಚಕ್ರವರ್ತಿಯನ್ನು ಗೌರವದಿಂದ ವಂದಿಸಿದನು.

ಬಾದಷಹನು ಹಸನ್ಮುಖನಾಗಿ ರಘುವೀರಸಿಂಹನನ್ನು ನೋಡಿ ಹೇಳಿದನು:

"ರಾಣಾ ! ನಾನು ಯಾವಾಗಲೂ ರಜಪೂತವೀರರ ಸ್ನೇಹಿತನೆಂದು ತಿಳಿ; ಅವರನ್ನು ನಯದಿಂದಲೂ ಪ್ರೀತಿಯಿಂದಲೂ ಒಲಿಸಿ ನನ್ನವರನ್ನಾಗಿ ಮಾಡಿಕೊಳ್ಳಬೇಕೆಂಬುದೇ ನನ್ನ ನೀತಿ. ನಿನಗೆ ಅಪ್ರತಿಮ ಸೇವೆಯನ್ನು ಸಲ್ಲಿಸಿದ ಈ ಸುಭಾನಖಾನನ ಪ್ರಾಣವನ್ನುಳಿಸಲು ನೀನು ಮಾಡಿದ ಆತ್ಮತ್ಯಾಗ - ತೋರಿದ ಅಪೂರ್ವ ಧೈರ್ಯ - ಇವುಗಳನ್ನು ನಾನು ನನ್ನ ಹೃದಯಾಂತರಾಳದಿಂದ ಮೆಚ್ಚಿ ನಿನ್ನನ್ನು ಗೌರವಿಸುತ್ತೇನೆ. ಈ ಪೃಥ್ವಿಯಲ್ಲಿ ನಿನ್ನಂಥ ಶುದ್ಧಾತ್ಮರನ್ನು ಕಾಣುವುದು ಅತ್ಯಪರೂಪ."

ರಘುವೀರಸಿಂಹನು ಅಕ್ಬರ್ ಬಾದಷಹನಿಗೆ ವಿನಯಪೂರ್ವಕಪ್ರಣಾಮಗಳನ್ನು ಮಾಡಿ ಹೇಳಿದನು:

"ಚಕ್ರವರ್ತಿ ! ಇಷ್ಟೊಂದು ವರ್ಷಗಳಿಂದ ಎಷ್ಟೆಷ್ಟು ಹೆಣಗಾಡಿದರೂ ನಿಮ್ಮ ಸೈನಿಕರು ನನ್ನನ್ನು ಗೆಲ್ಲಲಾರದೆ ಹೋದರು. ಆದರೆ ಇಂದು - ತಾವು - ಒಂದರಕ್ಷಣದಲ್ಲಿ - ತಮ್ಮ ಅಪೂರ್ವ ಪ್ರೀತಿವಾತ್ಸಲ್ಯಗಳಿಂದ - ಮೃದುಮಧುರ ವಾಣಿಯಿಂದ - ದಯಾಳು ಮನೋಭಾವದಿಂದ - ನನ್ನ ಹೃದಯವನ್ನು ಗೆದ್ದು ಸೂರೆಗೊಂಡಿರುವಿರಿ. ನಿಜವಾಗಿಯೂ ತಾವು ಧೈರ್ಯಶಾಲಿಗಳೂ - ಬುದ್ಧಿಕುಶಲರೂ - ಆಗಿ ಈ ವಿಶಾಲ ಸಾಮ್ರಾಜ್ಯವನ್ನು ಆಳಲು ಅರ್ಹರಾದ ಸಾಮ್ರಾಟರು ಮಾತ್ರವಲ್ಲ ; ಕೋಟ್ಯಾನುಕೋಟಿ ಜನರ ಹೃದಯವನ್ನು ಸೂರೆಗೊಂಡ ಸಾರ್ವಭೌಮರು ತಾವು ! ಇಂದಿನಿಂದ ನಾನು ಎಂದೆಂದಿಗೂ ತಮ್ಮವನೇ ಎಂದು ಪ್ರತ್ಯಕ್ಷವಾಗಿ ಹೇಳಬೇಕೆ ?"

ವೀರ ಯೋಧರಾದ ಬಾದಷಹನೂ - ರಾಣನೂ ಒಬ್ಬರನ್ನೊಬ್ಬರು ಪ್ರೇಮಾತಿಶಯದಿಂದ ತಬ್ಬಿಕೊಂಡರು. ಅಂದಿನಿಂದ ಅವರು ಒಬ್ಬರಿಗೊಬ್ಬರು ಪರಮ ಪ್ರೀತಿಪಾತ್ರರಾದ ಮಿತ್ರರಾದರು.

೧೦ ರಾಜಕುಮಾರಿಯನ್ನು ಹುಡುಕಿದ್ದು

ಪ್ರಭಾಕರವರ್ಧನನು ಸ್ಥಾನೇಶ್ವರದ ಅರಸನಾಗಿದ್ದನು. ಅವನು ಚಕ್ರವರ್ತಿ ಗುಪ್ತರ ವಂಶಕ್ಕೆ ಸೇರಿದವನು. ಯಾವ ಪ್ರಖ್ಯಾತ ಪವಿತ್ರ ಕುರುಕ್ಷೇತ್ರದಲ್ಲಿ ಶ್ರೀಕೃಷ್ಣ ಭಗವಾನನು ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದನೋ ಆ ಕುರುಕ್ಷೇತ್ರದ ಬಳಿಯಲ್ಲೇ ಪುರಾತನ ಸ್ಥಾನೇಶ್ವರ ನಗರವು ಮನೋಹರವಾಗಿ ಕಂಗೊಳಿಸುತ್ತಿತ್ತು.

ಯಾವ ರಾಜನು ತನ್ನ ರಾಜ್ಯವನ್ನು ನೀತಿಯಿಂದಲೂ ಪ್ರೀತಿಯಿಂದಲೂ ನ್ಯಾಯದಿಂದಲೂ ಧರ್ಮದಿಂದಲೂ ಆಳುವನೋ ಆ ರಾಜನೇ ಉತ್ತಮ ಪ್ರಭು ಎನಿಸಿಕೊಳ್ಳುವನು. ಪ್ರಭಾಕರವರ್ಧನನ ಆಳ್ವಿಕೆ ಕಾಲದಲ್ಲಿ ಪ್ರಜೆಗಳು ಸುಖ ಸಂತೋಷ ಸಮೃದ್ಧಿಯಿಂದ ಕೂಡಿ ಆನಂದಮಯ ಬಾಳುವೆಯನ್ನು ನಡೆಸುತ್ತಿದ್ದರು. ರಾಜನಿಗೆ ಇಬ್ಬರು ಕುಮಾರರಿದ್ದರು. ಅವರಲ್ಲಿ ರಾಜ್ಯವರ್ಧನನೇ ಹಿರಿಯವನು; ಹದಿನಾರು ವಯಸ್ಸಿನ ಹರ್ಷವರ್ಧನನೇ ಕಿರಿಯವನು. ರಾಜ್ಯಶ್ರೀ ಎಂಬ ತನ್ನ ಕುಮಾರಿಯನ್ನು ಮಹಾರಾಜನು ಕನೋಜದ ಅರಸನಿಗೆ ಕೊಟ್ಟು ವಿವಾಹ ಮಾಡಿದ್ದನು.

ರಾಜನ ವೃದ್ಧಾಪ್ಯ ದೆಸೆಯಲ್ಲಿ ಹೂಣರು ಅವನ ರಾಜ್ಯಕ್ಕೆ ಮುತ್ತಿಗೆ ಹಾಕಿ ಅಲ್ಲೋಲಕಲ್ಲೋಲವನ್ನೆಬ್ಬಿಸಿ ಬಹಳವಾಗಿ ತೊಂದರೆ ಕೊಟ್ಟರು. ಆಗ ರಾಜನು ವೈರಿಗಳನ್ನು ಸದೆಬಡಿಯಲು ಯುವರಾಜ ರಾಜ್ಯವರ್ಧನನನ್ನು ಒಂದು ಬಲವಾದ ಸೈನ್ಯದೊಂದಿಗೆ ಉತ್ತರ ದಿಕ್ಕಿಗೆ ಕಳುಹಿಸಿಕೊಟ್ಟನು. ರಾಜ್ಯವರ್ಧನನು ವೈರಿಗಳೊಂದಿಗೆ ಯುದ್ಧ ಮಾಡುತ್ತಿದ್ದ ವೇಳೆಯಲ್ಲಿ ಪ್ರಭಾಕರ ಮಹಾರಾಜನು ಕಾಯಿಲೆಯಿಂದ ಮಲಗಿ ಇದ್ದಕ್ಕಿದ್ದಂತೆ ಕಾಲವಶನಾದನು. ಆಗ ರಾಜ್ಯವರ್ಧನನು ಸಮೀಪದಲ್ಲಿ ಇಲ್ಲದುದರಿಂದ ಕಿರಿಯವನಾದ ಹರ್ಷವರ್ಧನನೇ ತನ್ನ ತಂದೆಯ ಅಂತ್ಯಸಂಸ್ಕಾರಗಳನ್ನು ವಿಧಿವತ್ತಾಗಿ ಮುಗಿಸಿಬಿಟ್ಟನು. ಯುದ್ಧದಲ್ಲಿ ಜಯಶೀಲನಾಗಿ ರಾಜಧಾನಿಗೆ ಹಿಂತಿರುಗಿದ ಯುವರಾಜನು ತನ್ನ ಜನಕನ ಮರಣವಾರ್ತೆಯನ್ನು ಕೇಳಿ ಅತ್ಯಂತ ಚಿಂತಾಕ್ರಾಂತನಾದನು.

ರಾಜಕುಮಾರರಿಬ್ಬರೂ ಪಿತನ ಮರಣದಿಂದುಂಟಾದ ದುಃಖದಲ್ಲಿ
ಮುಳುಗಿ ಕುಳಿತಿರುವ ವೇಳೆಯಲ್ಲಿ ಕನೌಜದಿಂದ ಒಬ್ಬ ದೂತನು ಅತ್ಯವ
ಸರದಿಂದ ಅಲ್ಲಿಗೆ ಬಂದು ಸೇರಿದನು.

"ಏನು ವರ್ತಮಾನ?" ರಾಜ್ಯವರ್ಧನನು ದೂತನನ್ನು ಚಿಂತಾತುರ
ನಾಗಿ ಕೇಳಿದನು. "ನನ್ನ ಪ್ರಿಯತಮ ಸಹೋದರಿ ಸೌಖ್ಯವಾಗಿರುವಳೇ?
ಹೇಳು? ಬೇಗ ಹೇಳು."

"ಯುವರಾಜರಿಗೇನೆಂದು ಹೇಳಲಿ? ನಾನೊಬ್ಬ ಅಭಾಗ್ಯ!" ದೂತನು
ಖಿನ್ನವದನನಾಗಿ ತಲೆ ತಗ್ಗಿಸಿ ನೆಲವನ್ನು ನೋಡುತ್ತ ಮೆಲುದನಿಯಲ್ಲಿ ಹೇಳಿ
ದನು

"ಹೇಳಯ್ಯ......ಬೇಗ ಹೇಳು. ನೀನು ನಿಧಾನಿಸಿದಷ್ಟು ನನಗೆ
ವ್ಯಾಕುಲವು ಹೆಚ್ಚುತೊಡಗಿದೆ ಬೇಗ ಹೇಳು......ರಾಜ್ಯಶ್ರೀ ಸೌಖ್ಯ
ವಾಗಿರುವಳೇ?"

ದೂತನು ಹೇಳತೊಡಗಿದನು:

"ತಮ್ಮ ಪೂಜ್ಯಪಿತರು ಕಾಲವಶರಾದ ವೃತ್ತಾಂತವು ಒಬ್ಬ ಸೇವ
ಕನ ಮೂಲಕ ನಮ್ಮ ಮಹಾರಾಜರಿಗೆ ಮುಟ್ಟಿತು. ಬಳಿಯಲ್ಲೇ ಇದ್ದ
ರಾಜ್ಯಶ್ರೀ ಮಹಾರಾಣಿಯವರು ಇದನ್ನು ಕೇಳಿದ ಒಡನೆಯೇ ಮೂರ್ಛೆ
ಹೋದರೆಂದು ಹೇಳಬೇಕೆ? ನಮ್ಮ ಮಹಾರಾಜರು ಆಕೆಯನ್ನು ಸಂತೈಸಲು
ಎಷ್ಟೋ ಶ್ರಮ ಪಟ್ಟರು."

"ಹೋಗಲಿ; ಇದಕ್ಕೂ ಹೆಚ್ಚಿನ ಅನರ್ಥವೇನೂ ಆಗಲಿಲ್ಲವಲ್ಲ?"
ಹರ್ಷವರ್ಧನನು ತವಕದಿಂದ ಕೇಳಿದನು

"ಮಾಳವದ ಅರಸನಾದ ದೇವಗುಪ್ತನಿಗೆ ನಮ್ಮ ಮಹಾರಾಜರಲ್ಲಿ
ಬಹುಕಾಲದಿಂದ ದ್ವೇಷವಿತ್ತೆಂಬುದನ್ನು ತಾವು ಬಲ್ಲಿರಷ್ಟೆ?"

"ಬಲ್ಲೆ; ಅವನ ದುರ್ವರ್ತನೆಗಳಿಗಾಗಿ ನನ್ನ ಪೂಜ್ಯ ಪಿತರು ಅವನನ್ನು
ಒಂದೆರಡಾವರ್ತಿ ದಂಡಿಸಿರುವರು."

"ಅದಕ್ಕಾಗಿ ಪ್ರತೀಕಾರವನ್ನು ಮಾಡಲು ಸಮಯಕ್ಕೆ ಹೊಂಚು
ಹಾಕುತ್ತಿದ್ದನು - ಮಾಳವದ ಅರಸ," ದೂತನು ಹೇಳಿದನು "ಸೈನಿಕರು
ಎಚ್ಚರವಿಲ್ಲದ ವೇಳೆಯನ್ನರಿತು ನಗರದ ಮೇಲೆ ದಂಡೆತ್ತಿ ಬಂದ ದೇವಗುಪ್ತ."

'ದಂಡೆತ್ತಿ ಬಂದು ಮುತ್ತಿಗೆ ಹಾಕಿದನೋ ?" ಹರ್ಷವರ್ಧನನು ಕಾತುರತೆಯಿಂದ ಕೇಳಿದನು.

"ಮುತ್ತಿಗೆ ಹಾಕಿದುದು ಮಾತ್ರವಲ್ಲ; ನಗರವನ್ನು ವಶಪಡಿಸಿಕೊಂಡು ಅರಮನೆಯನ್ನು ಪ್ರವೇಶಿಸಿದನು. ರಾಜಪರಿವಾರದವರೆಲ್ಲರೂ ತಮ್ಮ ಪೂಜ್ಯ ಪಿತೃವಿನ ಮರಣವನ್ನು ಕುರಿತು ಸಂತಾಪದಲ್ಲಿ ಮುಳುಗಿದ್ದರು. ಆ ಸಂಕಟ ಸಮಯದಲ್ಲಿ ದೇವಗುಪ್ತನು ನಮ್ಮ ಮಹಾರಾಜರನ್ನು ಕೊಲೆಮಾಡಿದನು."

ದೂತನು ದುಃಖವನ್ನು ತಡೆಯಲಾರದೆ ಗೋಳೋ ಎಂದು ಅತ್ತುಬಿಟ್ಟನು.

"ಕೊಲೆ!" ಹರ್ಷವರ್ಧನನು ಕ್ರೋಧಾವೇಶದಿಂದ ಘೀಳಿಟ್ಟನು. "ಹಾ! ನನ್ನ ಪ್ರೀತಿಪಾತ್ರ ಸಹೋದರಿ! ನಿನಗಿಂತಹ ಸಹನಾತೀತ ಸಂಕಟವು ಪ್ರಾಪ್ತವಾಯಿತೇ? ಅದೂ ನಿನ್ನ ಈ ಕಿರಿಯ ವಯಸ್ಸಿನಲ್ಲಿ! ಹಾಯ್! ಹಾಯ್! ದುರ್ದೈವವೇ!"

ಹರ್ಷವರ್ಧನನು ಕಣ್ಣೀರು ಕಾಲುವೆಯನ್ನು ಹರಿಸಿದನು.

"ಪ್ರಭು! ಇಷ್ಟು ಮಾತ್ರವಲ್ಲ ;………….…"

"ಹಾಂ! ಇನ್ನೇನು ಅವಳನ್ನೂ ಕೊಂದನೆ? ಆ ಪಾಪಿ!"

"ಇಲ್ಲ ಪ್ರಭು!" ದೂತನು ದೈನ್ಯದಿಂದ ನುಡಿದನು; "ಕೊಲ್ಲಲಿಲ್ಲ; ಆದರೆ ಮಹಾರಾಣಿಯವರ ಮೈಮೇಲಿದ್ದ ಆಭರಣಗಳನ್ನು ಕಳಚಿಬಿಡುವಂತೆ ತನ್ನ ಸೇವಕರಿಗೆ ಆಜ್ಞಾಪಿಸಿದನು. ಅದು ಸಾಲದೆಂದು ಆಕೆಯ ಮೃದುವಾದ ಕಾಲುಗಳಿಗೆ ಕನಿಷ್ಠವಾದ ಕಬ್ಬಿಣದ ಸಂಕೋಲೆಯನ್ನು ತೊಡಿಸಿದನು; ಅನಂತರ ಒಬ್ಬ ಸಾಧಾರಣ ಕಳ್ಳನನ್ನು ತಳ್ಳುವ ಹಾಗೆ ಆಕೆಯನ್ನೊಂದು-ಅಸಹ್ಯಕರವಾದ ಕತ್ತಲು ಕೋಣೆಯಲ್ಲಿ ತಳ್ಳಿ, ಬೀಗ ಹಾಕಿಸಿದನು"

ರಾಜಸಹೋದರರಿಗೆ ಈ ಮಾತುಗಳನ್ನು ಕೇಳಿ ಶೋಕವು ಉಕ್ಕಿಬಂದಿತು. ಕ್ರೋಧಾಗ್ನಿಯಿಂದ ಬೆಂದ ಅವರು ಘರ್ಜಿಸಿದರು. ತಮ್ಮ ಪ್ರಿಯತಮ ಸಹೋದರಿಯ ಮೇಲೆ ಆ ಅಧಮ ದೇವಗುಪ್ತನು ನಡೆಸಿದ ಕ್ರೌರ್ಯ ಅತ್ಯಾಚಾರಗಳನ್ನು ನೆನೆಸಿದಾಗ ಅವರ ಹೃದಯಕ್ಕೆ ಕೆಂಡದಲ್ಲಿ ಕೆಂಪಗೆ ಕಾದ ಸಲಾಕಿಗಳಿಂದ ತಿವಿದಂತಾಯಿತು ಕೆಣಕಲ್ಪಟ್ಟ ಸಿಂಹದಂತೆ

ಘರ್ಜಿಸುತ್ತ ರಾಜ್ಯವರ್ಧನನು ಶಪಥ ಮಾಡಿದನು:

"ಅಧಮ ಕೊಲೆಗೇಡಿ! ಅಬಲೆಯ ಮೇಲೆ ಕೈ ಮಾಡಿದ ಈ ನೀಚ ಹೇಡಿ! ಈ ನರರಾಕ್ಷಸ! ಇವನನ್ನು ಎಲ್ಲಿದ್ದರೂ ಬೇಟೆಯಾಡಿ, ದರದರನೆ ಎಳೆತಂದು ಈ ಚಂಡಾಳನ ರುಂಡವನ್ನು ಚೆಂಡಾಡುವವರೆಗೂ ಬಿಡುವುದಿಲ್ಲ - ಪಾತಕಿ!"

ಶಪಥವನ್ನು ಮಾಡಿ ಒಂದರಕ್ಷಣ ಅಲ್ಲಿ ನಿಲ್ಲದೆ ಹಿರಿದಾದ ಸೈನ್ಯವೊಂದನ್ನು ತೆಗೆದುಕೊಂಡು ರಾಜ್ಯವರ್ಧನನು ಕನೌಜದ ಕಡೆ ಹೊರಟನು. ರಾಜ್ಯವರ್ಧನನು ತನ್ನ ಬಲವಾದ ಸೇನೆಯೊಂದಿಗೆ ತನ್ನನ್ನು ಬೇಟೆಯಾಡಲು ಬರುತ್ತಿರುವನೆಂದು ಕೇಳಿದೊಡನೆಯೆ ದೇವಗುಪ್ತನು ಕನೌಜದಿಂದ ಓಡಿ ಹೋದನು. ಆದರೆ ರಾಜಪುತ್ರನು ಅವನನ್ನು ಹಿಮ್ಮೆಟ್ಟಿ ಹಿಡಿದು, ಅವನ ಸೈನ್ಯವನ್ನು ಸೋಲಿಸಿ, ಪಾತಕಿಯ ಕೊರಳನ್ನೂ ಕಡಿದು ಹಾಕಿದನು ಅಷ್ಟುಮಾತ್ರವಲ್ಲ; ಆ ಕೊಲೆಪಾತಕನು ಕನೌಜದಿಂದ ಕೊಳ್ಳೆ ಹೊಡೆದು ತಂದ ಎಲ್ಲ ವಸ್ತು ವಸ್ತ್ರ ಆಭರಣಗಳನ್ನೂ ವಶಪಡಿಸಿಕೊಂಡನು.

ಮಾಳವದ ನೆರೆಯೂರಿನ ಅರಸನೂ ದೇವಗುಪ್ತನ ಆಪ್ತ ಸ್ನೇಹಿತನೂ ಆದ ಒಬ್ಬ ದುರುಳನು ಅವನ ಕೃತ್ರಿಮ ಕಾರ್ಯಗಳಿಗೆ ಸಹಾಯಕನಾಗಿದ್ದನು ತನ್ನ ಆಪ್ತಮಿತ್ರನಾದ ದೇವಗುಪ್ತನ ಕೊಲೆಯನ್ನು ಕೇಳಿ ಅವನು ಕ್ರೋಧಗೊಂಡು ಶತ್ರುವನ್ನು ಬಂಧಿಸಬೇಕೆಂದು ಒಂದು ಕೃತ್ರಿಮ ಸಂಧಾನವನ್ನು ಹೂಡಿದನು. ಅವನು ಉತ್ತಮ ವಸ್ತ್ರಾಭರಣಗಳನ್ನು ಒಬ್ಬ ದೂತನ ಕೈಯಲ್ಲಿ ಕೊಟ್ಟು 'ಇವುಗಳನ್ನು ರಾಜ್ಯವರ್ಧನ ಮಹಾರಾಜನಿಗೆ ನನ್ನ ವಂದನೆಗಳೊಂದಿಗೆ ಕಾಣಿಕೆಯಾಗಿ ಅರ್ಪಿಸು; ಅಲ್ಲದೆ ನನ್ನ ಬಿಡಾರದಲ್ಲಿ ಅವನು ಒಂದು ದಿನವಾದರೂ ತಂಗಿದ್ದು ನನ್ನ ಆತಿಥ್ಯವನ್ನು ಸ್ವೀಕರಿಸಬೇಕು ಎಂದು ಪ್ರಾರ್ಥಿಸು" ಎಂಬುದಾಗಿ ಹೇಳಿ ಕಳುಹಿಸಿದನು.

ರಾಜ್ಯವರ್ಧನನು ಘನವಂತ; ಗುಣಶಾಲಿ; ಉತ್ತಮ ನೀತಿಯನ್ನೂ ನಡತೆಯನ್ನೂ ಅರಿತ ಸದಾತ್ಮ. ದೇವಗುಪ್ತನ ದುರುಳ ಸ್ನೇಹಿತನು ದುರಾಲೋಚನೆ ಮಾಡುತ್ತಿರುವನೆಂದು ಅವನು ಸಂದೇಹಗೊಳ್ಳಲಿಲ್ಲ. ಕೆಲವೇ ಬೆಂಗಾವಲು ಜನರೊಂದಿಗೆ ದುರುಳನ ಬಿಡಾರಕ್ಕೆ ಹೋದನು.

ಉತ್ತಮವಾದ ಊಟ ಉಪಚಾರಗಳನ್ನು ಸ್ವೀಕರಿಸಿ ರಾಜ್ಯವರ್ಧನನು ನೆತ್ತನೆಯ ಹಾಸಿಗೆಯ ಮೇಲೆ ಮಲಗಿದ್ದಾಗ ಮದ್ಯಾಹ್ನ ವೇಳೆಯಲ್ಲಿ ಆ ಅಧಮ ಅಭ್ಯಾಗತನು ಅವನ ಮೇಲೆ ಬಿದ್ದು, ಅವನನ್ನು ಕತ್ತಿಯಿಂದ ತಿವಿದು ಕೊಂದುಹಾಕಿದನು.

ಸೇನಾಧಿಪತಿಯು ಈ ಘೋರವೂ ಸಂತಾಪಕರವೂ ಆದ ವಾರ್ತೆಯನ್ನು ಹರ್ಷಕುಮಾರನಿಗೆ ಮುಟ್ಟಿಸಿದನು. ಹರ್ಷವರ್ಧನನು ವ್ಯಸನಮಯ ವೃತ್ತಾಂತವನ್ನು ಕೇಳಿ ಮಗುವಿನಂತೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟನು. 'ಕೆಲವೇ ದಿನಗಳಲ್ಲಿ ಇಷ್ಟೊಂದು ವಿಪತ್ತುಗಳು ಒಂದರಮೇಲೊಂದು - ಯಾವ ಯುವಕನನ್ನು ಆವರಿಸಿ ವ್ಯಸನಗೊಳಿಸಿವೆ? ವೃದ್ಧ ಪಿತನ ಮರಣ! ಸಹೋದರಿಯ ಪತಿಯ ಮರಣ! ಸಹೋದರಿಯು ಕಾರಾಗೃಹದ ಕತ್ತಲು ಕೋಣೆಯಲ್ಲಿ – ಬೇಡಿಗಳಿಂದ ಬಂಧಿತಳಾಗಿ! ಪ್ರಿಯ ಸಹೋದರನು ವಂಚಕ ರೀತಿಯಿಂದ ಕೊಲೆಯಾದುದು! ಹಾಯ್! ಹಾಯ್! ಯಾವ ಧೀರನ ಎದೆಯು ಕುಗ್ಗಿಹೋಗದಿರದು? - ಈ ಸಂಕಟ ಪ್ರಕರಣಗಳಿಗೆ ಸಿಕ್ಕಿ'?

ತತ್‍ಕ್ಷಣವೇ ಹರ್ಷವರ್ಧನನು ತನ್ನಲ್ಲಿ ನಿರ್ಧಾರಮಾಡಿಕೊಂಡನು ಹೇಗಾದರೂ ತನ್ನ ಪ್ರಿಯ ಸಹೋದರಿಯನ್ನು ಬಂಧನದಿಂದ ಬಿಡುಗಡೆ ಮಾಡಬೇಕೆಂದು. ಅವಳನ್ನು ಹುಡುಕುತ್ತ ಅಲ್ಲಿಂದ ಹೊರಟನು. ಸ್ವಲ್ಪ ಕಾಲದಲ್ಲಿ ರಾಜ್ಯಶ್ರೀಯು ಪ್ರಯಾಸಪಟ್ಟು ಕಾರಾಗೃಹದಿಂದ ಹೇಗೋ ತಪ್ಪಿಸಿಕೊಂಡಳೆಂದೂ ವಿಂಧ್ಯ ಪರ್ವತದ ಕಡೆ ಓಡಿದಳೆಂದೂ ಹರ್ಷವರ್ಧನನಿಗೆ ತಿಳಿಯಿತು.

ಸುಂದರಳೂ ಮನೋಹರಳೂ ತರುಣಳೂ ಆದ ಮಹಾರಾಣಿ ರಾಜ್ಯಶ್ರೀ ಕಾರಾಗೃಹದ ಒಂದು ಕತ್ತಲು ಕೋಣೆಯಲ್ಲಿ ಬಂಧಿಸಲ್ಪಟ್ಟಿದ್ದಳಷ್ಟೆ. ಸೆರೆಮನೆಯಲ್ಲಿ ಅವಳ ಜೀವನವು ಶೋಕಸಂಕಟಗಳಿಂದ ಕೂಡಿತ್ತು. ಅಲ್ಲಿದ್ದಂತೆ ಅವಳು ತನ್ನ ಪ್ರೀತಿಯ ಸಹೋದರರನ್ನು ಕುರಿತು ಯೋಚಿಸುತ್ತಿದ್ದಳು ಆದರೆ ಅವರ ಸಮಾಚಾರವನ್ನೇ ಅವಳಿಗೆ ಹೇಳುವವರಿರಲಿಲ್ಲ. ಇನ್ನಾರ ಸಹಾಯವನ್ನು ಅವಳು ಎದುರುನೋಡುವಂತಿದ್ದಿತ್ತು?

ಪತಿವಿಯೋಗದಿಂದ ಬಳಲಿ ಬೆಂಡಾದ ರಾಜ್ಯಶ್ರೀಯು "ಪೃಥ್ವಿಯಲ್ಲಿ ನನಗಿನ್ನಾವ ಸುಖವು ಉಳಿದಿದೆ? ಪತಿವಿಹೀನೆಯಾದ ನಾನು ಇನ್ನು ಅ

ವಿಗೆ ಹೋಗಿ -ಅರಿಶಿನ ವಸ್ತ್ರಗಳನ್ನು ತೊಟ್ಟು - ಬುದ್ಧ ಭಿಕ್ಷುಣಿಯಾಗಿ, ಶಾಂತಚಿತ್ತಳಾಗಬೇಕು. ಸದಾ ಭಗವಂತನ ಕರುಣೆಗಾಗಿ ಪ್ರಾರ್ಥಿಸಬೇಕು" ಎಂದು ತೀರ್ಮಾನಿಸಿದಳು. ಹೀಗೆಂದು ನಿರ್ಧಾರಮಾಡಿ ಅವಳು ನಂಬಿಕೆಗೆ ಪಾತ್ರರಾದ ಹಲ ಸೇವಕಿಯರೊಂದಿಗೆ ಬಂಧನದಿಂದ ಪಾರಾಗಿ ನಗರದಿಂದ ಹೊರಬಿದ್ದಳು.

ಹಗಲು ಹೊತ್ತು ಎಲ್ಲಾದರೂ ಅವಿತುಕೊಂಡಿದ್ದು ರಾತ್ರಿ ಹೊತ್ತು ಸಂಚಾರ ಮಾಡುತ್ತ ಹಲವಾರು ದಿನಗಳ ನಂತರ ಅವರು ವಿಂಧ್ಯಪರ್ವತದ ಬಳಿ ಇರುವ ಕಾಡನ್ನು ಸೇರಿದರು. ಅಡವಿಯನ್ನು ಹೊಕ್ಕು ಅವರು ಮೆಲ್ಲ ಮೆಲ್ಲನೆ ಮುಂದೆ ನಡೆದರು ಅವರಿಗೆ ದಾರಿ ತೋರಿಸಲು ಮನುಷ್ಯರ ಒಂದೇ ಒಂದು ಹೆಜ್ಜೆಯ ಗುರುತಾದರೂ ಅಲ್ಲಿ ಇರಲಿಲ್ಲ. ಅಷ್ಟೊಂದು ನಿರ್ಜನವಾದ ಪ್ರದೇಶವದು ಮುಂದೆ ಮುಂದೆ ನಡೆದು ಅವರು 'ಸಬಾರ ಎಂಬ ಕಾಡುಜನರು ವಾಸಿಸುವ ಒಂದು ಹಳ್ಳಿಗೆ ಬಂದರು.

ಸಹಾಯಹೀನರಾದ ಈ ಅಬಲೆಯರು ಆ ಘೋರಾರಣ್ಯದಲ್ಲಿ ಹೇಗೋ ನುಸುಳಿಕೊಂಡು ನಡೆದರು. ಅಲ್ಲೊಂದು ಆಶ್ರಮವಿತ್ತು. ನೂರಾರು ಜನರು ಅಲ್ಲಿ ದೇವರಿಗೆ ಅರ್ಪಣೆ ಮಾಡುವುದಕ್ಕಾಗಿ ಬಂದು ನೆರೆದಿದ್ದರು. ಆ ಯಾತ್ರಾರ್ಥಿಗಳು ರಾಜ್ಯಶ್ರೀಗೆ ಹೇಳಿದರು: "ಅಮ್ಮಾ! ಇಲ್ಲಿಂದ ದಕ್ಷಿಣಕ್ಕೆ ನೂರು ಮೈಲಿನಾಚೆ ಬೌದ್ಧ ಸನ್ಯಾಸಿಗಳು ವಾಸಿಸುವ ಒಂದು ಅಗ್ರಹಾರವಿದೆ" ಎಂದು.

ಆ ಸ್ಥಳವನ್ನು ಕುರಿತು ದಣಿದ ಆ ತರುಣಿಯರು ತಮ್ಮ ಪ್ರಯಾಣ ವನ್ನು ಮುಂದುವರಿಸಿದರು. ಅರಣ್ಯವು ಈಗ ಇನ್ನೂ ದಟ್ಟವಾಗತೊಡಗಿತು. ಕಾಲುಹಾದಿಯೂ ಸಹ ಸರಿಯಾಗಿ ಕಾಣದಂತೆ ಎರಡೂ ಕಡೆಗಳಲ್ಲಿ ಪೊದೆ ಗಳು ಬೆಳೆದುಬಿಟ್ಟಿದ್ದುವು. ಆನೆ, ಹುಲಿ, ಮುಂತಾದ ದುಷ್ಟ ಮೃಗಗಳು ಬೇರೆ ಅಲ್ಲಲ್ಲಿ ಅರ್ಭಟಿಸುತ್ತಿದ್ದುವು. ಮಧ್ಯೆ ಮಧ್ಯೆ ಚಿರತೆಗಳ ಘರ್ಜನೆ ಬೇರೆ ಕೇಳಿಬರುತ್ತಿತ್ತು. ಅಲ್ಲಲ್ಲಿ ಹಾವುಗಳು ಬುಸುಗುಟ್ಟಿಕೊಂಡು ಹಾರಾ ಡುತ್ತಿದ್ದುವು. ಅಬಲೆಯರಿಗೆ ಹಿಂದೂಮುಂದು ಕಾಣದೆ ಅವರು ಭಯಾ ನ್ವಿತರಾದರು. ಆಗ ಸಮೀಪದಲ್ಲಿ ಅಲ್ಲೊಂದು ಕಾಡುಮನುಷ್ಯರ ಹಳ್ಳಿ ಇತ್ತು. ಅಲ್ಲೊಬ್ಬ ಬೇಡ ರಾಜ್ಯಶ್ರೀಯ ವೃತ್ತಾಂತವನ್ನು ಕೇಳಿ ಕಣ್ಣೀರು

ಸುರಿಸಿದನು.

"ಅಮ್ಮ ನಿಮ್ಮ ಹಿರಿಯಣ್ಣನು ಮಾಳವದ ಅರಸನಾದ ದೇವಗುಪ್ತ ನನ್ನು ಸೋಲಿಸಿ ಕೊಂದನು. ದೇವಗುಪ್ತನ ಮರಣವನ್ನು ಕೇಳಿ ಅವನ ದುಗುಳ ಮಿತ್ರನು ಕೋಪಗೊಂಡು ನಿಮ್ಮ ಅಣ್ಣನನ್ನು ಕೃತ್ರಿಮದಿಂದ ಕೊಲೆ ಮಾಡಿದನು ನೀವಿನ್ನು ಈ ಅರಣ್ಯದ ಒಳಹೊಕ್ಕು ಹೋಗಿ. ನಿಮ್ಮ ಶತ್ರುಗಳಿಂದ ದೂರವಾಗಿಯೇ ಇರಿ" ಎಂದನು ಕನಿಕರದಿಂದ. ಅಣ್ಣನು ಕೊಲೆಯಾದುದನ್ನು ಕೇಳಿ ರಾಜ್ಯಶ್ರೀಯು ದುಃಖಾಕ್ರಾಂತಳಾದಳು.

ಆದರೆ ಧೈರ್ಯವನ್ನು ಕೆಡಿಸಿಕೊಳ್ಳದೆ ಅವಳು ತನ್ನ ಸೇವಕಿಯ ರೊಂದಿಗೆ ದಟ್ಟವಾದ ಕಾಡಿನಲ್ಲಿ ಮುಂದೆ ಮುಂದೆ ನಡೆದಳು. ಅವರೆಲ್ಲರೂ ಮಾರ್ಗದಲ್ಲಿ ತಮಗೆ ದೊರೆತ ಕಂದಮೂಲಗಳನ್ನೂ ಹಣ್ಣುಹಂಪಲುಗಳನ್ನೂ ತಿಂದು ತೃಪ್ತಿಗೊಂಡಿರುತ್ತಿದ್ದರು. ರಾತ್ರಿಯೆಲ್ಲ ಸುತ್ತಲೂ ಬೆಂಕಿಹೊತ್ತಿಸಿ ಮರ ದಡಿ ಮಲಗುತ್ತಿದ್ದರು. ದಿನಗಳು ಕಳೆದಂತೆಲ್ಲ ಅವರ ಆಯಾಸವು ಅಧಿಕರಿಸಿತು. ನಿತ್ಯಸೇವೆಯ ಅವರ ಕಾಲುಗಳು ಮುಳ್ಳುಗಳನ್ನು ತುಳಿದು ತುಳಿದು ನೋಯು ತ್ತಿದ್ದುವು. ಅಲ್ಲಲ್ಲಿ ಕಲ್ಲುಮುಳ್ಳುಗಳಿಂದ ಕಾಲು ಕಿತ್ತುಹೋಗಿ ರಕ್ತವು ಸೋರುತ್ತಿತ್ತು.

"ಪ್ರಿಯ ಸಹೋದರಿಯರೇ !" ಪರ್ಣಕುಟೀರದಲ್ಲಿ ಕುಳಿತು ಒಂದು ದಿನ ರಾತ್ರಿ ರಾಜ್ಯಶ್ರೀಯು ಹೇಳಿದಳು ; "ದೇವರ ಕೃಪೆಯಿಂದ - ನಿಮ್ಮೆಲ್ಲರ ಸಹಾಯದಿಂದ - ನಾವು ಇಷ್ಟು ದೂರ ಬಂದು ಸೇರಿದೆವು. ಆದರೆ ಇದ ರಿಂದಾದ ಪ್ರಯೋಜನವೇನು ? ನಾನು ನಿಮಗೆ ಕೊಡಬಾರದ ಕಷ್ಟಗಳನ್ನೆಲ್ಲ ಕೊಟ್ಟೆನು."

"ಹೇ ದಯಾಳು ರಾಜಕುಮಾರಿ !" ಅವರಲ್ಲೊಬ್ಬ ಸಖಿ ಹೇಳಿದಳು. "ಹಾಗೆಲ್ಲ ಹೇಳಬೇಡ; ನಿನಗೆ ಅಲ್ಪಮಾತ್ರವಾದರೂ ನಾವು ಸೇವೆ ನೀಡಬಲ್ಲವ ರಾದರೆ - ನಮ್ಮ ಕಷ್ಟಗಳು ತೃಣಸಮಾನವಾದುವು. ಇದಕ್ಕೆ ನೀನು ದುಃಖಿಸು ವುದೇಕೆ ? ಇಂತಹ ಕಷ್ಟಕಾಲದಲ್ಲೂ ನಾವು ನಿನಗೆ ನೆರವಾಗದಿದ್ದರೆ ನಾವ ಬದುಕಿ ಫಲವೇನು ?"

"ಆದರೆ ಸಖಿಯರೆ! ಈತೆರನೆ ಎಷ್ಟುಕಾಲ ಕಷ್ಟವನ್ನು ಸಹಿಸಲಾದೀತು" ಅತ್ಯಂತ ಸಂಕಟದಿಂದ ರಾಜಕುಮಾರಿಯು ಹೇಳಿದಳು; "ಇದಕ್ಕೆ ಕೊ ಯೆಲ್ಲಿ ?"

ಯೆಲ್ಲಿ ?

"ಆದರೆ ನಿನ್ನ ಕಿರಿಯಣ್ಣ ನೀನು ಬಂಧನದಿಂದ ಹೊರಗಾದುದನ್ನು ಈ ವೇಳೆಗೆ ಕೇಳಿ ತಿಳಿದುಕೊಂಡಿರಬೇಕು. ಈಗಲೂ ಅವನು ನಿನ್ನನ್ನು ಇದೇ ಮಾರ್ಗವಾಗಿ ಹುಡುಕಿಕೊಂಡು ಬರುತ್ತಿರಬೇಕು - ಎಂಬುದೇ ನನ್ನ ಊಹೆ" ಒಬ್ಬ ಸಖಿಯು ಹೇಳಿದಳು.

"ನನಗೆ ನಂಬಿಕೆಯಿಲ್ಲ; ಅವನು ನನ್ನನ್ನು ರಕ್ಷಿಸುವುದಕ್ಕೆ ಬಂದಾನೆಂಬ ನಿರೀಕ್ಷಣೆ ನನಗಿಲ್ಲ. ನನ್ನ ಸಹನೆಯು ಕುಂದುತ್ತಿದೆ. ಇನ್ನು ಮೇಲೆ ಪ್ರಾಣದಿಂದಿರಬೇಕೆಂಬ ಆಸೆಯೂ ನನಗಿಲ್ಲ".

"ಈಗ ಹೊರಬಿದ್ದ ಮಾತುಗಳನ್ನು ನೀನಾಡಲಿಲ್ಲ ರಾಜಕುಮಾರಿ! ದುರ್ಭರವಾದ ನಿನ್ನ ಸಂಕಟವು ಆ ಮಾತುಗಳನ್ನು ಆಡಿಸಿದವು -- ಅಷ್ಟೆ" ರಾಜಕುಮಾರಿಯನ್ನು ಸಂತೈಸಲೋಸುಗ ಮತ್ತೊಬ್ಬ ಸಖಿ ಹೇಳಿದಳು.

"ಅದು ಹೇಗಾದರೂ ಇರಲಿ", ರಾಜಕುಮಾರಿ ದೃಢವಾಗಿ ಹೇಳಿದಳು; "ಇನ್ನೊಂದು ವಾರದಲ್ಲಿ ಹರ್ಷವರ್ಧನನ ವೃತ್ತಾಂತವನ್ನು ಕಿವಿಯಾರ ಕೇಳದಿದ್ದರೆ ನಾನು ಅಗ್ನಿ ಕುಂಡದಲ್ಲಿ ಬಿದ್ದು ಪಾಪಿ ಪ್ರಾಣವನ್ನು ತೊರೆಯುವುದೇ ನಿಶ್ಚಯ".

ಹರ್ಷವರ್ಧನನು ಈಗ ಸ್ಥಾಣೇಶ್ವರದ ಅರಸನಾಗಿದ್ದನು. ಅವನಂತಹ ಉತ್ತಮ ಪ್ರೀತಿಪಾತ್ರ ಸಹೋದರನನ್ನು ಕಾಣುವುದು ಅಪೂರ್ವ. ರಾಜ್ಯಾಭಿಷಿಕ್ತನಾದೊಡನೆಯೇ ಅವನು ಮೊದಲು ಕೈಕೊಂಡ ಕಾರ್ಯವೆಂದರೆ ವಿಂಧ್ಯಾರಣ್ಯಕ್ಕೆ ಹೊರಟು ತನ್ನ ಪ್ರೇಮಮಯ ಸಹೋದರಿಯನ್ನು ಹುಡುಕುವುದು. ಅರಣ್ಯದಲ್ಲಿ ಅವಳೆಲ್ಲಿ ಅಡಗಿಕೊಂಡಿದ್ದರೂ ಅವಳನ್ನು ಹುಡುಕಿ ಕರೆತರುವುದೇ ತನ್ನ ಪ್ರಥಮ ಕರ್ತವ್ಯವೆಂದು ಅವನು ಸಂಕಲ್ಪಿಸಿದನು. ತನ್ನ ಅಣ್ಣನನ್ನು ಕೃತ್ರಿಮದಿಂದ ಕೊಂದ ಅಧಮನನ್ನು ಶಿಕ್ಷಿಸುವುದಕ್ಕೆ ಸೈನ್ಯವೊಂದನ್ನು ಕಳುಹಿಸಿಕೊಟ್ಟನು. ನಾಲ್ಕು ದಿಕ್ಕುಗಳಿಗೂ ರಾಜ್ಯಶ್ರೀಯ ಸಮಾಚಾರವನ್ನು ತಿಳಿದು ಬರುವುದಕ್ಕೆ ದೂತರನ್ನು ಅಟ್ಟಿದನು. ತಾನೇ ಒಂದು ಪರಿವಾರದೊಡನೆ ದಕ್ಷಿಣದ ಕಡೆ ಸಹೋದರಿಯನ್ನು ಹುಡುಕುತ್ತ ಹೊರಟನು.

ಬಹಳ ದಿನ ಅವರು ಪ್ರಯಾಣ ಮಾಡಿದರು. ಆದರೆ ಎಷ್ಟೋ ದಿನಗಳು ಕಳೆದರೂ ಅವರಿಗೊಬ್ಬ ಮನುಷ್ಯನೂ ಇದಿರಾಗಲಿಲ್ಲ. ಅವರು ನಡೆದ ದಾರಿಯಲ್ಲಿ ಮನುಷ್ಯನ ಒಂದೇ ಒಂದು ಹೆಜ್ಜೆಯ ಗುರುತಾದರೂ ಅವರ ಕಣ್ಣಿಗೆ ಬೀಳಲಿಲ್ಲ. ಕೊನೆಗೆ ಸ್ನೇಹಪರರಾದ ಕೆಲವು ಕಾಡು ಜನರು ಗುಂಪಾಗಿ ಹರ್ಷವರ್ಧನನಿಗೆ ಅರಣ್ಯದ ದಟ್ಟವಾದ ಪ್ರದೇಶದಲ್ಲಿ ದಾರಿ ತೋರಿಕೊಟ್ಟರು.

ಒಂದು ದಿನ ರಾತ್ರಿ ಅರಣ್ಯಮಧ್ಯದಲ್ಲಿ ಗಿಡಮರಗಳ ಗುಂಪಿನ ನಡುವಿನಲ್ಲಿ ಬೆಂಕಿಯು ಹತ್ತಿ ಉರಿಯುತ್ತಿದ್ದುದನ್ನು ಅವರು ಕಂಡರು. ಬೆಂಕಿಯ ಬಳಿ ಸಾರಿದಾಗ ಅಪರಿಚಿತ ಧ್ವನಿಗಳಲ್ಲಿ, ತಮ್ಮದಲ್ಲದ ಭಾಷೆಯನ್ನು ಯಾರೋ ಮಾತನಾಡುತ್ತಿದ್ದಂತೆ ಕೇಳಿಸಿತು. ಕಪ್ಪನೆಯ ಅಡವಿ ಮನುಷ್ಯರು – ಮಿತಿಮಿಂಚಿ ಕುಡಿದು – ಮೈಮರೆತು – ಬೆಂಕಿಯಸುತ್ತ ಪ್ರಳಯ ನೃತ್ಯವನ್ನು ಮಾಡುತ್ತಿದ್ದರು. ಹರ್ಷಮಹಾರಾಜನು ಅವರ ಬಳಿ ಸಾರಿ ಅವರನ್ನು ವಿಚಾರಿಸಿದನು. ಕಣ್ಮರೆಯಾದ ತನ್ನ ಸಹೋದರಿಯ ವಿಚಾರವಾಗಿ ಅವರಿಂದ ಕೆಲ ಸಂಗತಿಗಳು ತಿಳಿದು ಬಂದುವು. ಕೆಲವಾರು ದಿನಗಳ ಮುನ್ನ ರಾಜಕುಮಾರಿಯನ್ನು ಬಲಹೀನ ಮತ್ತು ನಚ್ಚಿಕೆಗೆ ಅರ್ಹವಲ್ಲದ ಸ್ಥಿತಿಯಲ್ಲಿ ನೋಡಿದುದಾಗಿ ಅವರು ಹೇಳಿದರು.

ಹರ್ಷನಿಗೆ ಈಗ ಭಯವೂ ಚಿಂತೆಯೂ ಮಿತಿಮಿಂಚಿ ಅಧಿಕರಿಸಿತು. ಕಾಡುಮನುಷ್ಯರ ಒಡೆಯನನ್ನು ಕುರಿತು ಅವನಿಗೆ “ಇದೊ ಹಿಡಿ; ನಿನಗೆ ಬೇಕಾದಷ್ಟು ಹೊನ್ನು ಹಿಡಿ. ನನ್ನ ತಂಗಿ ಹೋದ ದಾರಿಯನ್ನು ನನಗೆ ತೋರಿಸು ಎಂದನು. ಅವನು ಹರ್ಷಿತನಾಗಿ ತನ್ನ ಗುಂಪನ್ನು ಕಟ್ಟಿಕೊಂಡು ಹರ್ಷಮಹಾರಾಜನಿಗೆ ದಾರಿ ತೋರಿಸಿದನು. ಅಡವಿಯ ದುಷ್ಟ ಮೃಗಗಳನ್ನು ಹೆದರಿಸಿ ಅಟ್ಟುವದಕ್ಕಾಗಿ ಕಾಡುಜನರು ಕೈಯಲ್ಲಿ ಉರಿಯುವ ದೀವಟಿಗೆಗಳನ್ನು ಹಿಡಿದು ಆ ರಾತ್ರಿಯೆಲ್ಲಾ ದಾರಿ ನಡೆದರು.

ಆಗ ತಾನೆ ಬೆಳಕು ಹರಿಯುವದರಲ್ಲಿತ್ತು. ಅರಣ್ಯದ ಅಲ್ಲೊಂದು ಭಾಗದಲ್ಲಿ ಗಿಡಮರಗಳಾವೂ ಇಲ್ಲದ ಒಂದು ಸಣ್ಣ ಮೈದಾನವೂ ಕಾಣಿಸಿತು.



ನಿಲ್ಲು! ತಡೆ! ದುಡುಕಬೇಡ..........ನನ್ನ ಪ್ರಿಯ ಸಹೋದರಿ!"

ಅಲ್ಲೊಂದು ಕಡೆ ಹರಡಿದ ಬೆಂಕಿಯು ಹತ್ತಿ ಉರಿಯುತ್ತಿತ್ತು. ಆ ಅಗ್ನಿ ಕುಂಡದಿಂದ ಮೇಲೆದ್ದು ಪ್ರಜ್ವಲಿಸುತ್ತಿದ್ದ ಉರಿಯಿಂದ ಬೆಳಕುಂಟಾಗಿ ಸುತ್ತಮುತ್ತಲಿನ ಗಿಡಮರಗಳು - ಪೊದೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಹಾಯ್! ಏನು ಅದ್ಭುತ ದೃಶ್ಯವಿದು! ಹಲ ತರುಣಿಯರ ಸುಂದರ ಸ್ವರೂಪ ಗಳು ಕಾಣಬರುತಿದ್ದವು. ಅವರು ಕೇಶರಾಶಿಯನ್ನು ಕೆದರಿ ಎದೆಯನ್ನು ಕುಟ್ಟಿಕೊಂಡು - ಗಟ್ಟಿಯಾಗಿ ಅಳುತ್ತಾ ಕುಳಿತಿದ್ದರು.

'ಕೈಮಿಂಚಿ ಹೋಗಬಹುದು' ಎನ್ನುತ್ತಾ ಹರ್ಷನೂ ಅವನ ಪರಿವಾರ ದವರೂ ಬೇಗ ಬೇಗ ಅತ್ತಕಡೆ ಓಡಿದರು! ಆ ಕೋಮಲ ಶ್ವೇತವರ್ಣ ತರುಣಿಯರ ನಡುವೆ ರಾಜಕುಮಾರಿಯು ನಿಂತಿದ್ದಳು; ಅವಳ ಸುಕೋಮಲ ವದನವು ಸಂಕಟದಿಂದ ಕಂಗೆಟ್ಟು ಕಾಂತಿಹೀನವಾಗಿತ್ತು. ಅವಳು ಉಕ್ಕಿ ಬರುವ ತನ್ನ ದುಃಖವನ್ನು ತಡೆದುಕೊಳ್ಳುತಿದ್ದಳು. ಮೆಲ್ಲಮೆಲ್ಲನೆ ಅವಳು ಅಗ್ನಿಕುಂಡದ ಕಡೆ ಕಾಲಿತ್ತಿಟ್ಟು ನಡೆಯುತಿದ್ದಳು. ಇನ್ನೇನು ರಾಜಶ್ರೀಯು ಕುಂಡದಲ್ಲಿ ಧುಮುಕಿ ಅಗ್ನಿ ಭಗವಾನನಿಗೆ ಆಹುತಿಯಾಗುವುದರಲ್ಲಿದ್ದಳು. ಉತ್ತಮ 'ಸತಿ'ಯಂತೆ ತಾನೂ ಅಗ್ನಿಪ್ರವೇಶ ಮಾಡಿ ತನ್ನ ಪ್ರಿಯತಮ ಹೃದಯೇಶ್ವರನನ್ನು ಪರಲೋಕದಲ್ಲಿ ಸೇರಿಸಿಕೊಳ್ಳುವುದರಲ್ಲಿದ್ದಳು.

"ನಿಲ್ಲು! ತಡೆ! ದುಡುಕಬೇಡ! ಇದೋ ಬಂದೆ! ನನ್ನ ಪ್ರಿಯ ಸಹೋದರಿ! ರಾಜ್ಯಶ್ರೀ ...... ತಡೆ-ತಡೆ ...." ಎಂದು ಕೂಗುತ್ತ ಹರ್ಷವರ್ಧನನು ಅಗ್ನಿಕುಂಡದ ಕಡೆ ಓಡಿದನು. ಮರುಕ್ಷಣದಲ್ಲಿಯೇ ರಾಜ್ಯಶ್ರೀಯು ತನ್ನ ಸಹೋದರನನ್ನು ತಬ್ಬಿಕೊಂಡು ಮೂರ್ಛಿತಳಾಗಿದ್ದಳು. ಸಾವಿನ ದವಡೆಗಳಿಂದ ಹರ್ಷನು ತನ್ನ ಪ್ರಿಯ ಸಹೋದರಿಯ ಪ್ರಾಣವನ್ನು ರಕ್ಷಿಸಿದನು. ರಾಜ್ಯಶ್ರೀ ಕಣ್ದೆರೆದು ನೋಡಿದಾಗ ಅವಳು ತನ್ನ ಪ್ರೀತಿಪಾತ್ರ ಅಣ್ಣನ ಮಡಿಲಲ್ಲಿ ತಲೆಯಿಟ್ಟು ಮಲಗಿದ್ದಳು. ಅಣ್ಣನನ್ನು ನೋಡಿ ನೋಡಿ ಅವಳು ಆನಂದಾಶ್ರುಗಳನ್ನು ಸುರಿಸಿದಳು.

ಸೋದರ ಸೋದರಿಯರು ಪರಮಾತ್ಮನ ಕರುಣೆಯನ್ನು ಕೊಂಡಾಡುತ್ತಾ ಕುದುರೆಗಳನ್ನು ಹತ್ತಿ ನಗರದ ಕಡೆ ನಡೆದರು.